Mr. SPEAKER.—Now, the discussion on the Tenancy Amendment Bill will continue.

Sri A. BHEEMAPPA NAIK.–Will the Public Service Commission Report be taken up for discussion, and if so when?

Sri Kadidal MANJAPPA.—There is no provision for discussing the Report. It has to be laid on the Table of the House and that has been done.

Sri A. BHEEMAPPA NAIK.—I just said that I can move for discussion of this Report.

Mr. SPEAKER.—If any Hon'ble Member wants to move a motion, then there is a procedure laid down for that and according to that procedure you will have to send a written motion for discussion.

Sri A. BHEEMAPPA NAIK.—After it is laid on the Table, any Member is authorised to request that the Report be taken up for discussion.

Mr. SPEAKER.—Not now.

MYSORE TENANCY (SECOND AMENDMENT) BILL, 1954 (*contd.*)

Motion to consider.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ ಅನುಸೂಚಿತ ಜಾತಿಗಳು).—ಇದುವರೆಗೆ ಎರಡು ಅಂಶಗಳನ್ನು ಈ ಸಭೆಯ ಮುಂದೆ ಪ್ರಸ್ತಾಪಿಸಿದ್ದೇನೆ. ಒಂದು Permissible Holdings ವಿಚಾರ. ಎರಡನೆಯದು ಮಾಲೀಕರು ಎಷ್ಟರಮಟ್ಟಿಗೆ ಜಮೀನನ್ನು ಹೊಂದಲು ಈ ಕಾನೂನಿನ ಪ್ರಕಾರ ಹಕ್ಕಿದೆ ಎನ್ನತಕ್ಕಂಥಾದ್ದು. ಯಾವ ಒಂದು ಮಸೂದೆಯೇ ಆಗಲಿ ರೈತರ ಹಿತದೃಷ್ಟಿಯಿಂದ ಅದು ರೈತರಿಗೆ ಎಷ್ಟರಮಟ್ಟಿಗೆ ಉಪಯೋಗವಾಗುತ್ತದೆ ಎನ್ನತಕ್ಕಂಥಾದ್ದು ನಾವು ಯೋಚಿಸಬೇಕಾದ್ದು ಮುಖ್ಯ ವಿಚಾರ. ಸ್ವಾಮಿ, ಈ ಮಸೂದೆಯಲ್ಲಿ ಎಂಟು ಪಲ್ಲ ಫಸಲು ಬರತಕ್ಕಂಥ ಜಮೀನು ಒಂದು ಎಕರೆಗೆ ಸಮ ಎಂದು ಲೆಖ್ಖ ಹಾಕಿ ಒಬ್ಬ ವ್ಯಕ್ತಿಗೆ ಅಂಥ 25 ಎಕರೆಗಳಿರಬಹುದು ಅಥವಾ ಒಂದು ಕುಟುಂಬಕ್ಕೆ 100 ಎಕರೆಗಳ ಪರಿಮಿತಿವರೆಗೆ ಜಮೀನು ಇರಬಹುದೆಂದು ಹೇಳಿದ್ದಾರೆ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಎಂಟು ಪಲ್ಲ ಬರತಕ್ಕದ್ದಲ್ಲ. ಎಂಟು ಪಲ್ಲ ಬೆಳೆಯತಕ್ಕದ್ದು.

Sri B. T. KEMPARAJ.—"Provisions shall be applicable for purposes of determining the standard acre of land and for computing the extent of any class of land in terms of standard acres:—

(1) The standard acre of land, in the case of:

(*a*) dry land is that extent of land which has an annual productive capacity of eight pallas of ragi" ಆದುದರಿಂದ ಎಂಟು ಪಲ್ಲ ಬೆಳೆಯುತಕ್ಕಂಥ ಜಮೀನಿನ ವಿಸ್ತೀರ್ಣ ಒಂದು ಎಕರೆ, ಎಂಟು ಪಲ್ಲ ಬೆಳೆಯುತಕ್ಕಂಥ ಪರಮಾವಧಿ ಉಳ್ಳಂತ ಜಮೀನಿನ ವಿಸ್ತೀರ್ಣ one standard acreಗೆ ಸಮವೆಂದು ನಿರ್ಧರಿಸಿದೆ. ಎಂಟು ಪಲ್ಲ ಬರತಕ್ಕದ್ದು ಎಂದರೆ ಎಂಟು ಪಲ್ಲ ಬೆಳೆಯುತಕ್ಕಂತ ಜಮೀನು, ಎಂದರೆ, ಎಂಟು ಪಲ್ಲ ಫಸಲು ಯಾವ ಜಮೀನು ಮಾಲೀಕರಿಗೆ ಬರುತ್ತದೋ ಅಂಥಾದ್ದು ಒಂದು standard ಎಕರೆ ಎಂದು ಕರೆಯುತ್ತೇವೆ. ಇದರಲ್ಲಿ ಎಂಟು ಪಲ್ಲ ಬೆಳೆ, ಬೆಳೆಯುತಕ್ಕಂಥಾದ್ದು ಮತ್ತು ಫಸಲು ರೂಢಿಸಿಕೊಳ್ಳತಕ್ಕಂಥಾದ್ದು ಎರಡೂ ಒಂದೇ ಆಗಿರುವುದರಿಂದ ಇದರಲ್ಲಿ ಎರಡು ಅರ್ಥಗಳನ್ನು ಖಂಡಿತವಾಗಿಯೂ ಕಲ್ಪಿಸತಕ್ಕಂಥಾದ್ದು ಸಾಧುವಾದುದಲ್ಲ.

ಶ್ರೀ ಎ. ಭೀಮಪ್ಪನಾಯಕ್.—On a point of order. ಜಮೀನುದಾರರಿಗೆ ಬರುವುದು ಬೇರೆ. ಕೋರುಮಾಡುವವರು ಜಮೀನಿನಲ್ಲಿ ಬೆಳೆಯುವುದು ಬೇರೆ. ಕೋರುದಾರರು ಎಂಟು ಪಲ್ಲ ಬೆಳೆದರೆ ಜಮೀನ್ದಾರರಿಗೆ ಬರುವುದು ಅದರ ಅರ್ಧ ಅಂದರೆ ನಾಲ್ಕು ಪಲ್ಲ ಮಾತ್ರ. ಒಬ್ಬ ಜಮೀನ್ದಾರನಿಗೆ ಬರತಕ್ಕದ್ದೇ ಅಥವಾ ಜಮೀನಿನಲ್ಲಿ ಬೆಳೆಯುತಕ್ಕದ್ದೇ ಎಂದು ನಾನು ಕೇಳಿದೆ.

ಶ್ರೀ ಬಿ. ಟಿ. ಕೆಂಪರಾಜ್.—Chapter 1-A Section 2-Cನಲ್ಲಿ Permissible Holdings ವಿಚಾರ ಹೇಳಿದ್ದಾರೆ. ಅದು ಹೀಗಿದೆ "The Permissible Holding in respect of one person shall be an extent of arable land equal to 25 standard acres:

Provided that where land is held by a person on behalf of himself and the other members of his family who are legally entitled to such land, the permissible holding shall be the extent of arable land determined on the basis of twenty-five standard acres per each member of the family subject to the condition that the total extent shall not in any case exceed one hundred standard acres" ಆದುದರಿಂದ ನಮ್ಮ ಶ್ರೀಮಾನ್ ಎ. ಭೀಮಪ್ಪನಾಯಕರು ಗೇಣೀದಾರನು ಮಾಡತಕ್ಕಂಥ ಜಮೀನಿನಲ್ಲಿ ಎಂಟು ಪಲ್ಲ ಧಾನ್ಯ ಬರತಕ್ಕ ಜಮೀನು ಒಂದು ಎಕರೆಗೆ ಸಮ ಎಂಬುದಾಗಿ ಲೆಖ್ಖ ಹಾಕಬೇಕೆಂದು ಹೇಳಿದರು. ಸ್ವತಃ ವ್ಯವಸಾಯ ಮಾಡತಕ್ಕ ವ್ಯಕ್ತಿಗೆ ಇದು ಲೆಖ್ಖಕ್ಕೆ ಬರುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—It is a misinterpretation. ಬೆಳೆಯುವುದು ಎಂಟು ಪಲ್ಲ ಆದರೆ ಜಮೀನ್ದಾರನಿಗೆ ಬರುವುದು ನಾಲ್ಕು ಪಲ್ಲ ಎಂದು ಹೇಳಿದೆ.

ಶ್ರೀ ಬಿ. ಟಿ. ಕೆಂಪರಾಜ್.—ಅದು ಹೇಗಾದರೂ ಆಗಲಿ, 100 ಎಕರೆಗಳ ಮೇಲ್ಪಟ್ಟು 150 ಎಕರೆಗಳ ವರೆಗೆ ಈ ಕಾನೂನು ಪ್ರಕಾರವಿರಲು ಸಾಧ್ಯವಿದೆ. ಅದೇ ರೀತಿಯಾಗಿ ಒಂದು ಸಂಸಾರಕ್ಕೆ 800 ಎಕರೆಗಳ ವರೆಗೆ ಇರಲು ಅವಕಾಶವಿದೆ.

Sri Kadidal MANJAPPA (Minister for Revenue and Public Works).—I want certain clarification. How does it become 150 acres or 800 acres?

ಶ್ರೀ ಬಿ. ಟಿ. ಕೆಂಪರಾಜ್.—ನಮ್ಮ ತಾಲ್ಲೂಕಿನಲ್ಲಿ ಸರಿಯಾದ ಮಳೆ ಬಾರದೆ ಇರುವ ಕಾಲದಲ್ಲಿ ಸರಾಸರಿ ಒಂದು ಎಕರೆಗೆ 1½ ಪಲ್ಲ 2 ಪಲ್ಲದವರೆಗೆ ರಾಗಿ ಬೆಳೆ ಬೆಳೆಯುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಮಳೆ ಬಾರದೆ ಇದ್ದರೆ ತಾನೇ?

ಶ್ರೀ ಬಿ. ಟಿ. ಕೆಂಪರಾಜ್.—ಮಳೆ ಬರಲಿ, ಬಾರದೆ ಹೋಗಲಿ, ಮಳೆ ಕಡಿಮೆಯಾದ ಭಾಗಗಳಲ್ಲಿ 1½ ಪಲ್ಲದಿಂದ 2½ ಪಲ್ಲದವರೆಗೆ ಫಸಲು ಬರುತ್ತದೆ. ಒಂದು ಎಕರೆಗೆ ಎರಡು ಪಲ್ಲ ಎಂದು ಸರಾಸರಿ ನಾವು ಲೆಖ್ಖ ಹಾಕಿಕೊಂಡರೆ ನಾಲ್ಕು ಎಕರೆಗಳು ಒಂದು standard ಎಕರೆಗೆ ಆಗುತ್ತವೆ. ಆ ರೀತಿಯಾಗಿ 100 ಎಕರೆಗಳನ್ನು ಒಬ್ಬ ವ್ಯಕ್ತಿಯು ಇಟ್ಟುಕೊಳ್ಳಲು ಈ ಕಾನೂನಿನಲ್ಲಿ ಅವಕಾಶವಿದೆ. ಅದೇ ರೀತಿಯಾಗಿ 400 ಎಕರೆಗಳ ವರೆಗೂ ಒಂದು ಸಂಸಾರ ಇಟ್ಟುಕೊಳ್ಳಬಹುದು.

ಶ್ರೀ ಕಡಿದಾಳ್ ಮಂಜಪ್ಪ.—ಅಂತೂ 800 ಎಕರೆಗಳು ಆಗುವುದಿಲ್ಲ

ಶ್ರೀ ಬಿ. ಟಿ. ಕೆಂಪರಾಜ್.—ಬಂಜರು ಭೂಮಿಯಾಗಿದ್ದು ಚೆನ್ನಾಗಿ ಫಲ ಬಂದಿರುವ ಜಮೀನಿನಲ್ಲಿ ಬರುವ ಫಸಲಿನ ಮೇಲೆ ಇಲ್ಲಿ ಕೊಟ್ಟಿರುವ ರೀತ್ಯಾ ಲೆಕ್ಕ ಹಾಕಿದಲ್ಲಿ ಒಬನಿಗೆ 400 ಎಕರೆಗಳಿಗೆ ಮೇಲ್ಪಟ್ಟು ಹೋಗುವ ಅವಕಾಶವಿದೆ. ಆದ್ದರಿಂದ ಇಲ್ಲಿ ಹಾಕಿರುವ ಪರಿಮಿತಿ ಬಹಳ ಹೆಚ್ಚು ಎಂದು ನನ್ನ ಅಭಿಪ್ರಾಯ. ಆದ್ದರಿಂದ, ಈ ರೀತಿಯ ಜಮೀನಿನ ಪರಿಮಿತಿಯನ್ನೇ ಇಟ್ಟುಕೊಳ್ಳುವುದಾದರೆ ಗೇಣಿದಾರರಿಗಾರಿಗೂ ಹೆಚ್ಚಿನ ಸುಖ ಸಿಕ್ಕಲಾರದು. ಹೀಗಾಗಿ ಗೇಣಿದಾರರಿಗೆ ಜಮೀನಿನ ಮೇಲೆ ಹಕ್ಕುಗಳಿಸಿಕೊಡಬೇಕೆಂದು ಯಾವ ಸದುದ್ದೇಶದಿಂದ ಈ ಮಸೂದೆಯನ್ನು ತಂದಿದ್ದೀರೋ, ಅದರಂತೆ ಗೇಣಿದಾರರಿಗೆ ಹೆಚ್ಚಿನ ಅವಕಾಶ ಸಿಕ್ಕಲಾರದು, ಸಿಕ್ಕುವುದು ಕಷ್ಟತರವೆಂದು ನನ್ನ ಊಹೆ.

ಈಗ ಈ ಮಸೂದೆಯಲ್ಲಿ ನಮೂದಿಸಿರುವಂತೆ ಹಿಂದೆ ಐದು ವರ್ಷಗಳವರೆಗೆ ತಪ್ಪದೆ ಗೇಣಿದಾರರು ಸಾಗುವಳಿ ಮಾಡುವುದಕ್ಕೆ ಹಕ್ಕು ಅವಕಾಶ ಕೊಟ್ಟಿತ್ತು, ಐದು ವರ್ಷಗಳ ವರೆಗೂ ಗೇಣಿದಾರನನ್ನು ಬಿಡಿಸಲು ಜಮೀನಿನ ಮಾಲೀಕನಿಗೆ ಸಾಧ್ಯವಿರಲಿಲ್ಲ. ಏನಿದ್ದರೂ ಕೆಲವು ಸಂದರ್ಭಗಳಲ್ಲಿ ಮಾತ್ರ-ಉದಾಹರಣೆಗೆ, ಗೇಣಿದಾರನು ಗೇಣಿಯನ್ನು ಕೊಡಲು ತಪ್ಪಿದ ಪಕ್ಷದಲ್ಲಿ, ಅಥವಾ ಗೇಣಿದಾರನು ಜಮೀನಿಗೆ ಯಾವ ರೀತಿಯಲ್ಲಾದರೂ ಅನಾನುಕೂಲವಾಗುವ ಹಾಗೆ ಮಾಡಿದರೆ, ಇಲ್ಲವೆ ಮಾಲೀಕನಿಗೆ ವ್ಯವಸಾಯ ಮಾಡಲು ಅತ್ಯಗತ್ಯವಾಗಿ ಬೇಕಾಗಿದ್ದ ಸಂದರ್ಭದಲ್ಲಿ, ಮಾಲೀಕನು ಗೇಣಿದಾರನ ವಿರೋಧವಾಗಿ ತಾಲ್ಲೂಕು ಅಮಲ್ದಾರರಿಗೆ ಅರ್ಜಿ ಕೊಟ್ಟು ಅವರ ಅನುಮತಿಯಿಂದ ಜಮೀನನ್ನು ಪಡೆಯಬಹುದಾಗಿತ್ತು. ಈಗ ಈ ಬಿಲ್ಲಿನಲ್ಲಿ ಐದು ವರ್ಷದಿಂದ ಹತ್ತು ವರ್ಷಕ್ಕೆ ಹೆಚ್ಚಿಸಿದ್ದೀರಿ. ಈ ಅವಧಿಯಲ್ಲಿ Protected Tenant ಆಗಿದ್ದವನು ಜಮೀನು ತನಗೇ ಬೇಕೆನ್ನುವ ಇಚ್ಛೆ ಹೊಂದಿದ್ದ ಪಕ್ಷದಲ್ಲಿ, ಆತ ಜಮೀನಿನ ಮಾಲೀಕನಿಗೆ ಒಂದು ನೋಟೀಸ್ ಕೊಟ್ಟು, ಆ ನೋಟೀಸನ್ನು ಕೊಟ್ಟ ಒಂದು ತಿಂಗಳೊಳಗಾಗಿ, ಜಮೀನಿನ ಮಾಲೀಕನು ರೈತನಿಗೆ ಅಂದರೆ ಗೇಣಿದಾರನಿಗೆ ಜಮೀನಿನ ಬೆಲೆಯನ್ನು ಗೊತ್ತು ಮಾಡಿ ಕೊಡದೆ ಹೋದ ಪಕ್ಷದಲ್ಲಿ ಅಸಿಸ್ಟೆಂಟ್ ಕಮಿಷನರಿಗೆ ಗೇಣಿದಾರನು ಅರ್ಜಿ ಹಾಕಿಕೊಳ್ಳಬಹುದು ಎಂದಿದೆ. ಈ ಒಂದು ಅಂಶವನ್ನು ಪರಿಶೀಲಿಸುವುದಾದರೆ ಎಷ್ಟು ಜನ ಮಾಲೀಕರು ಗೇಣಿದಾರರಿಗೆ ಜಮೀನು ಕೊಡಲು ಇಷ್ಟಪಡುತ್ತಾರೆ ಎಂಬುದನ್ನು ನೋಡಬೇಕು. ಏಕೆಂದರೆ ಈಗಾಗಲೇ ಜಮೀನು ಮಾಲೀಕರು ಅನೇಕ ವೇಳೆ ಬೇರೆ ವಿಲೇವಾರಿ ಮಾಡಿದ್ದಾರೆ. ಅಲ್ಲದೆ ಗೇಣಿದಾರರು ಸಾಮಾನ್ಯವಾಗಿ ಅಷ್ಟು ಕಾನೂನು ತಿಳಿದಂಥ ವ್ಯಕ್ತಿಗಳಾಗಿರುವುದಿಲ್ಲ. ಈ ಕಾನೂನಿನಲ್ಲಿ ಯಾವ ಯಾವ ಅಂಶಗಳು ಅಡಕವಾಗಿವೆ ಮತ್ತು ಯಾವ ರೀತಿಯನ್ನನುಸರಿಸಿ ಜಮೀನನ್ನು ಪಡೆಯಬಹುದೆಂಬ ತಿಳಿವಳಿಕೆ ಅನೇಕರಿಗೆ ಇರುವುದಿಲ್ಲ. ಆದ್ದರಿಂದ ಅಸಿಸ್ಟೆಂಟ್ ಕಮಿಷನರಿಗೆ ಅರ್ಜಿಯನ್ನು ಹಾಕಿ, ಅವರಿಂದ ಜಮೀನಿನ ಬೆಲೆಯನ್ನು ಗೊತ್ತುಮಾಡಿಸಿಕೊಂಡು ಗೇಣಿದಾರ ಜಮೀನನ್ನು ಪಡೆಯಬಲ್ಲವನಾಗುತ್ತಾನೆಂಬುದು ಅನುಮಾನ. ಇಂಥ ವಿಧಿಯಿಂದ ಗೇಣಿದಾರರಿಗೆ ಅಷ್ಟು ಅನುಕೂಲವಾಗುವುದಿಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಕಡಿದಾಳ್ ಮಂಜಪ್ಪ.—ಗೇಣಿದಾರರಿಗೆ ಏಕೆ ಪ್ರಯೋಜನವಾಗುವುದಿಲ್ಲವೆಂದು ಸ್ವಲ್ಪ ವಿವರವಾಗಿ ಹೇಳುತ್ತೀರಾ?

ಶ್ರೀ ಬಿ. ಟಿ. ಕೆಂಪರಾಜ್.—ಈ ಮಸೂದೆಯ Statement of Objects and Reasonsನ ಮೊದಲನೆಯ ಪ್ಯಾರಾದಲ್ಲಿ,

> ". . : . The Planning Commission have recommended the enactment of legislation conferring greater security of tenure on cultivating tenants and the conferring of the right to acquire ownership of the lands cultivated by them. This Bill has accordingly been brought forward."

ಈ ವಾಕ್ಯದಲ್ಲಿ ಅಡಕವಾಗಿರುವ ಅಂಶವನ್ನು ನಾವು ಗಣನೆಗೆ ತೆಗೆದುಕೊಳ್ಳುವುದಾದರೆ, ಜಮೀನನ್ನು ಗೇಣಿಗೆ ತೆಗೆದುಕೊಂಡಿರುವ ವ್ಯಕ್ತಿ ತನಗೆ ಜಮೀನು ಬೇಕೆನ್ನುವ ಅಭಿಪ್ರಾಯವನ್ನು ಲಿಖಿತ ಮೂಲಕವಾಗಿ ಮಾಲೀಕನಿಗೆ ತಿಳಿಸಬೇಕು. ಆಮೇಲೆ ಒಂದು ತಿಂಗಳೊಳಗಾಗಿ ಮಾಲೀಕನು ನಿರ್ದಿಷ್ಟವಾದ ಉತ್ತರವನ್ನು ಕೊಡದೆ ಹೋದ ಪಕ್ಷದಲ್ಲಿ, ಆತ ಅಸಿಸ್ಟೆಂಟ್ ಕಮಿಷನರಿಗೆ ಒಂದು ಅರ್ಜಿಯನ್ನು ಹಾಕಬೇಕು, ಅದರ ಮೇಲೆ ಅಸಿಸ್ಟೆಂಟ್ ಕಮಿಷನರು ಜಮೀನಿನ ಮಾಲೀಕನನ್ನೂ ಮತ್ತು ರೈತನನ್ನೂ ಕರೆಸಿಕೊಂಡು ಒಬ್ಬೊಬ್ಬರ ಅಭಿಪ್ರಾಯವನ್ನೂ ಕೇಳಿ ಮಾರ್ಕೆಟ್ಟಿನ ದರದಂತೆ ಬೆಲೆಯನ್ನು ನಿಗದಿಮಾಡಿ ತದನುಗುಣವಾಗಿ ಗೇಣಿದಾರನಿಗೆ ಕೊಡಿಸಬೇಕು ಎಂದಿದೆ. ಇದು, ಮಸೂದೆಯಲ್ಲಿ ವಿಧಿಸಲ್ಪಟ್ಟಿರುವ ಕಾರ್ಯವಿಧಾನ. ಇದಿಷ್ಟು ಕಾರ್ಯಕ್ರಮವನ್ನೂ ಅನುಸರಿಸಲು ಗೇಣಿದಾರನಿಗೆ ಸಾಧ್ಯವೇ ಎಂಬುದನ್ನು ನಾವು ಯೋಚಿಸಬೇಕು. ನಮ್ಮ ದೇಶದಲ್ಲಿ ಗೇಣಿದಾರನ ಚಿತ್ರ ಹೇಗಿದೆ ಎಂಬುದನ್ನು ಪ್ರಾಜ್ಞರು ತಿಳಿದಂಥ ವ್ಯಕ್ತಿಗಳು, ಎಂಥ ಪದಗಳಲ್ಲಿ ವರ್ಣಿಸಿದಾರೆಂದರೆ—ರೈತನ ಕಣ್ಣುಗಳು 1½ ಅಂಗುಲ ಗುಳಿ ಬಿದ್ದಿವೆ. ಅಸ್ಥಿಪಂಜರದ ಶರೀರವನ್ನು ಹೊತ್ತು ಬಡಕಲು ಎತ್ತುಗಳನ್ನು ಕಟ್ಟಿಕೊಂಡು ಉಳುಮೆಮಾಡಲೂ ಸಾಧ್ಯವಿಲ್ಲದ ಮೊಂಡ ಗುಳವನ್ನು ಮುರಿದ ನೇಗಿಲಿಗೆ ಕಟ್ಟಿ ಉಳತಕ್ಕ ವ್ಯಕ್ತಿ, ಹಿಂದೂ ದೇಶದಲ್ಲಿರತಕ್ಕ ಗೇಣಿದಾರ ಅಥವ ರೈತ. ಆದ್ದರಿಂದ ಈ ಕಾನೂನು ಅಂಥ ಅವಿದ್ಯಾವಂತ ವ್ಯಕ್ತಿಗಳಿಗೆ ಹೇಗೆ

(ಶ್ರೀ ಬಿ. ಟಿ. ಕೆಂಪರಾಜ್.)

ತಿಳಿದೀತು. ಕಾನೂನಿನ ಬಲದಿಂದ ಅವನು ಅವನ ಹಕ್ಕನ್ನು ಯಾವ ರೀತಿ ಉಳಿಸಿಕೊಳ್ಳಲು ಸಾಧ್ಯ ವಾದೀತು ಎಂಬುದನ್ನು ಯೋಚನೆಮಾಡಬೇಕಾದದ್ದು ಅತ್ಯಗತ್ಯ. ಅಲ್ಲದೆ, ಈ ಕಾನೂನಿನಲ್ಲಿ ಜಮೀನಿನ ಮಾಲೀಕನು ತನಗೆ ಅತ್ಯಾವಶ್ಯಕವಾಗಿ ಬೇಕಾಗುವ ಜಮೀನನ್ನು ತಾನೇ ವ್ಯವಸಾಯಮಾಡುವ ಪಕ್ಷಕ್ಕೆ ಬಿಡಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಿದೆ. ಈ ಅವ ಕಾಶವನ್ನು ಜಮೀನಿನ ಮಾಲೀಕನು ಉಪಯೋಗಿಸಿ ಕೊಳ್ಳುವ ಉದ್ದೇಶದಿಂದ, ತನ್ನ ಜಮೀನನ್ನು ಪರ ಭಾರೆ ಮಾಡಿ ಗೇಣಿದಾರನಿಗೆ ಕೊಟ್ಟಿರುವ ಜಮೀನನ್ನು ಬಿಡಿಸಿಕೊಳ್ಳಲು ಪ್ರಯತ್ನಪಡುತ್ತಾನೆಂದು ನನಗನ್ನಿ ಸುತ್ತದೆ. ಆದ್ದರಿಂದ ಗೇಣಿದಾರರಿಗೆ 10 ವರ್ಷಕ್ಕೆ Permanent tenant ಆಗುತ್ತಾನೆಂದು ಗೊತ್ತು ವಳಿ ಮಾಡುವುದಕ್ಕಿಂತ, ಇನಾಂತಿ ರದ್ದಿಯಾತಿ ಮಸೂದೆ ಯಲ್ಲಿ ನಾವು ಯಾವ ತತ್ವವನ್ನು ಒಪ್ಪಿಕೊಂಡಿದ್ದೇವೋ ಅದೇ ತತ್ವವನ್ನು ಇಲ್ಲಿಯೂ ಅನುಸರಿಸುವುದರಿಂದ ಅಭ್ಯಂತರವೇನೂ ಇರಲಾರದೆಂದು ನನಗೆ ತೋರು ತ್ತದೆ. ಈ ಮಸೂದೆಯ ಉದ್ದೇಶ ಪ್ಲಾನಿಂಗ್ ಕಮಿಷನ್ನಿ ನವರು ಹೇಳಿರತಕ್ಕ ತತ್ವವನ್ನು ಅನುಷ್ಠಾನಕ್ಕೆ ತರ ತಕ್ಕದು ಎಂದು ಹೇಳಿದೆ. ಹಾಗಿರುವಾಗ, ಈ ರೀತಿ ಗೇಣಿದಾರರು ಮಾಲೀಕತ್ವದ ಹಕ್ಕನ್ನು ಸಾಧಿಸ ಬೇಕಾದರೆ 10 ವರ್ಷಗಳು ಕಾಯಬೇಕೆಂದು ಹೇಳಿ ಒಂದು ಪರಿಮಿತಿಯನ್ನು ಹಾಕಿದರೆ, ಈ ಹತ್ತು ವರುಷ ಗಳಲ್ಲಿ ಆ ಜಮೀನು ಎಷ್ಟು ಬದಲಾವಣೆಗಳಾಗಬಹು ದೆಂಬುದನ್ನು ಕೂಡ ನಾವು ಈ ಹೊತ್ತು ಯೋಚನೆ ಮಾಡಬೇಕು.

ಶ್ರೀ ಎ. ಭೀಮಪ್ಪನಾಯಕ್.—ಹತ್ತು ವರುಷ ಗಳೊಳಗಾಗಿ, ಕೇರಿ ಮಾಡುತ್ತಿದವನಿಗೆ ಏನು ತೊಂದರೆಯಾಗುತ್ತದೆ ಎಂಬುದನ್ನು ಹೇಳಿ.

ಶ್ರೀ ಬಿ. ಟಿ. ಕೆಂಪರಾಜ್.—ಈ ಮಸೂದೆಯ ಗುರಿ ಗೇಣಿದಾರನಿಗೆ ಹಕ್ಕನ್ನು ಸ್ಥಿರಪಡಿಸಿಕೊಡತಕ್ಕದು ಎಂದು ಹೇಳಿದ್ದಾರೆ. ಆದರೆ, ಈ ಹಕ್ಕನ್ನು ಸ್ಥಿರಪಡಿಸಿ ಕೊಡಬೇಕಾದರೆ 10 ವರುಷಗಳ ಪರಿಮಿತಿಯನ್ನು ಗೊತ್ತುಮಾಡಿದ್ದಾರಲ್ಲ, ಇಂಥ ದೀರ್ಘ ಅವಧಿ ಯನ್ನು ಕೊಡುವುದರ ಅವಶ್ಯಕತೆಯೇನಿತ್ತು ಎಂದು ನಾನು ಕೇಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—I did not quite follow him. ಹತ್ತು ವರುಷಗಳಾದ ಮೇಲೆ ಷಿಕ್ಮಿ ದಾರನು ಹಕ್ಕುಳ್ಳವನಾಗುತ್ತಾನೆಂದು ಹೇಳಿದರೆ, ಹತ್ತು ವರ್ಷಗಳ ಮೇಲೆ ಅವನು ಬೇಕಾದರೆ ಕೊಂಡು ಕೊಳ್ಳಬಹುದು ಎಂದು ಹೇಳುವುದರಲ್ಲಿ ತೊಂದರೆ ಯೇನು ?

Where is it stated Sir? He is misinterpreting the meaning of the words.

Sri B. T. KEMPARAJ.—Sir, the Chapter II-A 31-B reads as follows :—

"31-B. Right of protected tenant and non-protected tenant to purchase land.—(1) Notwithstanding anything to the contrary in any law, usage or contract but subject to the provisions of sub-section (6, a protected tenant or a non-protected tenant shall be entitled to purchase from the landlord the land held by him as a protected tenant or a non-protected tenant, as the case may be."

Sri A. BHEEMAPPA NAIK.—That is all.

Sri B. RACHIAH (Yelandur—Scheduled Castes).—There is a proviso also.

Sri B. T. KEMPARAJ.—Sub-clause (4) (b) of Clause 31-B reads as follows :—

"(b) in such instalments not exceeding six and at such intervals during a period not exceeding ten years and on or before such dates as may be fixed by the Assistant Commissioner in each case".

Sir, the payment implies the period within which he can have the full ownership of the land leased to him.

Sri A. BHEEMAPPA NAIK.—Does it prevent him even in one year or in one day . . . .

Sri B. T. KEMPARAJ.—I am on my legs, Sir. I am trying to clarify these two points mainly to see how far the conditions laid down in this Bill will help the tenant to have the ownership of the land he is cultivating under a land-holder or a landlord. Therefore, I am trying to clarify how much hardship the tenant should undergo if he is to understand that there is scope for him to buy that land by fulfilling all the conditions laid hereunder. ಆದ್ದರಿಂದ 10 ವರ್ಷಗಳ ಕಾಲವನ್ನು ನಿಗದಿಮಾಡಿ ಅಷ್ಟರಲ್ಲಿ ಗೇಣಿದಾರನು ಇದರಲ್ಲಿ ನಮೂದಿಸಿರುವ ಎಲ್ಲಾ ನಿಯಮಗಳನ್ನೂ ಅನುಸರಿಸಿ ಆ ಜಮೀನಿನ ಹಕ್ಕನ್ನು ಹೊಂದಬಹುದು ಎಂದು ಹೇಳಿದೆ. ಇಷ್ಟು ವರ್ಷಗಳನ್ನು ಏಕೆ ನಿಗದಿಮಾಡಬೇಕು ಎಂಬುದೇ ನಾನೀಗ ಕೇಳುತ್ತಿರತಕ್ಕ ಪ್ರಶ್ನೆ. Can the tenant make an application in writing or write a letter to the landlord within one month when he wants to purchase the land or has an idea to purchase the land as per the conditions laid down in this Bill? Can the tenant be able to understand that he has to make an application to the Assistant Commissioner in case the landlord fails to give his consent of sale to the tenant. Therefore, the point for consideration is that the conditions laid down here may be simplified. That is all my argument.

1-30 P.M.

ಆದುದರಿಂದ ರೈತನಿಗೆ ಅನುಕೂಲಮಾಡಬೇಕು ಅನ್ನುವ ಉದ್ದೇಶವಿರುವಾಗ, ಆ ಧ್ಯೇಯವನ್ನು ನಾವು ಒಪ್ಪಿಕೊಂಡಿರುವಾಗ, ನಾವು ಈ ಕಾನೂನಿನಲ್ಲಿ ರೈತನಿಗಾಗಿ ಮಾಡತಕ್ಕಂಥ ನಿಯಮಾವಳಿಗಳು ಏನಿರುತ್ತವೆಯೋ ಅವುಗಳನ್ನು ಸಾಧ್ಯವಾದಷ್ಟೂ ಆ ರೈತನಿಗೆ ಅನುಕೂಲವಿರುವ ಹಾಗೆ ತಾವು ಮಾಡಬೇಕೆಂದು ತಮ್ಮಲ್ಲಿ ನಾನು ಈ ಸಮಯದಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಸ್ವಾಮಿ, ಇದರ ಮೇಲೆ ನಾನು ಇನ್ನೂ ಒಂದು ವಿಚಾರ ಹೇಳಬೇಕೆಂದು ಇಷ್ಟಪಟ್ಟಿದ್ದೇನೆ. ಜಮೀನಿನ ಮಾಲೀಕರು ತಮ್ಮ ಜಮೀನನ್ನು ವ್ಯವಸಾಯ ಮಾಡತಕ್ಕಂಥ ರೈತನಿಗೆ ಉಳುಮೆಗಾಗಿ ಕೊಟ್ಟಾಗ—ಆ ರೈತನು ಆ ಭೂಮಿಯ ಮಾಲೀಕನಿಗೆ ಎಷ್ಟು ಗೇಣಿ ಕೊಡಬೇಕೆಂಬುದನ್ನು ಈ ಕಾನೂನಿನಲ್ಲಿ ನಮೂದಿಸಿಲ್ಲ. ಜಮೀನ್ ಮಾಡತಕ್ಕಂಥ ಮಾಲೀಕರಿಗೆ ಸಾಧ್ಯವಾದ ಮಟ್ಟಿಗೂ ಹೆಚ್ಚಾಗಿ ಜಮೀನನ್ನು ಉಳಿಸಿ ಕೊಳ್ಳುವುದಕ್ಕೆ ಆಸೆ ಇರುತ್ತದೆ. ಅದಕ್ಕಾಗಿ ಅವರು ನಾನಾ ರೀತಿಯಲ್ಲಿ ಪ್ರಯತ್ನ ಮಾಡುತ್ತಿರುವಂಥ ನಿದರ್ಶನಗಳು ಅನೇಕವಾಗಿರುತ್ತವೆ. ಈಗ ಮುಖ್ಯವಾಗಿ ನಾವು ಸಮತಾವಾದವನ್ನು ಒಪ್ಪಿಕೊಂಡಿದ್ದೇವೆ. ಆದುದರಿಂದ ನಾವೀಗ ಆ ಸಮತಾವಾದದ ನಿಯಮಗಳು ಏನಿವೆ ಎಂಬುದನ್ನು ಆಲೋಚನೆಮಾಡಬೇಕಾಗಿದೆ. ಈ ಸಮತಾವಾದಕ್ಕೆ ಹೆಸರಾದಂಥ ಇಂಗ್ಲೆಂಡಿನಲ್ಲಿ ಮೊದಲಿದ್ದ ಪರಿಸ್ಥಿತಿ ಎಂತಹದು ಎಂಬುದನ್ನು ಆಲೋಚಿಸಿದರೆ ಅಲ್ಲಿ ಕನ್ಸರ್ವೇಟೀವ್ ಮತ್ತು ಲೇಬರ್ ಪಾರ್ಟಿ ವಿಚಾರದಲ್ಲಿ ನನಗೆ ತಿಳಿದಿರುವ ಹಾಗೆ ಇಲ್ಲಿಗೆ ಕೆಲವು ವರ್ಷಗಳ ಹಿಂದೆ ನಾಲ್ಕು ಸಾವಿರಕ್ಕೂ ಮೇಲ್ಪಟ್ಟು ಈ ಹೌಸ್ ಆಫ್ ಲಾರ್ಡ್ಸ್‌ಗಳಿದ್ದರು. ಆದರೆ ಈಗ ಅದು ಅಲ್ಲಿ 390-400ಕ್ಕೆ ಇಳಿದಿದೆ. ಅಂದ ಮೇಲೆ ಈ ಸಮತಾವಾದದ ತತ್ವ ಎಷ್ಟರಮಟ್ಟಿಗೆ ಜಾರಿಗೆ ಬಂದಿದೆ ಎಂಬುದು ಗೊತ್ತಾಗುತ್ತದೆ. ಆದರೆ ಇಲ್ಲಿ ಅದನ್ನು ಸ್ವಲ್ಪಸ್ವಲ್ಪವಾಗಿ ಆದರೂ ಜಾರಿಗೆ ತರಲೇಬೇಕಾಗಿದೆ. ಆದರೆ ಇದರಲ್ಲಿ ಅಡಕವಾಗಿರುವ ತತ್ವ ಯಾರಿಗೆ ಸ್ವಲ್ಪವೂ ಜಮೀನಿರುವುದಿಲ್ಲವೋ ಅಂಥವರಿಗೆ ಯಾರಲ್ಲಿ ಹೆಚ್ಚಿಗೆ ಜಮೀನಿರುತ್ತದೆಯೋ ಅಂಥವರಿಂದ ಅದನ್ನು ಕಿತ್ತುಕೊಂಡು ಯಾವ ಆಸ್ತಿಯೂ ಇಲ್ಲದಿದ್ದವರಿಗೆ ಒಂದು ಆಸ್ತಿಯನ್ನುಂಟು ಮಾಡಿಕೊಡತಕ್ಕಂಥ ಉದ್ದೇಶವೇನೂ ಅಲ್ಲ. ಆದರೆ ನಿರ್ಗತಿಕರಾಗಿರತಕ್ಕಂಥವರಿಗೆ ಕಷ್ಟಪಟ್ಟು ಕೆಲಸ ಮಾಡಿ ತಮ್ಮ ಹೊಟ್ಟೆಯನ್ನು ಹೊರೆಯಲು ಅವರಿಗೊಂದು ಅವಕಾಶವನ್ನು ಕಲ್ಪಿಸತಕ್ಕದ್ದು ಅತ್ಯಾವಶ್ಯಕ ಎಂಬುದನ್ನು ಪ್ರತಿಯೊಬ್ಬ ವ್ಯಕ್ತಿಯೂ ಮನಸ್ಸಿನಲ್ಲೂ ಬೆಳೆಸಿಕೊಂಡು ಬರಬೇಕೆನ್ನತಕ್ಕದ್ದೇ ಈ ಸಮತಾವಾದದ ಸಾಮಾನ್ಯತತ್ವ ಎಂದು ನಾನಾದರೂ ಅಂದು ಕೊಂಡಿದ್ದೇನೆ—ತಾವೇನು ಆ ರಷ್ಯಾ ದೇಶವನ್ನು ಒಂದು ಕಮ್ಯೂನಿಸ್ಟ್ ರಾಷ್ಟ್ರವೆಂದು ಹೇಳುತ್ತಿದ್ದೀರೋ ಅಂಥ ರಷ್ಯಾದೇಶದ ನಾಯಕನಾಗಿದ್ದಂಥ ಸ್ಟ್ಯಾಲಿನ್ ಮಹಾಶಯರು ಈ ಜನಜೀವನದ ವಿಚಾರವಾಗಿ ಅವರು ಕಂಡುಹಿಡಿದಿರುವಂಥ ಒಂದು ವಿಷಯದಲ್ಲಿ ಹೀಗೆ ಹೇಳಿದ್ದಾರೆ:—

"Russia is in its fourth stage of socialism. It may take another 25 years to make Russia a Communist State in the sense of what we think and say as a Communist State."

ಎಂದು ಹೇಳಿದ್ದಾರೆ. ಅಂದ ಮೇಲೆ ಈ ಸಮಾಜವಾದದ ನೀತಿಯನ್ನು ಕಾರ್ಯರೂಪಕ್ಕೆ ತರಬೇಕಾಗಿದ್ದರೆ, ಆ ಮಾರ್ಗದಲ್ಲೇ ನಾವು ಹೆಜ್ಜೆ ಇಡುತ್ತಾ ಹೋಗಬೇಕು ಅನ್ನುವ ತತ್ವವನ್ನೂ ನಾವು ಒಪ್ಪಿಕೊಳ್ಳಲೇಬೇಕು. ಹಾಗೆ ಮಾಡಿದರೇನೇ ಅದನ್ನು ಕಾರ್ಯಗತಮಾಡಲು ನಮ್ಮ ಮನಸ್ಸೂ ಕೂಡ ಅದೇ ರೀತಿ ವಿಕಾಸಗೊಳ್ಳುವುದಕ್ಕೆ ಅವಕಾಶವಾಗುತ್ತದೆ. ಗೇಣೀದಾರನಿಗೆ ಜಮೀನಿನ ಹಕ್ಕನ್ನು ಕೊಡಬೇಕೆಂಬುವುದು ಈ ಮಸೂದೆಯಲ್ಲಿ ಅಡಕವಾಗಿರುವಾಗ ಅದಕ್ಕೆ ಅತಿ ತೀವ್ರವಾದಂಥ ಅಥವಾ ಅದಕ್ಕೆ ವಿರೋಧ ಘಟನಾವಳಿಗೆ ಸಂಬಂಧಪಟ್ಟಂಥ ಅಂಶಗಳನ್ನು ಪ್ರದರ್ಶಿಸುವಂತೆ ನಾವು ಮಾಡಿದರೆ, ನಾವು ಮೊದಲು ಒಪ್ಪಿಕೊಂಡಿದ್ದಂಥ ತತ್ವಕ್ಕೂ, ಈಗ ನಾವು ನಮ್ಮ ಮನಸ್ಸಿನಲ್ಲಿ ಆಲೋಚನೆ ಮಾಡಿರತಕ್ಕಂಥ ವಿಷಯಗಳಿಗೂ ಒಂದು ಸಮನ್ವಯವಿಲ್ಲದಂತೆ ಆಗುತ್ತದೆ. ದೇಶದ ನಾಯಕರು ಯಾವ ಒಂದು ತತ್ವವನ್ನು ಪ್ರತಿಪಾದಿಸಿದ್ದಾರೆಂದರೆ—ದೇಶದಲ್ಲಿ ಹೆಚ್ಚು ಜನರು ವ್ಯವಸಾಯದಿಂದಲೇ ತಮ್ಮ ಜೀವನೋಪಾಯಗಳನ್ನು ಮಾಡಿಕೊಂಡು ಹೋಗುತ್ತಿದ್ದಾರೆ. ಇಂಥವರು ಶೇಕಡ 75ರಷ್ಟಿದ್ದಾರೆ. ಆದರೆ ಈ ಪೈಕಿ ಶೇಕಡ 45-50ರವರೆಗೆ ಜಮೀನಿಲ್ಲದಂಥವರು, ನಿರ್ಗತಿಕರಾದಂಥ ಜನರು ಬೇರೆಯವರ ಜಮೀನನ್ನು ಕೂಲಿಗಾಗಿಯೋ ಗುತ್ತಿಗೆಗಾಗಿಯೋ ಅಥವಾ ವಾರಕ್ಕಾಗಿಯೋ ಉಳುಮೆ ಮಾಡಿಕೊಂಡು ಹೋಗುತ್ತಿದ್ದಾರೆ. ಇಂಥಾ ವ್ಯಕ್ತಿಗಳಿಗೆ ಅವರ ಜೀವನಕ್ಕಾಗಿ ಒಂದು ಅವಕಾಶ ಕಲ್ಪಿಸಿ ಕೊಟ್ಟಂತೆ ಆಗಲೆಂಬ ಉದ್ದೇಶದಿಂದ ಅವರಿಗೆ ಈಗ ಒಂದು ಅಥವಾ ಎರಡು ಎಕರೆ ಅಥವಾ ಐದು ಎಕರೆ-ಹೀಗೆ ಎಷ್ಟು ಜಮೀನನ್ನು ಅವರಿಗೆ ಕೊಡಬಹುದೆಂಬುದರ ಬಗ್ಗೆ ಒಂದು ಪರಿಮಿತಿ ಹಾಕತಕ್ಕಂಥ ಅವಕಾಶ ಬರುತ್ತದೆ. ನನ್ನ ಹೊಟ್ಟೆಗೆ ನಾನು ಒಂದು ಹೊತ್ತಿಗಾದರೂ ಆಹಾರವನ್ನು ಸಂಪಾದಿಸಿಕೊಳ್ಳುವಂಥ ಒಂದು ಶಕ್ತಿ ನನಗಿದೆ ಅನ್ನುವುದು ಆತನ ಮನಸ್ಸಿಗೆ ಬರುವ ಹಾಗೆ ಈ ಶಾಸನ ಕಲ್ಪಿತವಾಗದಿದ್ದರೆ ಇಂದಲ್ಲ ಮುಂದಾದರೂ ಇದರ ಬಗ್ಗೆ ಒಂದು ದೊಡ್ಡ ಕ್ಲೇಶದ ಶಂಕೆ ಇದ್ದೇ ಇರುತ್ತದೆಂಬ ಅಂಶವನ್ನು ನಾನು ತಮ್ಮಲ್ಲಿ ಈ ಸಂದರ್ಭದಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.—ಈ ಎಲ್ಲಾ ಕಾರಣಗಳಿಂದಲೂ ಈ ವರೆಗೆ ಈ ಮಸೂದೆಯ ಬಗ್ಗೆ ಏನೇನು ತಿದ್ದುಪಡಿಗಳು ಆವಶ್ಯಕ ಎಂದು ತಮ್ಮ ಗಮನಕ್ಕೆ ತರಲಾಗಿದೆಯೋ ಅಂಥವುಗಳನ್ನೆಲ್ಲಾ ಸೂಕ್ತ ರೀತಿಯಲ್ಲಿ ತಿದ್ದುಪಡಿಮಾಡಿ ಈ ಮಸೂದೆಯಲ್ಲಿ ಸೂಕ್ತ ಬದಲಾವಣೆಗಳಾಗತಕ್ಕದ್ದು ಅತಿ ಆವಶ್ಯಕವೆಂಬ ಅಂಶವನ್ನು ತಾವು ಆ ಸೆಲೆಕ್ಟ್ ಸಮಿತಿಯವರ ಅವಗಾಹನೆಗೆ ತಂದು, ಈ ಮಸೂದೆಯನ್ನು ಒಟ್ಟಿನಲ್ಲಿ ದೇಶಕ್ಕೆ ಅನುಕೂಲವಾಗಿರತಕ್ಕಂಥ ರೀತಿಯಲ್ಲಿ ತಯಾರಿಸಿ ಬಡಜನರಿಗೆ ಸಹಾಯ ಮಾಡುತ್ತೀರೆಂದು ನಂಬಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri Kadidal MANJAPPA.—If you permit, I want to explain further some of the salient features of the Bill, because I find from the discussions that some members are under the impression that the Bill seeks to impose an upper limit to the extent of land that can be owned by the individual. Regarding other clauses, there seems to be some doubt—I do not intend to call it

(SRI KADIDAL MANJAPPA.)

'confusion'—there is some doubt, I believe.

Mr. SPEAKER.—The provisions are very clear.

Sri Kadidal MANJAPPA.—They are clear, no doubt. ಸ್ವಾಮಿ, ಈಗ ನಾನು ಕನ್ನಡದಲ್ಲೇ ಮಾತನಾಡುತ್ತೇನೆ. ಈಗ ಈ ತಿದ್ದುಪಡಿ ಮಸೂದೆಯನ್ನು ತಂದಿರತಕ್ಕ ಉದ್ದೇಶ ಜಮೀನ್ದಾರನಿಗೂ ಮತ್ತು ರೈತನಿಗೂ ಇರತಕ್ಕಂಥ ಆ ಹಕ್ಕು ಬಾಧ್ಯತೆಗಳನ್ನು ನಿರ್ಧಾರಮಾಡಬೇಕು ಎಂಬುದು; ಇದೇ ಇದರ ಉದ್ದೇಶ.

ಸಾಮಾನ್ಯವಾಗಿ "ಉಳತಕ್ಕವನೇ ಭೂಮಿಗೆ ಒಡೆಯನಾಗಬೇಕು" ಅನ್ನುವ ಒಂದು ತತ್ವವನ್ನು ನಾವೆಲ್ಲರೂ ಈಗಾಗಲೇ ಒಪ್ಪಿಕೊಂಡಿದ್ದೇವೆ. ಈಗ ಇದರ ಜೊತೆಗೆ ಹಾಗೆ ಉಳತಕಂಥ ರೈತ ಯಾರಿದ್ದಾನೋ ಅಂಥಾ ರೈತನಿಗೆ ಸಾಕಷ್ಟು ರಕ್ಷಣೆ ಕೊಡಬೇಕು, ಆತನಿಗೆ ಯಾರಿಂದಲೂ ಯಾವ ವಿಧವಾದ ಶೋಷಣೆಗಳೂ ಆಗಬಾರದು ಅನ್ನುವುದನ್ನೂ ಕೂಡ ನಾವು ಒಪ್ಪಿಕೊಂಡಿದ್ದೇವೆ.

ಆದರೆ ಈ ಮಸೂದೆಯಲ್ಲಿ ಪರ್ಮಿಸಿಬಲ್ ಹೋಲ್ಡಿಂಗ್ ಎಂಬ ಒಂದು ಅಂಶ ಅಡಕವಾಗಿದೆ. ಜಮೀನ್ದಾರ ಮತ್ತು ರೈತ ಇವರಿಬ್ಬರ ಸಂಬಂಧ ಯಾವ ರೀತಿಯಾಗಿರತಕ್ಕದ್ದೆಂಬುದನ್ನು ನಿಗದಿಮಾಡುವಾಗ ಮಾತ್ರ ಈ ಪರ್ಮಿಸಿಬಲ್ ಹೋಲ್ಡಿಂಗ್ ಪ್ರಶ್ನೆ ಉದ್ಭವಿಸುತ್ತದೆ. ಉದಾಹರಣೆಗೆ ಹೇಳುವುದಾದರೆ:—ಈಗ ಒಬ್ಬ ವ್ಯಕ್ತಿಗೆ 100 ಎಕರೆ ಜಮೀನಿದ್ದರೆ, ಅಂಥ 100 ಎಕರೆ ಜಮೀನನ್ನು ಅನೇಕ ರೈತರು ಸಾಗುವಳಿ ಮಾಡುತ್ತಿದ್ದರೆ ಆಗ ಅನೇಕ ಪ್ರಶ್ನೆಗಳು ಅವರ ಸಂಬಂಧದಲ್ಲಿ ಉದ್ಭವಿಸುತ್ತವೆ. ಜಮೀನಿನ ಮಾಲೀಕನಾಗಿರತಕ್ಕವನು ಆತನ ಜಮೀನನ್ನು ಆತನೆ ಉಳುಮೆಮಾಡಲು ಅಪೇಕ್ಷೆಪಡಬಹುದು. ಅಂಥ ಕಾಲದಲ್ಲಿ ಆ ರೈತರಿಂದ ಆ ಜಮೀನನ್ನು ಬಿಡಿಸಿಕೊಳ್ಳುವುದಕ್ಕೆ ಈ ಮಾಲೀಕನಿಗೆ ಇರತಕ್ಕಂಥ ಹಕ್ಕುಬಾಧ್ಯತೆಗಳೇನು, ರೈತನಿಗಿರತಕ್ಕಂಥ ಹಕ್ಕುಬಾಧ್ಯತೆಗಳೇನು ಎಂಬುದನ್ನು ನಾವು ವಿಮರ್ಶೆ ಮಾಡಬೇಕಾಗಿ ಬರುತ್ತದೆ. ಆಗ ಅಂಥ ಸಂದರ್ಭಗಳಲ್ಲಿ ಹಾಗೆ ರೈತನಿಗೆ ಕೊಟ್ಟಿದ್ದಂಥ ಎಲ್ಲಾ ಜಮೀನುಗಳನ್ನೂ ರೈತನಿಂದ ಬಿಡಿಸಿಕೊಳ್ಳುವಂಥ ಒಂದು ಹಕ್ಕನ್ನು ಜಮೀನ್ದಾರನಿಗೆ ಕೊಡಬೇಕೆ? ಅಥವಾ ಆಗ ವ್ಯವಸಾಯಮಾಡುತ್ತಿದ್ದಂಥ ರೈತನಿಗೇನಾದರೂ ಜಮೀನನ್ನು ಆತನ ವ್ಯವಸಾಯಕ್ಕೂ ಉಳಿಯುವಂತೆ ಮಾಡಬೇಕೆ ಎಂಬ ವಿವರಗಳ ಬಗ್ಗೆ ನಾವೀಗ ವಿಮರ್ಶೆಮಾಡಬೇಕಾಗಿದೆ. ಹಾಗೊಂದು ವೇಳೆ ಆ ರೈತನಿಗೆ ಜಮೀನನ್ನು ಉಳಿಸಿಕೊಡಬೇಕೆಂದು ಹೇಳುವುದಾದರೆ, ಅಂಥ ರೈತನಿಗೆ ಎಷ್ಟು ಕಾಲದವರೆಗೆ ಹಾಗೆ ಉಳಿಸಿಕೊಡುವ ಭೂಮಿಯನ್ನು ಸಾಗುವಳಿ ಮಾಡುವುದಕ್ಕೆ ಅವಕಾಶಮಾಡಿಕೊಡಬೇಕು, ಎಷ್ಟು ಕಾಲವಾದ ಮೇಲೆ ಆ ಜಮೀನ್ದಾರ ಆ ರೈತನಿಂದ ಆ ಭೂಮಿಯನ್ನು ಬಿಡಿಸಿಕೊಳ್ಳಬಹುದು ಅನ್ನತಕ್ಕಂಥ ಈ ವಿಚಾರಗಳನ್ನೆಲ್ಲಾ ನಾವು ಗಣನೆಗೆ ತೆಗೆದುಕೊಳ್ಳಬೇಕು. ಹಾಗೆ ಈ ವಿಷಯಗಳನ್ನೆಲ್ಲಾ ವಿಮರ್ಶೆ ಮಾಡತಕ್ಕ ಕಾಲದಲ್ಲಿ ಈ ಪರ್ಮಿಸಿಬಲ್ ಹೋಲ್ಡಿಂಗಿನ ಪ್ರಶ್ನೆ ಉದ್ಭವಿಸಿಯೇ ಉದ್ಭವಿಸುತ್ತದೆ. ಜಮೀನಿಲ್ಲದ ರೈತನಿಗೆ ವ್ಯವಸಾಯಕ್ಕಾಗಿ ಜಮೀನನ್ನು ಬಿಡಿಸಿಕೊಡಬೇಕು ಎಂಬ ಪ್ರಶ್ನೆ ಉದ್ಭವಿಸುವಾಗ ಆತನಿಗೆಷ್ಟು ಜಮೀನನ್ನು ಹಾಗೆ ಬಿಡಿಸಿಕೊಡಬೇಕು ಎಂಬ ಪ್ರಶ್ನೆ ಉದ್ಭವವಾಗಿಯೇ ಆಗುತ್ತದೆ. ಹಾಗೆ ಈ ಪ್ರಶ್ನೆ ಉದ್ಭವಿಸಿದಾಗ ಈ ಪರ್ಮಿಸಿಬಲ್ ಹೋಲ್ಡಿಂಗ್ ಎಷ್ಟಿರಬೇಕು ಅನ್ನತಕ್ಕಂಥ ಪ್ರಶ್ನೆ ಬರುತ್ತದೆ. ರೈತನು ಎಷ್ಟು ಕಾಲಾವಧಿಯವರೆಗೆ ವ್ಯವಸಾಯಮಾಡಬೇಕು, ರೈತನಿಗೆ ಜಮೀನನ್ನು ಬಿಡಿಸಿಕೊಡುವಾಗ ಯಾವ ಕಾಲದಲ್ಲಿ ಎಷ್ಟರಮಟ್ಟಿಗೆ ಆ ಜಮೀನುಗಳನ್ನು ಬಿಡಿಸಿಕೊಡಲು ಅವಕಾಶವಿರುತ್ತದೆ ಅನ್ನುವಂಥ ಪ್ರಶ್ನೆಗಳೆಲ್ಲಾ ಉದ್ಭವಿಸುವುದು ಸಹಜವಾಗಿಯೇ ಇದೆ. ನಾವು ಉಳುವವನೇ ಭೂಮಿಗೆ ಒಡೆಯನಾಗಬೇಕೆಂಬ ತತ್ವವನ್ನು ಒಪ್ಪಿಕೊಂಡ ಮೇಲೆ ಆ ರೈತನಾಗಿರತಕ್ಕವನಿಗೆ ಎಷ್ಟರಮಟ್ಟಿಗೆ ಭೂಮಿಗೆ ಒಡೆಯನಾಗಲು ಸಾಧ್ಯವಿದೆ ಅನ್ನುವ ಪ್ರಶ್ನೆಯು ಉದ್ಭವಿಸುತ್ತದೆ. ಹಾಗೆ ಈ ಪ್ರಶ್ನೆ ಉದ್ಭವಿಸಿದಾಗ ಅದರ ಜೊತೆಯಲ್ಲೇ ಈ ಪರ್ಮಿಸಿಬಲ್ ಹೋಲ್ಡಿಂಗಿನ ಪ್ರಶ್ನೆಯೂ ಕೂಡ ಉದ್ಭವಿಸುತ್ತದೆ. ಒಂದು ವೇಳೆ ಈ ಕಾನೂನು ಜಾರಿಗೆ ಬಂದ ಮೇಲೆ—ಈ ಪರ್ಮಿಸಿಬಲ್ ಹೋಲ್ಡಿಂಗ್ ಅನ್ನುವುದು ನಿರ್ಧಾರವಾದ ಮೇಲೂ ಕೂಡ ಈ ರೈತನಿಗೆ ಜಮೀನು ಕೊಡಿಸಿದ ನಂತರ ಜಮೀನ್ದಾರನಿಗೆ ಬೇರೆ ಜಮೀನುಗಳನ್ನು ಕೊಂಡುಕೊಳ್ಳುವುದಕ್ಕೆ ಅವಕಾಶವಿದೆ. ಈ ಕಾನೂನಿನಲ್ಲಿ ಜಮೀನ್ದಾರನಿಗೆ ಈ ಪರ್ಮಿಸಿಬಲ್ ಹೋಲ್ಡಿಂಗ್‌ನ್ನು ನಿರ್ಧರಿಸಿದ ಮಾತ್ರಕ್ಕೇ ಆತನಿಗೆ ಹೆಚ್ಚು ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ—ಎಂದು ಇದರಲ್ಲೆಲ್ಲೂ ಹೇಳಿರುವುದಿಲ್ಲ. ಇದರ ಜೊತೆಗೆ ರೈತನಾದವನು ತನಗೆ ಇರುವಂಥ ಹಕ್ಕನ್ನು ಚಲಾಯಿಸದೆ ಕೈಬಿಟ್ಟರೆ, ಆಗ ಈ ಪರ್ಮಿಸಿಬಲ್ ಹೋಲ್ಡಿಂಗ್ ಜಮೀನಿನ ಪರಿಮಿತಿ ಎಷ್ಟೆಂಬುದಾಗಿ ಗೊತ್ತಾಗಿರುತ್ತದೆಯೋ ಅಷ್ಟಕ್ಕಿಂತಲೂ ಹೆಚ್ಚಾಗಿ ಜಮೀನನ್ನು ಆ ಮಾಲೀಕ ಇಟ್ಟುಕೊಳ್ಳಲು ಆತನಿಗೆ ಆಗಲೂ ಅವಕಾಶವಿದೆ. ಆದುದರಿಂದ ಈಗ ಇಲ್ಲಿ ಹೇಳಿರತಕ್ಕಂಥ ಈ ಪರ್ಮಿಸಿಬಲ್ ಹೋಲ್ಡಿಂಗ್ ಎಂಬುದು ಒಂದು ಸೀಲಿಂಗ್ ಲಿಮಿಟ್ ಆಗುವುದಿಲ್ಲ ಎಂದು ತಮ್ಮಲ್ಲಿ ನಾನು ಸ್ಪಷ್ಟವಾಗಿ ಅರಿಕೆ ಮಾಡಿಕೊಳ್ಳುತ್ತೇನೆ.

Sri H. C. LINGA REDDY (Malur).—In 2-C, there is the definition of permissible holding.

"The permissible holding in respect of any one person shall be an extent of arable land equal to twenty-five standard acres."

'Any one person'—it applies only to a case where there is the relationship of landlord and tenant and not to other cases. Therefore, it might apply to other cases also.

Sri Kadidal MANJAPPA.—This is a law which is intended to regulate the relationship between the landlord and tenant. Without the landlord and the tenant there cannot be any permissible holding.

ನಾನು ತಮಗೆ ಇನ್ನೊಂದು ಉದಾಹರಣೆ ಹೇಳಬೇಕಾಗಿದ್ದರೆ ಈಗ ಆ ಮನೀಲೆಂಡರ್ಸ್ ಆಕ್ಟ್ ಜಾರಿಯಲ್ಲಿದೆ. ಇದರ ಪ್ರಕಾರ ಸಾಲಕೊಡತಕ್ಕವನಿಗೂ ಮತ್ತು ಸಾಲ ಪಡೆಯತಕ್ಕವನಿಗೂ ಇಬ್ಬರಿಗೂ ಈ ಕಾನೂನು ಅನ್ವಯವಾಗುತ್ತದೆ. ಅಷ್ಟು ಬಿಟ್ಟು ಅವರು ಇಬ್ಬರೂ ಮತ್ತೆ ಯಾವುದಾದರೂ ಲೇವಾದೇವಿಗಳನ್ನು ಮಾಡಿದ್ದರೆ ಆಗಲೂ ಕೂಡ ಅದಕ್ಕೆ ಈ ಕಾನೂನೇ ಅನ್ವಯವಾಗುತ್ತದೆಂದು ಹೇಳಿದರೆ ಅದು ಸರಿಯಾಗಿರು

ವುದಿಲ್ಲ. ಈ ಕಾನೂನು ಏನಿದ್ದರೂ ಆ ಒಂದು ನಿರ್ದಿಷ್ಟವಾದ ಉದ್ದೇಶಕ್ಕೆ ಮಾತ್ರವೇ ಅನ್ವಯಿಸುತ್ತದೆ. . . .

ಶ್ರೀ ಕಡಿದಾಳ್ ಮಂಜಪ್ಪ.—ಆ relationship ಇದ್ದರೂ ಕೂಡ permissible holding ಒಪ್ಪಿಕೊಂಡು ಕಾನೂನು ಮಾಡಿದನಂತರವೂ ಕೂಡ ಗೇಣೀದಾರರಿಲ್ಲದೇಯಿರತಕ್ಕ ಅಥವಾ ಇರತಕ್ಕ ಬೇರೆ ಜಮೀನನ್ನು ಎಷ್ಟು ವಿಸ್ತೀರ್ಣವನ್ನಾದರೂ ಕೊಂಡುಕೊಳ್ಳಲು ಇದರಲ್ಲಿ ಯಾವ ಪ್ರತಿಬಂಧಕವೂ ಇಲ್ಲ.

Sri A. BHEEMAPPA NAIK.—If it is only defined for purposes of clarification . . .

Sri Kad dal MANJAPPA.—That can be clarified.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಗೇಣೀದಾರರಿರತಕ್ಕ ಜಮೀನನ್ನು ಕೊಂಡುಕೊಳ್ಳಬಹುದೆಂದು ಹೇಳುತ್ತೀರಿ, ಹೇಗಾಗುತ್ತದೆ?

Sri Kadidal MANJAPPA.—Subject to their rights.

Sri P. R. RAMAIYA (Basavangudi).—The proviso in 2-C, is:

> "Provided that where land is held by a person on behalf of himself and the other members of his family who are legally entitled to such land, the permissible holding shall be the extent of arable land determined on the basis of twenty-five standard acres per each member of the family subject to the condition that the total extent shall not in any case exceed one hundred standard acres."

ಇದರಲ್ಲಿ ನನಗೆ ಒಂದು ವಿಷಯ ಅರ್ಥವಾಗಲಿಲ್ಲ. Each person is entitled to 25 standard acres. Suppose that family consists of more than five. Suppose one person has eight boys, and he owns much land also. But this section limits the land to hundred standard acres. Therefore you will not be providing for the other members of the family. ಇದರಲ್ಲಿ ಅನುಮಾನವೇನೆಂದರೆ, ಒಂದು ಕುಟುಂಬಕ್ಕೆ ನೂರು ಎಕರೆ ಪರಿಮಿತಿಯನ್ನು ಗೊತ್ತುಮಾಡಿದ್ದೀರಿ, ಒಬ್ಬೊಬ್ಬರಿಗೆ 25 ಎಕರೆಯಂತೆ ಬಹುದು. Supposing a family consists of nine people as a matter of fact. Where have you provided for all of them? ಇದನ್ನು ಹೇಗೆ ಪರಿಹಾರ ಮಾಡುತ್ತೀರಿ? ಐದು ಜನರಿದ್ದರೆ ಪರವಾಯಿಲ್ಲ, 9 ಜನರಿದ್ದರೆ ಏನು ಮಾಡುತ್ತೀರಿ? Where have you provided for a family which consist of nine or ten or more than five members? Economics ಪ್ರಕಾರ five members family ಎಂದು ಲೆಕ್ಕಾಚಾರ ಮಾಡಿದ್ದೀರಿ. ಹೆಚ್ಚು ಜನರಿದ್ದರೆ?

ಶ್ರೀ ಕಡಿದಾಳ್ ಮಂಜಪ್ಪ.—ಪರಮಾವಧಿ ನೂರು ಎಕರೆ. ನಾಲ್ಕು ಜನರಿದ್ದರೆ ನೂರು ಎಕರೆ, ಅದರ ಮೇಲೆ ಎಷ್ಟು ಜನರಿದ್ದರೂ ನೂರು ಎಕರೆ ಪರಮಾವಧಿ ಪರಿಮಿತಿ.

Sri Mulka GOVINDA REDDY (Chitaldrug).—Legally entitled?

Sri Kadidal MANJAPPA.—Legally entitled. ನಾಲ್ಕು ಜನರ ಮೇಲಿದ್ದರೂ ಪರಮಾವಧಿ ಪರಿಮಿತಿ ನೂರು ಎಕರೆ.

Sri P. R. RAMAIYA.—This law should hold good for all the individuals existing in the State. ಒಂದು ಕುಟುಂಬದಲ್ಲಿ x, y and z ಮೂರು ಜನರಿರುತ್ತಾರೆ. ಇನ್ನೊಂದು ಕುಟುಂಬದಲ್ಲಿ ಹೆಚ್ಚಿರುತ್ತಾರೆ; ಅವರಿಗೆ ಕಡಿಮೆಯಾಗುತ್ತದೆ. But in the case of the other family, it will be 25 acres. So, discrimination ಆಗುತ್ತದೆ. Because, it is injustice to some families. ನಾನು hypothetical ಆಗಿ ಹೇಳಿದರೂ ಕೂಡ there will be a number of families where the number exceeds five. ಆಗ ಏನು ಮಾಡುತ್ತೀರಿ?

ಶ್ರೀ ಎ. ಭೀಮಪ್ಪನಾಯಕ್.—ಒಂದು ಸಂಸಾರಕ್ಕೆ ಎಂಟುನೂರು ಎಕರ ಇದ್ದರೆ, ಎಂಟು ಜನರಿದ್ದಾರೆಂದಿಟ್ಟು ಕೊಂಡರೆ, ಅದನ್ನು ವಿಭಾಗ ಮಾಡಿಕೊಳ್ಳುತ್ತಾರೆ. ಆದರೆ ಇದರ ಪ್ರಕಾರ ಒಬ್ಬ ಇಪ್ಪತ್ತೈದು ಸ್ಟ್ಯಾಂಡರ್ಡ್ ಎಕರೆಗಳಮೇಲೆ ಇಟ್ಟುಕೊಳ್ಳುವ ಹಾಗಿಲ್ಲ. ಅವರು ವಿಭಾಗವಾಗಿ ಒಬ್ಬೊಬ್ಬರಿಗೆ ನೂರು ಎಕರೆ ಇಟ್ಟುಕೊಳ್ಳುತ್ತಾರೆ. Division of property ಮಾಡಿಕೊಳ್ಳುವುದಕ್ಕೆ ಅಭ್ಯಂತರವಿಲ್ಲ. ಇದರಿಂದ ಒಬ್ಬೊಬ್ಬರಿಗೆ ನೂರು ಎಕರೆ ಬರುತ್ತದೆ. ಆಗ ಇಪ್ಪತ್ತೈದು ಎಕರೆ ಇಟ್ಟುಕೊಂಡು ಎಪ್ಪತ್ತೈದು ಎಕರೆ ಮಾರುತ್ತಾರೆ. 25ರಂತೆ 8 ಜನಕ್ಕೆ ಇನ್ನೂರು ಎಕರೆ ಆಗುತ್ತದೆ. You will be defeating the clause which you have inserted there.

Mr. SPEAKER—Many of the Hon'ble Members who are experiencing difficulties can only ask for information. But many of you are putting forward arguments against the clauses. That cannot go on now.

Sri A. BHEEMAPPA NAIK.—If these doubts are put forward before the Minister, and if he clears them . . .

Mr. SPEAKER.—Now, we are in the consideration stage. If we accept the principles, all these difficulties can be overcome. The Bill will be sent to the Select Committee as it is now proposed. At the Select Committee stage, all these difficulties can be gone into and suitable provisions and amendments made according to the opinion of the House. Therefore, all these difficulties can be avoided. Now we can only take up discussion regarding the principles of the Bill.

Sri P. R. RAMAIYA.—I have stated a doubt, Sir. In the case of families where the number exceeds five, these difficulties come. How are you going to solve them? Amongst individuals, there will be a sort of invidious distinction—between members of one family and another family. It is a sort of penalty for a family which has a membership of more than five.

Sri Kadidal MANJAPPA.—That cannot be avoided. It is the intention of Government that the maximum area which constitutes a permissible holding should not exceed hundred acres. If this is not fixed (*Interruption*) there will be no land at all for the tenant.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಐವತ್ತು ಎಕರೆಗಿಂತ ಹೆಚ್ಚಾಗಿರುವ holdings ಸಂಖ್ಯೆಯನ್ನು ಕೊಡಬೇಕು.

Sri Kadidal MANJAPPA.—On a previous occasion, I have given that figure in my speech ಹಿಂದಿನ ಅಧಿವೇಶನದಲ್ಲಿ.

Mr. SPEAKER.—In the last session, information regarding the extent of holdings has been printed and distributed.

Sri S. SRINIVASA IYENGAR (T.-Narasipur).—Sir, I have a doubt and seek clarification. Under 2-C, it is stated that "the permissible holding in respect of any one person shall be an extent of arable land equal to twenty-five standard acres." Just now, the Hon'ble Minister was pleased to say that it referred to the tenants. Does he mean that he is going to amend the word any "person" as any "tenant"?

Sri Kadidal MANJAPPA.—It refers to the tenant as well as to a landlord. The permissible holding applies both to the landlord and the tenant.

Sri S. SRINIVASA IYENGAR.—Just now, you were pleased to say that no upper limit is being contemplated under this Bill and that everybody is free to hold any extent. If it is really meant for the purpose of limiting the acreage of a tenant, limit it both to the tenant as well as the landlord.

Sri Kadidal MANJAPPA.—It does not preclude the landlord from purchasing land apart from the lands in his ownership.

Sri S. SRINIVASA IYENGAR.—I cannot understand the explanation given by the Hon'ble Minister, Sir. On page 30 of the Bill there is a provision to restrict the area up to which a landlord can buy. Section 31 (*b*), sub-section (6), para (*c*), (*d*) and (*e*). There, there is a limit fixed for the purchase of land by a land-lord.

Sri Kadidal MANJAPPA.—A limit is fixed for the resumption as well as for the purchase by the tenant, and for the ownership, the extent to be retained by the landlord when the tenant claims to have the right to purchase.

Sri S. SRINIVASA IYENGAR.—What about the upper limit?

Sri Kadidal MANJAPPA.—It does not preclude the landlord from purchasing the land elsewhere.

Sri J. MOHAMED IMAM.—Sir, I have another doubt. So far as a joint Hindu family is concerned, you have allowed an upper limit of 100 acres. What about those who do not come under the Hindu law, and for whom the joint family system is not existing? I am speaking of the Mohamedan law. According to the Mohamedan law, there is no question of a joint family. The father is the sole owner. As long as he is alive, his sons and daughters have no right in the property. It is only after his death that the heir or heirs can get his property. Take the case of a Muslim gentleman who owns two hundred acres of land. Suppose he has a dozen sons and daughters. All of them get a share in the property only after the father's death. How are you going to apply this law to the Muslims? Accordi g to this law, he cannot hold more than 25 acres. Even though there is no question of a joint family system amongst the Muslims, he is permitted to hold only 25 acres according to this law. So after his death, all his children will be left in the lurch.

Mr. SPEAKER.—That is a real difficulty so far as the Muslims are concerned. That can be suitably amended in the Select Committee.

Sri A. BHEEMAPPA NAIK.—Instead of the words joint Hindu family, the word joint living will solve the problem. So far as the others are concerned, we can use the words joint living who are heirs after the death of the previous holder. If it is proved

that they are living together, the problem can be solved. Some such explanation can be put.

Mr. SPEAKER.—I see that every Hon'ble Member has some difficulty. All those difficulties cannot be now overcome unless the Bill is referred to the Select Committee where these objections may be reviewed by the Select Committee and suitable amendments made in the Bill.

Sri K. PUTTASWAMY.—Of course, Sri Bheemappa Naik should be a member of the Select Committee.

Mr. SPEAKER.—Instead of wasting the time of the House, the members can speak on the provisions of the Bill so that those things may be taken into consideration by the Select Committee. No use is being served by Hon'ble Members putting questions to elicit information. I therefore call upon Sri Hutche Gowda to speak.

Before Sri Hutche Gowda begins, I want to know the opinion of the House regarding time limit. Because, this Bill is being discussed even from the last session. . . .

Sri A. BHEEMAPPA NAIK.—Only once, Sir.

Mr. SPEAKER.—Therefore, I am saying. Now, the Bill is at the consideration stage. Supposing we accept the principles of the Bill, it will then go to the Select Committee. I therefore want to know how long it can be debated upon.

Sri J. MOHAMED IMAM.—Sir, some of us have very strong views and so we may be permitted to express our views either today or tomorrow.

Mr. SPEAKER.—I have no objection to give a chance to all the members. I think it is better to limit the time. So many members have already expressed their views on many of the provisions. Unless we put a time-limit, we will not be able to finish this Bill in this session. At this rate, it may take 15 days to finish the Bill.

Sri H. M. CHANNABASAPPA (Periyapatna).—I would like to suggest that no time limit be fixed on members for disscussing this Bill.

2 P.M.

This is a Bill which seems to change the existing order which has been in existence for a long time and which is intended to make very violent changes and we have to express our views and to see how far it is advantageous. So, no restriction need be placed on the speeches. It is true that this Bill has been pending from the last session. During the last Session, Sri Bheemappa Naik was the only Member who spoke. During this session, I think only three or four have taken part. It is a very important Bill and we can continue tomorrow and if it is not over tomorrow, I think we can take it up on some other day. I am anxious that the entire Bill is thrashed out which is in the interest of the Government and in the interest of the country.

Sri Mulka GOVINDA REDDY.—There should not be hurried legislation. This is a very important Bill. So, all the members of the Assembly should be given proper chances to express their views, and it should not be hustled through simply because there is no time.

Mr. SPEAKER.—I entirely agree with the Hon'ble Members. But may I request the Hon ble Members not to repeat arguments but limit their arguments to important pionts ?

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಈ ಮಸೂದೆಯನ್ನು ಅನೇಕ ವಿಧದಲ್ಲಿ improve ಮಾಡಬೇಕಾಗಿದೆ. ಆದಾಗ್ಯೂ ಕೂಡ ಈ ಮಸೂದೆಯನ್ನು ಸ್ವಾಗತಿಸಿ ಒಂದೆರಡು ಮಾತುಗಳನ್ನು ಆಡುತ್ತೇನೆ. ಮುಖ್ಯವಾಗಿ ಇದರಲ್ಲಿ ಮಾಡಬೇಕಾದ ಕೆಲವು ಬದಲಾವಣೆಗಳನ್ನು ಸೂಚಿಸಬೇಕೆಂದು ನಾನು ನಿಂತಿದ್ದೇನೆ. ಷಿಕ್ಮಿಗೆ ಸಂಬಂಧಪಟ್ಟ ಈ ಬಿಲ್ಲು 1948ನೇ ಇಸವಿಯಿಂದಲೂ ಕೂಡ ಒಂದಲ್ಲ ಒಂದು ವಿಧದಲ್ಲಿ ಶಾಸನ ಸಭೆಗಳ ಮುಂದೆ ಬಂದು ಅದಕ್ಕೆ ತಿದ್ದುಪಡಿಗಳೂ ಕೂಡ ಆಗುತ್ತಲೇ ಬಂದಿವೆ. ಹೆಚ್ಚಿನ ಬದಲಾವಣೆಗಳನ್ನು ಈಗ ಈ ಮಸೂದೆಯಲ್ಲಿ ಸೂಚಿಸಿದ್ದಾರೆ. ಅಷ್ಟು ಸಾಲದೆಂದು ನನ್ನ ಅಭಿಪ್ರಾಯ. ಮುಖ್ಯವಾಗಿ ನಮ್ಮ ದೇಶದಲ್ಲಿ ಶೇಕಡ 75 ಜನ ವ್ಯವಸಾಯಗಾರರು. ಮೊದಲಿನಿಂದಲೂ ಸಾಲದ ಹೊರೆಯಿಂದಲೋ ಅಜ್ಞಾನದಿಂದಲೋ ರೈತರುಗಳ ಆರ್ಥಿಕ ಸ್ಥಿತಿ ಕೀಳುದೆಸೆಯಲ್ಲಿದೆ. ಅವರ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕು ಎಂಬುದಾಗಿ ಈ ಬಿಲ್ಲನ್ನು ಒತ್ತಾಯಪಡಿಸುತ್ತಿದ್ದಾರೆ. ಈ ಬಿಲ್ಲನ್ನು ಅನೇಕ ದಿನಗಳಿಂದ ಸರ್ಕಾರದವರು ಹಿಂದಕ್ಕೆ ಹಾಕಿಕೊಂಡು ಹೋಗುತ್ತಾ ಬಂದಿದ್ದಾರೆ. ಈ ಸಲ ಇದು ಸಭೆಯ ಮುಂದೆ ಬಂದಿದೆ. ಇದು ಈಗ ಆಗುವುದು ಅತ್ಯಾವಶ್ಯಕ. ಆದ್ದರಿಂದ ನಾನು ಮಾನ್ಯ ಸದಸ್ಯರನ್ನು ಇದರಲ್ಲಿ ಇರತಕ್ಕ ಕೆಲವು ನ್ಯೂನತೆಗಳನ್ನು ಸರಿಪಡಿಸಿ ಜಾಗ್ರತೆಯಾಗಿ ಈ ಮಸೂದೆಯನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗತಾನೆ ರೆವೆನ್ಯೂ ಮಂತ್ರಿಗಳು ಒಂದೆರಡು ವಿಚಾರಗಳನ್ನು

(ಶ್ರೀ ಬಿ. ಹುಚ್ಚೇಗೌಡ.)

ಸ್ಪಷ್ಟವಾಗಿ ವಿವರಿಸಿದ್ದಾರೆ. ಆದರೆ ಈ ಮಸೂದೆಯಲ್ಲಿ ಜಮೀನ್‌ದಾರರಿಗೂ ಷಿಕ್ಮಿದಾರರಿಗೂ ಇರುವ ವ್ಯವಹಾರದಲ್ಲಿ ಬಂದಿರತಕ್ಕ ಕೆಲವು ನ್ಯೂನತೆಗಳಿಗೆ ಪರಿಹಾರ ಒದಗಿಸಿರುವುದಲ್ಲದೇ ಷಿಕ್ಮಿದಾರರು ಎಷ್ಟು ಜಮೀನು ಹೊಂದಿರಬಹುದೆಂಬುದು ಹೇಳಿದೆ. ಇದೇ ರೀತಿ ಜಮೀನುದಾರರ ವಿಷಯದಲ್ಲಿ ಕೂಡ ಹೇಳಿದೆ. ಕ್ಲಾಸು 31-B (8) (*a*) ನಲ್ಲಿ ಹೇಳಿರುವುದು ಅರ್ಥವಾಗಲಿಲ್ಲ. ಅದರಲ್ಲಿ ಹೀಗೆ ಹೇಳಿದೆ :

'(8) Nothing in the foregoing provisions of this Section shall apply to the land of a landlord,

"(*a*) who holds arable land, as an owner, the total extent of which in the whole of India does not exceed the area of a permissible holding ;"

ಮುಖ್ಯವಾಗಿ ರೈತರಿಗೆ ಭೂಮಿಯನ್ನು ಸಾಗುವಳಿ ಮಾಡುವುದರಲ್ಲಿ ಒಂದು ಸರಿಸಮಾನತೆ ಇರಬೇಕು. ಸ್ವಾತಂತ್ರ್ಯವಿರಬೇಕು, ಮತ್ತು ಅದರ ಜೊತೆಗೆ ದಕ್ಷತೆಯೂ ಇರಬೇಕು. ಇದು ನನ್ನ ಅಭಿಪ್ರಾಯ. ಆದರೆ ಈ ಮೂರೂ ಒಂದು ಕಡೆ ಸೇರುವುದು ಹೇಗೆಂಬುದನ್ನು ನೋಡಬೇಕು. ಸ್ವಾತಂತ್ರ್ಯ ಸಿಕ್ಕಿ ದಕ್ಷತೆಯಿಂದ ನಡೆಸಬೇಕೆಂದರೆ ಅದು ಸಾಧ್ಯವಿಲ್ಲ. ಅದಕ್ಕೆ ಸಾಕಾದಷ್ಟು ಜಮೀನುಕೂಡ ಇರಬೇಕು. ಮೊದಲನೆಯದಾಗಿ ರೈತನಾದವನಿಗೆ ಸ್ವೇಚ್ಛೆಯಿಂದ ಸಾಗುವಳಿ ಮಾಡುವುದಕ್ಕೆ ಅವಕಾಶವಿರಬೇಕು. ಅದಕ್ಕೆ First priority ಕೊಟ್ಟು ಸಹಾಯಮಾಡಬೇಕಾದದ್ದು ಅತ್ಯಾವಶ್ಯಕ. ಸ್ವತಂತ್ರವಾಗಿ ಜಮೀನನ್ನು ಸಾಗುವಳಿ ಮಾಡುವುದಕ್ಕೂ ಮತ್ತು ಅದರ ಮೂಲಕ ವ್ಯವಹಾರ ಮಾಡುವುದಕ್ಕೂ ಸರ್ಕಾರಕ್ಕಾಗಲಿ, ಮತ್ತೆ ಯಾರಿಗೇ ಆಗಲಿ ಆ ಭೂಮಿಯನ್ನು ಆಧಾರ ವಗೈರೆ ಮಾಡಿ ಸಕಾಲದಲ್ಲಿ ದುಡ್ಡು ತೆಗೆದುಕೊಳ್ಳುವುದಕ್ಕೂ ಮತ್ತು ಜಮೀನು ಅಭಿವೃದ್ಧಿ ಮಾಡುವುದಕ್ಕೂ ಅವಕಾಶವಿರಬೇಕು ; ಈ ಉದ್ದೇಶದಿಂದಲೇ Tenancy Actನ್ನು ತಂದಿದ್ದಹಾಗಿದೆ. ಇದರಲ್ಲಿ ಇನ್ನೂ ಒಂದು ಉದ್ದೇಶವಿದೆ. ಷಿಕ್ಮಿದಾರರಿಗೂ ಕೂಡ ಸಾಧ್ಯವಾದಮಟ್ಟಿಗೆ ಜಮೀನು ಸಿಕ್ಕಬೇಕಾದದ್ದು ನ್ಯಾಯವಾದದ್ದು. ಆದ್ದುದರಿಂದಲೇ ಅದಕ್ಕೆ ಒಂದು ಮಸೂದೆಯನ್ನು ಕಡ್ಡಾಯವಾಗಿ ಜಾರಿಗೆ ತರಬೇಕಾಗಿದೆ. ಇದರಲ್ಲಿ 25 ಎಕರೆ ನಿಷ್ಕರ್ಷೆಮಾಡಿದ್ದಾರೆ. ನಮ್ಮ ದೇಶದಲ್ಲಿ ಒಂದೊಂದು ಕಡೆ ಒಂದೊಂದು ಪರಮಾವಧಿ ನಿಷ್ಕರ್ಷೆ ಮಾಡಿದ್ದಾರೆ. ಉದಾಹರಣೆಗೆ ಬೊಂಬಾಯಿನಲ್ಲಿ 50 ಎಕರೆ ಮಾಡಿದ್ದಾರೆ. ಬೇರೆ ಪ್ರಾಂತ್ಯಗಳಲ್ಲಿ ಬೇರೆ ತರಹ ಮಾಡಿದ್ದಾರೆ. ಮೊನ್ನೆತಾನೆ Travancore-Cochinನಲ್ಲಿ ಇಂಥ ಬಿಲ್ಲನ್ನು ತಂದಿದ್ದಾರೆ. ಆ ಬಿಲ್ಲಿನ ಪ್ರಕಾರ ಸುಮಾರು ಒಬ್ಬ ಮನುಷ್ಯನಿಗೆ 18 ಎಕರೆಗಳನ್ನು ನಿರ್ಧಾರಮಾಡಿದ್ದಾರೆ. ಅಲ್ಲಿ 31 ಲಕ್ಷ ಎಕರೆ ಸಾಗುವಳಿಗೆ ಜಮೀನು ಸಿಕ್ಕುವಂಥಾದ್ದು ಇದೆ. ಅದರ ಜನಸಂಖ್ಯೆ ನಮ್ಮ ಮೈಸೂರು ದೇಶದಷ್ಟೇ ಅಂದರೆ 95 ಲಕ್ಷವಿದೆ. ಅಲ್ಲಿ ಜಮೀನಿನ ಅಭಾವವಿದೆ; ಇಲ್ಲಿ ಜಮೀನಿನ ಪರಮಾವಧಿ 25 ಎಕರೆ ಎಂದು ನಿಗದಿ ಮಾಡಿದ್ದಾರೆ. ಯಾವುದಾದರೂ ಒಂದು ನಿಗದಿ point ಇರಬೇಕಾದದ್ದು ನ್ಯಾಯವಾದದ್ದು. ಆದ್ದರಿಂದ 25 ಎಕರೆ ಇಟ್ಟಿರುವುದು ಸರಿಯೆಂದು ನನ್ನ ಅಭಿಪ್ರಾಯ. ಮುಂದೆ ಬೇಕಾದರೆ ಇದನ್ನು ಬದಲಾಯಿಸಿಕೊಳ್ಳಬಹುದು. ಆಮೇಲೆ, ಇದರಲ್ಲಿ ಒಂದು ಲೋಪವಿದೆ; ಅದೇನೆಂದರೆ ಜಮೀನು ಸಾಗುವಳಿಮಾಡಿ ಅದರಲ್ಲಿ ತನ್ನ ಜೀವನಕ್ಕೆ ಆಗುವಷ್ಟು ಮಾಡಬೇಕಾದರೆ ಒಂದು ಕಡೆ ಒಂದು ನಿಗದಿಯಾದ ಕನಿಷ್ಠ ದರ್ಜೆ ಹಿಡುವಳಿ ಇರಬೇಕಾದದ್ದು ಆವಶ್ಯಕ. ಇದನ್ನು ಕೂಡ ಈ ಕಾನೂನಿನಲ್ಲಿ ತಂದಿದ್ದರೆ ಬಹಳ ಚೆನ್ನಾಗಿತ್ತು. Consolidation of holdings ಮಾಡಿದರೆ ಬಹಳ ಅನುಕೂಲವಾಗುತ್ತದೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಹೇಗೆ ನೀವು ಹೆಚ್ಚಾಗಿ ಹಿಡುವಳಿ 25 ಎಕರೆಗಿಂತ ಮೀರಕೂಡದು ಎಂದು ಹೇಳುತ್ತೀರೋ, ಹಾಗೆಯೇ ಜಮೀನನ್ನು ಇಷ್ಟೇ ಭಾಗಮಾಡಬೇಕು ಎಂಬುದನ್ನು ನಿರ್ಧಾರಮಾಡಬೇಕೆಂದು ನಾನು ಸೂಚನೆಮಾಡುತ್ತೇನೆ. ಮತ್ತು ಜಮೀನನ್ನು ಅದಲು ಬದಲು ಮಾಡುವುದಕ್ಕೆ ಈ ಕಾನೂನಿನಲ್ಲಿ ಅವಕಾಶ ಮಾಡಿಕೊಡಬೇಕು. ಹಾಗೆ ಮಾಡಿದರೆ ಅದು co-operative farm ಸ್ಥಾಪನೆ ಮಾಡಿದಹಾಗಾಗುತ್ತದೆ. Uneconomic holdings ಸಾಧ್ಯವಾದಮಟ್ಟಿಗೂ ತಪ್ಪಿಸಬೇಕು. ಅದು ನಮ್ಮ ಜನರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಮೊದಲನೇ ಮಾರ್ಗ. ಈಗಾಗಲೇ ಶ್ರೀಮಾನ್ ಭೀಮಪ್ಪ ನಾಯಕರು ಅನೇಕ ಸಂಶಯಗಳನ್ನು ವ್ಯಕ್ತಪಡಿಸಿದ್ದಾರೆ. ಅವು ನ್ಯಾಯವಾದವೆಂದು ಒಪ್ಪಿಕೊಳ್ಳುತ್ತೇನೆ. ಜಮೀನುದಾರರ ಮಟ್ಟಿಗೆ ಮಾತ್ರ ಇಂತಹ ಮಸೂದೆ ಅನ್ವಯಿಸಬೇಕು, ಇತರರಿಗೆ ಇದು ಅನ್ವಯಿಸಕೂಡದು ಎಂಬುದು ಸರಿಯಾದ ವಾದವಲ್ಲ. ಪ್ರಪಂಚದಲ್ಲಿ ವ್ಯವಸಾಯದಮೇಲೆ ಜೀವನ ಮಾಡಿಕೊಂಡಿರುವವರು ಇಂಡಿಯಾ ದೇಶ ಬಿಟ್ಟರೆ ಬೇರೆ ಎಲ್ಲೂ ಇಲ್ಲ. ಅಮೆರಿಕಾದಲ್ಲಿ ಶೇಕಡ 17 ಜನ ವ್ಯವಸಾಯ ಮಾಡುತ್ತಾರೆ. ನಮ್ಮಲ್ಲಿ ಶೇಕಡ 70ರಷ್ಟು ವ್ಯವಸಾಯದ ಮೂಲಕ ಜೀವನ ಮಾಡುತ್ತಾರೆ. ಎಷ್ಟು ಜನ ತಾನೆ ಈ ಭೂಮಿಯಿಂದ ಜೀವನ ಮಾಡಲು ಸಾಧ್ಯ? ಈ ಭೂಮಿಯಮೇಲೆ ಇರುವ ಒತ್ತಡವನ್ನು ಕಡಿಮೆಮಾಡುವುದು ಸರ್ಕಾರದ ಮುಖ್ಯ ಕರ್ತವ್ಯ. ಅದೇರೀತಿ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆಮಾಡುತ್ತಾ ಬರುತ್ತಿದ್ದಾರೆ. ಒಂದುವೇಳೆ ಜಮೀನ್‌ದಾರರು ಹೆಚ್ಚಾಗಿದ್ದು ಅವರ ಜಮೀನು ತೆಗೆದುಕೊಂಡು ಅವರಿಗೆ ಉದ್ಯೋಗ ಕಲ್ಪಿಸಬೇಕಾದರೆ ಇಂತಹ ಕಾನೂನನ್ನು ಜಾರಿಗೆ ತರುವುದು ಸುಲಭವಾಗುತ್ತದೆ. ಇದನ್ನು ಜಾಗ್ರತೆ ಈ ರೀತಿ ಮಾಡಬೇಕಾದುದು ಅನಿವಾರ್ಯವಾಗಿದೆ. ರೈತರಿಗೆ ಸಾಲದ ಹೊರೆ ಬಹಳ ಜಾಸ್ತಿಯಾಗಿದೆ. ಸಾಲ ತೀರಿಸಬೇಕಾದರೆ ಅವನಿಗೆ ಸ್ವಲ್ಪಮಟ್ಟಿಗೆ ಸ್ವತಂತ್ರ ಬೇಕು. ಅವನ ಅಂತಸ್ತು ಉತ್ತಮವಾಗಬೇಕು, ಅವನಿಗೆ ಬರತಕ್ಕ ಆದಾಯ ಉತ್ತಮಗೊಳ್ಳಬೇಕು. ಅವನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಸುಧಾರಣೆಯನ್ನು ತರಬೇಕೆಂದು ಹೇಳುತ್ತೇನೆ.

1931ನೇ ಇಸವಿಯಲ್ಲಿ Banking Enquiry Committee ಯವರು ಒಂದು ವರದಿಯನ್ನು ಕೊಟ್ಟರು. ಅದರಲ್ಲಿ ರೈತರಿಗೆ ಇರತಕ್ಕ ಸಾಲ 900 ಕೋಟಿ ರೂಪಾಯಿಗಳೆಂದು ಅಂದಾಜಾಗಿದೆ. ಇಷ್ಟೇ ಅಲ್ಲ, ಕಂದಾಯ ಎಷ್ಟು ಕೊಡುತ್ತಾರೆ, ಇವರು ಕೇಳತಕ್ಕ ಕಂದಾಯ ಎಷ್ಟು, ಮತ್ತು 900 ಕೋಟಿ ರೂಪಾಯಿಗಳಿಗೆ ಬಡ್ಡಿ ಎಷ್ಟು ಕೊಡುತಾರೆ ಅಂದರೆ ದಾಮಾಷಾ ಪ್ರಕಾರ ರೈತರು ರೂಪಾಯಿಗೆ ಒಂಬಾಣೆಯಿಂದ ಒಂದೂವರಾಣೆವರೆಗೆ ಒಂದು ತಿಂಗಳಿಗೆ ಕೊಡುತಾರೆ. ಇದು ಶೇಕಡ 75ರಷ್ಟು ಬಡ್ಡಿ ಆಗುತ್ತದೆ. ಈ ಬಡ್ಡಿ ಕೊಟ್ಟು ಸಾಗುವಳಿದಾರರು

ಒಂದು ಹೋಲ್ಡಿಂಗ್‌ಕೂಡ ಇಲ್ಲದೆ ಇದರ ಜೊತೆಗೆ ಜಮೀನ್‌ದಾರರಿಗೆ ಬಂದಿದ್ದರಲ್ಲಿ ಅಲ್ಪ ಸ್ವಲ್ಪ ಕಂದಾಯ, ಬಡ್ಡಿ, ಮುಂತಾದುವನ್ನು ಕೊಟ್ಟರೆ ಆತನಿಗೆ ಏನೇನೂ ಉಳಿಯುವುದಿಲ್ಲ. ಅವನ ಸ್ಥಿತಿ ಬಹಳ ಶೋಚನೀಯವಾಗುತ್ತದೆ. Tax ಕೂಡ ನೂರು ಕೋಟಿ ಆಗುತ್ತದೆ. Land revenue ಸುಮಾರು 75 ಕೋಟಿ ರೂಪಾಯಿ ಇಂಡಿಯಾ ದೇಶದಲ್ಲಿ ಕೊಡಬೇಕಾಗುತ್ತದೆ. Local Cess ಮುಂತಾದುವು 150 ಕೋಟಿ ರೂಪಾಯಿ ಆಗುತ್ತದೆ. ಆಮೇಲೆ ಬಡ್ಡಿ ಕೊಟ್ಟಮೇಲೆ ಅವನಿಗೆ ಏನೇನೂ ಉಳಿಯುವುದಿಲ್ಲ. ಸಾಧ್ಯವಾದಮಟ್ಟಿಗೆ ಜಮೀನ್‌ದಾರನ ಸ್ಥಿತಿಯನ್ನು ಉತ್ತಮಪಡಿಸಬೇಕು, ಅದಕ್ಕೆ ಈ ಸುಧಾರಣೆ ಅಗತ್ಯವಾಗಿದೆಯೆಂದು ಹೇಳುತ್ತೇನೆ.

ಇದೇ ರೀತಿಯಾಗಿ ಬ್ರಿಟಿಷರು ನಮ್ಮ ದೇಶದಲ್ಲಿ ಇದ್ದಾಗಲೂ P. G. Thomas ಎಂಬವರು ಈ ವಿಷಯದಲ್ಲಿ ಪರಿಶೀಲನೆ ನಡೆಸಿ ರೈತರ ಋಣ ಎಷ್ಟು ಎಂಬುದನ್ನು ಹೇಳಿದ್ದಾರೆ. ಅದು 1935ನೆಯ ಇಸವಿಯಲ್ಲಿ. ಈಚೆಗೆ ರಿಸರ್ವ್ ಬ್ಯಾಂಕಿನವರು ನಡೆಸಿದ ಪರಿಶೀಲನೆಯಿಂದ 1,200 ಕೋಟಿ ರೂಪಾಯಿಗಳಷ್ಟು ರೈತರಿಗೆ ಸಾಲವಿದೆಯೆಂದು ಗೊತ್ತುಮಾಡಿದ್ದಾರೆ. ಅದರ ಮೇಲೆ ರೈತರಿಗೆ ಸಾಕಷ್ಟು ಸಹಾಯ ಮಾಡಬೇಕೆಂದು ಹೇಳಿ ಶೇಕಡ $1\frac{1}{2}$ಯಂತೆ ಸಾಲ ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಆದರೆ, ಈ ಸಾಲಗಳ ಪಡೆಯಬೇಕಾದರೂ ಒಂದು ಆಸ್ತಿಯ ಆಧಾರ ಕೊಡಬೇಕು. ಜಮೀನೇನಾದರೂ ಇದ್ದರೇನೇ ಈ ಸಾಲ ಸಿಕ್ಕುವುದು. ಅದಿಲ್ಲದಿದ್ದರೆ ಸಾಧ್ಯವಿಲ್ಲ. ಆ ಉದ್ದೇಶ ಸಾಧನೆಗಾಗಿ ಈ ಬಿಲ್ಲನ್ನು ತಂದಿರುವುದಾಗಿದೆ.

ನಮ್ಮ ದೇಶದಲ್ಲಿ ಶ್ರೀಮಂತರು ಅಂದರೆ, $1\frac{1}{2}$ಲಕ್ಷ ರೂಪಾಯಿಗಳ ಮೇಲ್ಪಟ್ಟು ಆದಾಯವಿರುವವರು 1,286 ಎಂದು ಗೊತ್ತಾಗಿದೆ. ಅವರ ಒಟ್ಟು ಉತ್ಪತ್ತಿ 43 ಕೋಟಿ ರೂಪಾಯಿಗಳು. ಇದರಲ್ಲಿ ಅವರು ಒಟ್ಟು ಕೊಡತಕ್ಕ ಆದಾಯತೆರಿಗೆ 29 ಕೋಟಿ ರೂಪಾಯಿಗಳನ್ನು ಬಿಟ್ಟರೂ ಇನ್ನೂ 14 ಕೋಟಿ ಅವರಲ್ಲಿ ಉಳಿದಷ್ಟಾಯಿತು. ಇದೇನೂ ಕಡಮೆ ಮೊಬಲಗಲ್ಲ. ಈ 14 ಕೋಟಿ ಹಂಚಿದರೂ ಒಬ್ಬರಿಗೂ $1\frac{1}{4}$ ಲಕ್ಷ ರೂಪಾಯಿ ಆಗುತ್ತದೆ; ಬೇಕಾದಷ್ಟಾಯಿತು. ಹೀಗಿದ್ದರೂ, ಅವರನ್ನೆಲ್ಲಾ ಬಿಟ್ಟು ಏಕೆ ಜಮೀನ್ದಾರರ ಮೇಲೆ ಏಕೆ ಕೈಹಾಕುತ್ತಿದ್ದಾರೋ ಎಂದು ಶ್ರೀಮಾನ್ ...ಮಪ್ಪನಾಯಕರು ಹೇಳಿದರು.

ಒಬ್ಬ ಸದಸ್ಯರು.—ಇದು first step ಎಂದು ...ೇಳಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—First step ಆಗ...ಹುದು. ಆದರೆ ಎಲ್ಲಿಂದ ಮೊದಲು ಷುರುಮಾಡು...ದು. ಯಾವುದನ್ನು ಮುಂಚೆ tackle ಮಾಡ...ೇಕು. ಇದೇನೋ ರೈತರಿಗೆ ಅತ್ಯಾವಶ್ಯಕವಾದದ್ದು ...ಂಬುದನ್ನು ನಾನು ಒಪ್ಪುತ್ತೇನೆ. ಆ ದೃಷ್ಟಿಯಿಂದಲೇ ...ದನ್ನು ಸ್ವಾಗತಿಸಲೂ ಸಹ ಬೇಕು. ಆದರೆ, ಅದನ್ನು ...ೂಡ ಮಾಡುವುದು ಮುಖ್ಯ ಎಂದು ಹೇಳುತ್ತೇನೆ. ಆ ಮೇಲೆ, ಷಿಕ್ಮಿದಾರನನ್ನು ಬದಲಾಯಿಸಬೇಕಾ...ರೆ ಆರು ತಿಂಗಳ ನೋಟೀಸ್ ಕೊಡಬೇಕೆಂದು ಹೇಳಿ...ುದು ನಿಯಮವಿದ್ದರೆ ಚೆನ್ನಾಗಿತ್ತು.

ಶ್ರೀ ಕಡಿದಾಳ್ ಮಂಜಪ್ಪ.—ಒಂದು ವರ್ಷ time ...ಟ್ಟಿದೆ.

ಶ್ರೀ ಬಿ. ಹುಚ್ಚೇಗೌಡ.—ಆ ಮೇಲೆ, ಒಂದು ವೇಳೆ ...ಾಲೀಕನು ಜಮೀನನ್ನು ಮಾರುವುದಕ್ಕೆ ಒಪ್ಪಿದರೂ ...ತನಿಗೆ ಕೊಂಡುಕೊಳ್ಳುವುದಕ್ಕೆ ಶಕ್ತಿಯಿಲ್ಲ. ನೀವು ಈ ಮಸೂದೆಯಲ್ಲಿ ಸೂಚಿಸಿರುವಂತೆ ಮಾಲೀಕನಿಗೆ ನೋಟೀಸೇನೋ ಕೊಡಬಹುದು. ಆದ್ದರಿಂದ ಇಂಥ ಸಂದರ್ಭಗಳಿಗೆ ಅನುಕೂಲವಾಗಬೇಕಾದರೆ Tenants Purchasing Fund ಎಂದು ಒಂದು ಫಂಡನ್ನು ಏರ್ಪಾಡು ಮಾಡಬೇಕು. ಹೀಗಾದರೇನೇ ರೈತರುಗಳು ಜಮೀನ್ದಾರರಿಂದ ವಿಮುಕ್ತರಾಗಿ ಮಾಯಿದೆಯೊಳಗೆ ತಮ್ಮ ಜಮೀನನ್ನು ಹೊಂದುವುದಕ್ಕೆ ಅವಕಾಶವಾಗುತ್ತದೆ. 10-15 ವರ್ಷಗಳಲ್ಲಿ ಬೇಕಾದರೆ, ರೈತರಿಗೆ ಈ ಪ್ರಕಾರ ಕೊಟ್ಟ ಸಾಲವನ್ನು ವಾಪಸು ತೆಗೆದುಕೊಳ್ಳುವಂತೆ ಮಾಡಬೇಕೆಂದು ನಾನು ಸೂಚಿಸುತ್ತೇನೆ. ಅಲ್ಲದೆ ಇನಾಂತಿ ರದ್ದಿಯಾತಿ ಮುಂತಾದ ರೀತಿಯಲ್ಲಿ ಬಿಡುಗಡೆಯಾಗಿರುವ ಜಮೀನುಗಳನ್ನು ಲ್ಯಾಂಡ್ ಕಾರ್ಪೊರೇಷನ್ ಎಂಬ ಒಂದು ಸೊಸೈಟಿಯನ್ನೋ ಸಂಘವನ್ನೋ ಏರ್ಪಡಿಸಿ ಆ ಮೂಲಕ ನಡೆಸುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು fair rent ವಿಚಾರದಲ್ಲಿ, ಇತರ ದೇಶಗಳಲ್ಲಿ ನೋಡಿದರೆ, ಅಸ್ಸಾಂನಲ್ಲಿ ಎತ್ತುಗಳು ವಗೈರೆ ಸಲಕರಣೆಗಳನ್ನು ಕೊಟ್ಟಿದ್ದರೆ $\frac{1}{4}$ಭಾಗ ಎಂತಲೂ, ಇಲ್ಲದಿದ್ದರೆ $\frac{1}{3}$ಭಾಗ ಎಂತಲೂ ಗೊತ್ತುಮಾಡಿದ್ದಾರೆ. ಬಿಹಾರಿನಲ್ಲಿ 50 ಶೇಕಡ ಎಂದಿದೆ. ಬೊಂಬಾಯಿನಲ್ಲಿ 1/6 ಭಾಗ ಕೊಡಬೇಕೆಂದಿದೆ. ಮಧ್ಯ ಪ್ರದೇಶದಲ್ಲಿ $\frac{1}{3}$ಭಾಗ, ಒರಿಸ್ಸಾದಲ್ಲಿ 2/5 ಭಾಗ, ಮದ್ರಾಸಿನಲ್ಲಿ 3/5 ಭಾಗ ಮತ್ತು ಮಲಬಾರಿನಲ್ಲಿ 3/5 ಭಾಗ, ಹೈದರಾಬಾದಿನಲ್ಲಿ ಕಂದಾಯದ ನಾಲ್ಕರಷ್ಟು ಐದರಷ್ಟು—ಈರೀತಿ ಗೊತ್ತುಮಾಡಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಸೌರಾಷ್ಟ್ರದಲ್ಲಿ ಕಂದಾಯದ $1\frac{1}{2}$ಯಷ್ಟಿದೆ!

ಶ್ರೀ ಬಿ. ಹುಚ್ಚೇಗೌಡ.—ಇದನ್ನೆಲ್ಲಾ ಗಣನೆಗೆ ತೆಗೆದುಕೊಂಡು ನಮ್ಮ ದೇಶದ ಸ್ಥಿತಿಗತಿಗನುಗುಣವಾಗಿ 1/3 ಭಾಗವೆಂದು ಗೊತ್ತುಮಾಡಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—Rentನ್ನು 1/3 ಭಾಗಕ್ಕೆ ಇಳಿಸಬೇಕೆಂದೇ ನಿಮ್ಮ ಸೂಚನೆ?

ಶ್ರೀ ಬಿ. ಹುಚ್ಚೇಗೌಡ.—ಹೌದು. ಇಷ್ಟು ಹೇಳಿ ಈ ಮಸೂದೆಯು ಸೆಲೆಕ್ಟ್ ಕಮಿಟಿಗೆ ಹಾಕುವುದಕ್ಕೆ ನಾನು ಒಪ್ಪಿಗೆ ಕೊಡುತ್ತೇನೆ.

ಇನ್ನೊಂದು ವಿಚಾರ ಹೇಳಬೇಕಾಗಿತ್ತು. ಅದು ಜಮೀನನ್ನು ಅದಲು ಬದಲು ಮಾಡುವ ವಿಚಾರ—ಅಂದರೆ Consolidation of holdings ನ ಪ್ರಶ್ನೆ—ಇದನ್ನೂ ಈ ಬಿಲ್ಲಿನಲ್ಲೇ ಸೇರಿಸಿಕೊಳ್ಳಬೇಕು.

ಶ್ರೀ ಕಡಿದಾಳ್ ಮಂಜಪ್ಪ.—Consolidation of Holdings ವಿಚಾರ ಸೇರಿಸುವುದಕ್ಕಾಗುವುದಿಲ್ಲ. This regulates only the relationship between the landlord and the tenant and determines the rights and liabilities of the two persons.

ಶ್ರೀ ಬಿ. ಹುಚ್ಚೇಗೌಡ.—ಆ ಮೇಲೆ ಜಮೀನ್ದಾರರು ಜಮೀನನ್ನು ವಾಪಸು ತೆಗೆದುಕೊಳ್ಳಬೇಕಾದರೆ, ರಕ್ಷಿಸಲ್ಪಟ್ಟಿರುವ ಷಿಕ್ಮಿ, ರಕ್ಷಿಸಲ್ಪಡದಿರುವ ಷಿಕ್ಮಿಯೆಂದು ವ್ಯತ್ಯಾಸಮಾಡಿ ರಕ್ಷಿಸಲ್ಪಟ್ಟಿರುವ ಷಿಕ್ಮಿಯಿಂದ ಮೊದಲು ತೆಗೆದುಕೊಳ್ಳಬೇಕೆಂದೂ ಆಮೇಲೆ ರಕ್ಷಿಸಲ್ಪಡದಿರುವ ಷಿಕ್ಮಿಯಿಂದ ತೆಗೆದುಕೊಳ್ಳಬೇಕೆಂದೂ ಹೇಳಿದೆ. ಹೀಗೆ ಇರಕೂಡದು.

ಶ್ರೀ ಕಡಿದಾಳ್ ಮಂಜಪ್ಪ.—ಹಾಗಿಲ್ಲ. 31(c) ಯನ್ನು ನೋಡಿ.

ಶ್ರೀ ಬಿ. ಹುಚ್ಚೇಗೌಡ.—ಹಾಗಿದ್ದಮೇಲೆ ನಾನದನ್ನು ಒಪ್ಪುತ್ತೇನೆಂದು ಹೇಳಿ ಇದು ಸೆಲೆಕ್ಟ್ ಕಮಿಟಿಗೆ ಹೋಗಲು ನಾನು ಸಮ್ಮತಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಪೆರಿಯಾಪಟ್ಟಣ).—ಸ್ವಾಮಿ, ಭೂ-ಸ್ವಾಮ್ಯಕ್ಕೆ ಸಂಬಂಧಪಟ್ಟಂಥ ಈ ತಿದ್ದುಪಡಿಯುನ್ನ ಮೂಲ ಶಾಸನವು ಆದ ಕೇವಲ ಕೆಲವು ತಿಂಗಳುಗಳಲ್ಲಿ ಮಾತ್ರ ತಂದಿರತಕ್ಕದಾಗಿದೆ. 1952ನೆಯ ಇಸವಿಯಲ್ಲಿ ಈ ಗೇಣೀ ಕಾನೂನು ಸಭೆಯಮುಂದೆ ಮಂಡಿಸಲ್ಪಟ್ಟು ಅದಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನೂ ಕೂಡ ಬಹಳ ಕೂಲಂಕಷವಾಗಿ ಪರಿಶೀಲನೆಮಾಡಿ ಮೈಸೂರು ಸಂಸ್ಥಾನದಲ್ಲಿರತಕ್ಕ ಪರಿಸ್ಥಿತಿಯೇನು, ಇಲ್ಲಿಗೆ ಯಾವ ತೆರದ ಗೇಣೀ ಕಾನೂನು ಬೇಕು, ಯಾವ ರೀತಿ ಭೂಸ್ವಾಮ್ಯದ ಪರಿಸ್ಥಿತಿಯನ್ನು ಬದಲಾಯಿಸಬೇಕೆಂದು ವಿಮರ್ಶೆ ಮಾಡಿ, ಈ ತೆರದ ಆಕ್ಟ್ ಬಂದರೆ ಸಾಕೆಂದು ಹೇಳಿ ಒಮ್ಮತದಿಂದ ಈ ಸಭೆ ಆ ಶಾಸನಕ್ಕೆ ಅಂಗೀಕಾರ ಕೊಟ್ಟಿತ. ಆಗ್ಗೆ ಅನೇಕ ವಿಷಯಗಳು ಸಭೆಯ ಮುಂದೆ ಬಂದುವು. ಶ್ರೀಮಾನ್ ಹುಚ್ಚೇಗೌಡರು ಹೇಳಿದಂತೆ ಸಂಯುಕ್ತ ಸಂಸ್ಥಾನದಲ್ಲಿ ಕಂದಾಯದ ಎರಡರಷ್ಟು, ಮೂರರಷ್ಟು ಗೇಣಿಯಿರಬಹುದು. ಇನ್ನು ಕೆಲವು ಕಡೆ 1/6 ಭಾಗ, 1/8 ಭಾಗವಿದೆಯೆಂದರು ; ಅವೆಲ್ಲವೂ ವಾಸ್ತವ. ಆದರೆ ಅವರು ಹೇಳುವಾಗ ಒಂದು ವಿಷಯ ಮರೆತರು. ಉತ್ತರ ಪ್ರದೇಶದಲ್ಲಿ, ಒರಿಸ್ಸಾದಲ್ಲಿ, ಅಸ್ಸಾಂನಲ್ಲಿ ಮತ್ತು ಇನ್ನೂ ಯಾವ ಯಾವ ಪ್ರದೇಶಗಳನ್ನು ಹೇಳಿದರೋ ಅಲ್ಲೆಲ್ಲಾ ಶೇಕಡ 50ಕ್ಕೆ ಮೇಲ್ಪಟ್ಟು ಜಮೀನು ಜಮೀನ್‌ದ್ದಾರಿಪದ್ಧತಿಯ ಸ್ವಾಮ್ಯಕ್ಕೆ ಒಳಪಟ್ಟಿದೆಯೆಂಬುದನ್ನು ಅವರು ತಿಳಿದಿಲ್ಲ. ಆದ್ದರಿಂದಲೇ ಆ ಪ್ರಾಂತ್ಯಗಳಲ್ಲಿ ಒಬ್ಬೊಬ್ಬ ಜಮೀನ್ದಾರರೂ 20,000, 10,000 ಎಕರೆಗಳನ್ನಿಟ್ಟು ಕೊಂಡು ಕಂದಾಯದ 1½ಯಷ್ಟು 2ರಷ್ಟು ಎಂದು, ಈ ಪ್ರಕಾರ ಗೇಣಿಯನ್ನು ಗೊತ್ತುಮಾಡಿದ್ದು ಸ್ವಾಭಾವಿಕವಾಗಿದೆ. ಇಲ್ಲಿ ನಾವಾದರೋ ಗೇಣಿ ಕಾನೂನನ್ನು ಮಾಡುವಾಗ ನಮ್ಮ ಪರಿಸ್ಥಿತಿಯನ್ನು ನೋಡಿಕೊಂಡು ಇಲ್ಲಿನ ಸನ್ನಿವೇಶಗಳಿಗನುಗುಣವಾಗಿ, ಇಲ್ಲಿನ ಜನತೆಗೆ ಹೊಂದಿಕೊಳ್ಳುವಂತೆ, ಎಲ್ಲರ ಆರ್ಥಿಕ ವ್ಯವಸ್ಥೆಯೂ ಸರಿಯಾಗುವಂತೆ ಮಾಡಬೇಕೇ ವಿನಾ ಬೀಹಾರಿನಲ್ಲಿ, ಬೊಂಬಾಯಿನಲ್ಲಿ, ಉತ್ತರ ಪ್ರದೇಶದಲ್ಲಿ ಯಾವುದೋ ರೀತಿ ಕಾನೂನು ಮಾಡಿದ್ದಾರೆಂದು ಹೇಳಿ ನಾವೂ ಅ ರೀತಿ ಮಾಡಬೇಕೆನ್ನುವುದರಲ್ಲಿ ಹುರುಳಿಲ್ಲ. ನಮ್ಮ ದೇಶದಲ್ಲಿರತಕ್ಕ ಖಾಯಿಲೆ ಏನು, ಯಾವ ಪ್ರಮಾಣದಲ್ಲಿ ಆ ಖಾಯಿಲೆಯಿದೆ ಎಂಬುದನ್ನು ಪರಿಶೀಲನೆ ಮಾಡಿ ಅದಕ್ಕೆ ತಕ್ಕಂಥ ಔಷಧಿಯನ್ನು ಕೊಟ್ಟು ಹುಷಾರು ಮಾಡುವುದು ವಿವೇಕವೇ ಹೊರತು ಬೊಂಬಾಯಿನಲ್ಲಿ ಯಾವುದೋ ಆಪರೇಷನ್ ಮಾಡಿಸಿಕೊಂಡಿದ್ದಾರೆಂದು ಹೇಳಿ ನಾವೂ ಅದೇ ಆಪರೇಷನ್ ಮಾಡಿಸಿಕೊಳ್ಳಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ. ಇಲ್ಲಿರತಕ್ಕಂಥ ಜಮೀನ್ದಾರರಿಗೆ ಆ ಹುಣ್ಣುಗಳೇ ಆಗಿದ್ದರೆ ಆಗ ನಾವೂ ಕೂಡ ಆ ಆಪರೇಷನ್ನನ್ನೇ ಮಾಡಬೇಕೆಂದು ಹೇಳುವುದನ್ನು ನಾನೂ ಕೂಡ ಒಪ್ಪುತ್ತೇನೆ. ಅದನ್ನೇ ಮಾಡಬೇಕು. ಹಾಗಿಲ್ಲದೆ ಸಾಮಾನ್ಯವಾದ ಕಾಯಿಲೆಗಳಿಗೆಲ್ಲಾ ಅನ್ಯಥಾ ಉಗ್ರವಾದಂಥ ಔಷಧಿಗಳನ್ನು ಕೊಟ್ಟರೆ, ಆಗ ಆ ಕಾಯಿಲೆ ವಾಸಿಯಾಗುವುದರ ಬದಲು ಅದಿನ್ನೂ ಉಗ್ರವಾಗಬಹುದು.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ಇಲ್ಲಿಯೂ ಕೂಡ ಆ ಬೊಂಬಾಯಿನಲ್ಲಿರತಕ್ಕಂಥ ಕಾಯಿಲೆಯೇ ಇರುವುದರಿಂದ ನಾವು ಅಂಥಾ ಔಷಧಿಯನ್ನೇ ಇಲ್ಲಿ ಕೊಡದೆ ಬೇರೆ ಔಷಧಿಯನ್ನು ಕೊಟ್ಟರೆ ಆ ಔಷಧಿ ಗುಣಕಾರಿಯಾಗುವುದಿಲ್ಲವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದೇ ಕಾಯಿಲೆಯು ನಮ್ಮಲ್ಲಿಯೂ ಇದ್ದರೆ—ಅವರೇನು ಅಲ್ಲಿ ಒಂದು ಔಷಧಿಯನ್ನು ಕೊಟ್ಟಿದ್ದಾರೋ ಅದೇ ಔಷದಿಯನ್ನು ನಾವು ಇಲ್ಲಿಯೂ ಕೊಡತಕ್ಕದ್ದು ವಾಸ್ತವ್ಯವಾದ್ದು. ಆಗ ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಅದಕ್ಕೆ ನನ್ನ ಒಪ್ಪಿಗೆ ಕೂಡ ಇರುತ್ತದೆ. ಆದರೆ ಆ ಬೊಂಬಾಯಿನಲ್ಲಿರುವ ಪರಿಸ್ಥಿತಿಗೂ, ನಮ್ಮ ಮೈಸೂರಿನಲ್ಲಿರುವ ಪರಿಸ್ಥಿತಿಗೂ ಹೋಲಿಕೆ ಹಾಕಿ ನೋಡಿದರೆ ನಮ್ಮ ದೇಶದಲ್ಲಿ ಅಂಥಾ ಒಂದು ಪರಿಸ್ಥಿತಿ ಇದೆಯೇ ಎಂತ ನಾನು ಪ್ರಶ್ನಿಸಬೇಕಾಗಿದೆ. ಆದರೆ ಹೀಗೆ ತಾವು ಸುಮ್ಮನೆ ಇದೆ ಅಂತ ಹೇಳಿದರೆ ನಾನು ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಅದಕ್ಕೆಲ್ಲಾ ಅಂಕೀ ಅಂಶಗಳನ್ನು ಕೊಡಿ. ಆಗ ನಾನು ಒಪ್ಪುತ್ತೇನೆ. ಯಾರೋ ಎಲ್ಲೋ ತಂದಿರುವುದನ್ನು ನೋಡಿಕೊಂಡು ನಾವೂ ಸಹ ಇಲ್ಲಿಯೂ ಅದೇ ರೀತಿ ಮಾಡೋಣವೆಂದರೆ ಅದು ಖಂಡಿತ ಆಗದ ಮಾತು. ಈ ಭೂಸ ಧಾರಣೆಗಳನ್ನು ನಾವು ನಮ್ಮ ದೇಶಕ್ಕೆ ಅನುಗುಣವಾಗಿರತಕ್ಕಂಥ ರೀತಿಯಲ್ಲಿ ಮಾಡಬೇಕು.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಶಿವಮೊಗ್ಗ ಜಿಲ್ಲೆಯಲ್ಲಿರುವ ಪರಿಸ್ಥಿತಿ. . . .

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು. ಅದೆಲ್ಲಾ ನನಗೆ ಗೊತ್ತಿದೆ. ಇಡೀ ಮೈಸೂರು ಸಂಸ್ಥಾನದಲ್ಲೆಲ್ಲಾ ಬಹಳ ಕಮ್ಮಿ ಗೇಣಿಕೊಡತಕ್ಕದ್ದು ಎಲ್ಲಪ್ಪಾ ಅಂದರೆ ಅದು ಶಿವಮೊಗ್ಗಾ ಜಿಲ್ಲೆಯಲ್ಲೇ. ಅಲ್ಲಿ ಕೊಡತಕ್ಕಂಥ ಗೇಣಿ ಎಷ್ಟೆಂದರೆ ⅓ ಭಾಗ.

I may quote the Minister himself when he made a speech at the time when the Tenancy Bill was being discussed, I may acquaint the Hon'ble House that the Hon'ble Minister himself has admitted that it is the lowest in the whole of the Mysore State and that the maximum is one-third.

Sri Kadidal MANJAPPA.—I don't remember.

Sri H. M. CHANNABASAPPA.—I will send for the book and quote it.

Sri Kadidal MANJAPPA.—All right. In view of the experience a few days back while he quoted his own recommendation I am reluctant . . . .

Sri H. M. CHANNABASAPPA.—I will get in a few minutes and read it out so that you may know what folly you have committed, if it is a folly at all.

ಆ ಶಿವಮೊಗ್ಗಾ ಜಿಲ್ಲೆಯಲ್ಲಿ 1/3 ಭಾಗಕ್ಕಿಂತ ಜಾಸ್ತಿಯಾಗಿ ಗೇಣಿ ಕೊಡುತ್ತಿಲ್ಲ. ಅಲ್ಲಿ ಈ ಗೇಣಿ ಪ್ರಮಾಣ ಅಷ್ಟು ಕಡಮೆಯಾಗಿದ್ದರೂ ಕೂಡ ಹಾಗೆ ಅಲ್ಲಿ ಜಮೀನ್ದಾರರಿಗೂ ಮತ್ತು ಗೇಣೀದಾರರಿಗೂ ಬಹಳವಾಗಿ ಘರ್ಷಣೆಯಾಗುತ್ತಿದೆಯೆಂದರೆ ಅದಕ್ಕೆ ಈ ಗೇಣಿ ವಿಚಾರ ಕಾರಣವಲ್ಲ, ಅದಕ್ಕೇನೋ ಬೇರೆ ಮಹತ್ಕಾರಣಗಳಿರಬೇಕು. ಬೇರೆ ಇನ್ಯಾವ ಜಿಲ್ಲೆಯಲ್ಲಿಯೂ ಬಾರದಿರತಕ್ಕಂಥ ಘರ್ಷಣೆ ಈ ಶಿವಮೊಗ್ಗಾ ಜಿಲ್ಲೆಯಲ್ಲೇ

ಬರಬೇಕಾಗಿದ್ದರೆ ಅದಕ್ಕೇನೋ ಬೇರೆ ಮಹತ್ಕಾರಣಗಳಿರಲೇಬೇಕು. ಆ ಶಿವಮೊಗ್ಗಾ ಜಿಲ್ಲೆಯಲ್ಲಾದರೋ ವ್ಯವಸಾಯಕ್ಕೆ ಯೋಗ್ಯವಾದಂಥ ಜಮೀನು ಹೇರಳವಾಗಿದೆ. ಆದರೆ ಅಲ್ಲಿ ವ್ಯವಸಾಯಮಾಡಲು ಸಾಕಷ್ಟು ಜನರೇ ಇಲ್ಲದೆ. ಹೋಗಿರುವುದರಿಂದ 'ಯಾರಾದರೂ ಬಂದು ನಮ್ಮ ಜಮೀನುಗಳನ್ನು 'ಉಳುಮೆ ಮಾಡಿದರೆ ಸಾಕಪ್ಪ, ಅವರು ಎಷ್ಟಾದರೂ ಗೇಣಿ ಕೊಡಲಿ,' ಅನ್ನತಕ್ಕಂಥ ಮನೋಭಾವ ಅಲ್ಲಿರತಕ್ಕ ಜಮೀನ್ದಾರರುಗಳಿಗೆ ಇರುವಾಗ ಹೀಗೊಂದು ಘರ್ಷಣೆ ಅಲ್ಲಿ ನಡೆಯಬೇಕಾಗಿದ್ದರೆ ಅದಕ್ಕೆ ಹಿನ್ನೆಲೆಯಾಗಿ ಏನೋ ಬೇರೆ ಮಹತ್ವದ ಕಾರಣಗಳು ಇರಲೇಬೇಕೆಂದು ಗೊತ್ತಾಗುತ್ತದೆ. ಆದರೆ ಅವುಗಳೇನಿರಬಹುದೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳತಕ್ಕದ್ದು ಅನವಶ್ಯಕ. ನನ್ನ ಪ್ರಿಯ ಮಿತ್ರರಾದಂಥ ಶ್ರೀ ಕಡಿದಾಳ್ ಮಂಜಪ್ಪನವರಿಗೆ ಈ ಗೇಣೀದಾರರ ವಿಚಾರದಲ್ಲಿ ಬಹಳ ಉತ್ಸಾಹಶಾಲಿಗಳಾಗಿ ಕೆಲಸಮಾಡಬೇಕೆಂಬ ಒಂದು ಆಕಾಂಕ್ಷೆ ಇದೆ. ಅದಕ್ಕೆ ಬಹಳ ಸಂತೋಷ.

Sri J. MOHAMED IMAM.—On a point of order. He says "ನನ್ನ ಪ್ರಿಯ ಮಿತ್ರರು" Can a member exhibit his personal attachment and affection in the House because we are all impersonal here ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರ ಉತ್ಸಾಹವು ವಾಸ್ತವವಾಗೂ ಬಹಳ ಶ್ಲಾಘನೀಯವಾದದ್ದು. ಆದರೆ ಅವರು ಹೋಗತಕ್ಕಂಥ ಮಾರ್ಗ ಮಾತ್ರ ಸರಿಯಾದದ್ದಾಗಿರಬೇಕೆಂದು ಅವರಿಗೆ ವಿನಯದಿಂದ ಸೂಚಿಸಲಿಚ್ಛಿಸುತ್ತೇನೆ. ಈ ವಿಚಾರದಲ್ಲಿ ಅವರು ದಾರಿ ತಪ್ಪಿ ಹೋಗ್ಗಿಬಿಟ್ಟರೆ ಆಗ ಇದರಿಂದ ಉಂಟಾಗುವ ಪರಿಣಾಮ ಅವರ ಉದ್ದೇಶಕ್ಕೆ ತಕ್ಕಹಾಗೆ ಒಳ್ಳೆಯದಾಗುವುದಕ್ಕೆ ಬದಲಾಗಿ ಕೆಟ್ಟ ಪರಿಣಾಮಗಳೇ ಜಾಸ್ತಿ ಆಗುತ್ತವೆ ಅನ್ನತಕ್ಕಂಥ ಒಂದು ಸೂಚನೆಯನ್ನು ಅವರಿಗೆ ಕೊಡುತ್ತಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಹಾಗೇನೂ ಇದರಿಂದ ತೊಂದರೆಗಳಾಗುವುದಿಲ್ಲ. ಇದರಿಂದ ಇಡೀ ದೇಶಕ್ಕೂ ಮತ್ತು ತಮಗೂ ಒಳ್ಳೆಯದಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆದರೆ ಈ ಸಂದರ್ಭದಲ್ಲಿ ನಾನು ಇಷ್ಟೆಲ್ಲವನ್ನೂ ಏತಕ್ಕಾಗಿ ಹೇಳುತ್ತಿದ್ದೇನೆ ಎಂಬುದರ ಬಗ್ಗೆ ತಾವುಗಳು ಯಾರಾದರೂ, ನಾನು ಕೇವಲ ಈ ಜಮೀನ್ದಾರರುಗಳ ಇಂಟ್ರೆಸ್ಟನ್ನು ಸೇಫ್‌ಗಾರ್ಡ್ ಮಾಡುವುದಕ್ಕಾಗಿ ಇಷ್ಟೆಲ್ಲವನ್ನೂ ಹೇಳುತ್ತಿದ್ದೇನೆಂದು ಭಾವಿಸಿದ್ದರೆ ಅದು ಶುದ್ಧ ತಪ್ಪು. ನಾವು ಯಾವುದಾದರೂ ಒಂದು ವಿಚಾರದ ಬಗ್ಗೆ ಒಂದು ಕಾನೂನನ್ನು ಮಾಡುವಾಗ, ಒಂದು ಶಾಸನವನ್ನು ರಚಿಸುವಾಗ ದೇಶದಲ್ಲಿರತಕ್ಕ ಎಲ್ಲಾ ಜನರ ಕಷ್ಟಸುಖಗಳನ್ನೂ ಗಣನೆಗೆ ತೆಗೆದುಕೊಂಡು ಹಾಗೂ ದೇಶದ ವಾಸ್ತವಾಂಶಗಳ ಸ್ಥಿತಿಗತಿಗಳೇನೆಂಬುದನ್ನೂ ಗಣನೆಗೆ ತೆಗೆದುಕೊಂಡು ನಾವು ಇದನ್ನು ಮಾಡಬೇಕಾಗಿದೆ. ಇಂಥ ಸನ್ನಿವೇಶಗಳಲ್ಲಿ ತಮ್ಮೊಬ್ಬರ ಅಥವಾ ಒಂದು ಪಂಗಡದವರ ವಿಷಯಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ಶಾಸನವನ್ನು ರಚಿಸುವುದು ಸರಿಯಾದದ್ದಲ್ಲ. ಹೀಗೆ ಶಾಸನಗಳನ್ನು ಮಾಡುವಾಗ ನಾವು ಹೀಗೆ ಆತುರ ಆತುರವಾಗಿ ಅದನ್ನು ಮಾಡಿದರೆ ಅದರಿಂದ ದೇಶದಲ್ಲಿ ಮುಂದೆ ಕೆಟ್ಟಪರಿಣಾಮಗಳಾಗುತ್ತವೆ. ಈ ಟೆನೆನ್ಸಿ ಬಿಲ್ ಪಾಸಾಗಿ ಶಾಸನಕಡಿತಕ್ಕೇರಿದ್ದು 1952 ನೆಯ ಇಸವಿ ಜನವರಿ ಒಂದನೇ ತಾರೀಖಿನಲ್ಲಿ. ನಾವು ಈ ಕಾನೂನನ್ನು ದೇಶಾದ್ಯಂತವೂ ಜಾರಿಗೆ ಕೊಟ್ಟದ್ದು 1954 ನೆಯ ಅಕ್ಟೋಬರ್‌ನಲ್ಲಿ. ಆದರೆ ಈಗ ಈ ಶಾಸನದಲ್ಲಿ ಮುಖ್ಯವಾಗಿ ಅಡಕವಾಗಿರತಕ್ಕಂಥ ತತ್ವಗಳೆಲ್ಲಾ ಆಚರಣೆಗೆ ಬಂದಿವೆಯೋ ಅಥವಾ ಇಲ್ಲವೇ ? ಹೀಗೆ ಈ ಕಾನೂನನ್ನು ಜಾರಿಗೆ ಕೊಟ್ಟಿರತಕ್ಕಂಥ ಪ್ರದೇಶಗಳಲ್ಲಿ ಇದರಿಂದ ಏನಾದರೂ ಒಳ್ಳೆಯ ಪರಿಣಾಮವಾಗಿದೆಯೋ ಅಥವಾ ಕೆಟ್ಟಪರಿಣಾಮಗಳಾಗಿವೇ ? ಹಾಗೇನಾದರೂ ಆಗಿದ್ದರೆ ಅವುಗಳೆಲ್ಲಾ ಸರ್ಕಾರದವರ ಗಮನಕ್ಕೆ ಹೇಗೆ ಬಂದುವು ? ಹೀಗೆ ಸರ್ಕಾರದವರು ಒಂದು ತುರ್ತಾದಂಥ ಮತ್ತು ತೀವ್ರವಾದಂಥ ಬದಲಾವಣೆಯನ್ನು ಖಂಡಿತ ತಂದೇತರಬೇಕೆಂದು ಯಾವ ಯಾವ ಕ್ಷೇತ್ರದಿಂದ, ಯಾವ ಯಾವ ಜನರಿಂದ ಏನೇನು ಒತ್ತಾಯಗಳು ಬಂದಿವೆ ? ಎಂಬತಕ್ಕಂಥ ಈ ಅಂಶಗಳನ್ನೆಲ್ಲಾ ತಾವು ಈ ಸಭೆಯ ಮುಂದೆ ಇಟ್ಟರೆ ಆಗ ನಾನು ಇದರ ಬಗ್ಗೆ ನನ್ನ ಸಂಪೂರ್ಣ ಸಹಾನುಭೂತಿಯನ್ನು ತೋರಿಸಲು ಸಿದ್ಧನಾಗಿದ್ದೇನೆ, ಅಥವಾ ಈ ಮಾನ್ಯ ಸಭೆಯ ಸದಸ್ಯರು ಯಾರಾದರೂ ಈಗ ಜಾರಿಗೆ ಕೊಟ್ಟಿರುವ ಕಾನೂನಿನಿಂದ ಜನರಿಗೆ ಬಹಳವಾಗಿ ತೊಂದರೆಯಾಗಿದೆಯೆಂದು ಇಲ್ಲಿ ನಿವೇದನೆ ಮಾಡಿಕೊಂಡ ಅಥವಾ ಈ ಬಗ್ಗೆ ನಿರ್ಣಯಗಳನ್ನು ಮಾಡಿ ತಂದಿರತಕ್ಕಂಥ ಸನ್ನಿವೇಶವೊಂದನ್ನೂ ನಾನು ಈವರೆಗೂ ಕಾಣಲಿಲ್ಲ. ಅಥವಾ ದೇಶದ ಯಾವ ಯಾವ ಭಾಗಗಳಲ್ಲಿ ದೊಡ್ಡದೊಡ್ಡ ಸಭೆಗಳು ಬಹಿರಂಗವಾಗಿ ನಡೆದು ಇದರ ಬಗ್ಗೆ ಸರ್ಕಾರದವರು ಕೂಡಲೇ ಇಂಥ ತೀವ್ರವಾದ ಬದಲಾವಣೆಗಳನ್ನು ಬೇಗ ಜಾರಿಗೆ ತರಬೇಕೆಂದೇನಾದರೂ ನಿರ್ಣಯಗಳನ್ನು ಮಾಡಿ ಕಳುಹಿಸಿದ್ದಾರೆಯೋ ? ಅಥವಾ ಈ ಬಗ್ಗೆ ಪ್ರಜಾಭಿಪ್ರಾಯಗಳನ್ನು ಪಡೆದಿರುವಂಥ ಮುಖಂಡರುಗಳು ಯಾರಾದರೂ ಒತ್ತಾಯಮಾಡಿದ್ದಾರೆಯೋ ? ಹೀಗೆ ತಾವು ತೀವ್ರ ಬದಲಾವಣೆಗಳನ್ನು ಮಾಡಲು ಕಾರಣವೇನು, ಎಂಬುದರ ಬಗ್ಗೆ ನಾನು ಎಷ್ಟು ಪ್ರಯತ್ನಪಟ್ಟಾಗ್ಗೂ ಅದಕ್ಕೆ ಕಾರಣಗಳೊಂದೂ ಇದ್ದಹಾಗೆ ನನಗಂತೂ ಕಂಡುಬರಲಿಲ್ಲ. ಹಾಗೆ ತಮಗೇನಾದರೂ ಕಂಡುಬಂದಿದ್ದರೆ ತಿಳಿಸಿ, ನೋಡೋಣ. ಅಂದರೆ ತಾವು ಒಬ್ಬರು ತಿಳಿಸುವುದು ನನಗೆ ಬೇಕಾಗಿಲ್ಲ. ದೇಶ ತಿಳಿಸಿರುವುದು ನನಗೆ ಬೇಕಾಗಿದೆ. ಶಾಸನಗಳನ್ನು ರಚಿಸುವಾಗ ನಾವು ಯಾವ ಉದ್ದೇಶಗಳನ್ನು ಇಟ್ಟುಕೊಂಡು ಅವುಗಳನ್ನು ರಚನೆಮಾಡುತ್ತೇವೋ ಅಂಥ ಸದುದ್ದೇಶಗಳು ಸಫಲವಾದವೇ ಅಥವಾ ಇಲ್ಲವೇ ಎಂಬುದನ್ನು ಕೂಲಂಕಷವಾಗಿ ಪರಿಷ್ಕಾರ ಮಾಡಿಕೊಳ್ಳದೆ, ಮಧ್ಯಕಾಲದಲ್ಲಿ ಹೀಗೆಲ್ಲಾ ಆತುರ ಆತುರವಾಗಿ ಕಾನೂನು ಮಾಡತಕ್ಕದ್ದು ಸರಿಯಾದ್ದಲ್ಲ, ಇದರಿಂದ ಅನೇಕ ಅನರ್ಥಗಳುಂಟಾಗುತ್ತವೆಂಬುದನ್ನು ನಾನು ಅತಿವಿನಯದಿಂದ ಸರ್ಕಾರದವರಲ್ಲಿ ಅರಿಕೆಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ನಾನೀಗ ಇಷ್ಟು ವಿಷಯಗಳನ್ನು ಹೇಳಬೇಕಾಗಿ ಬಂತು ; ಹೇಳಿದೆ. ಈ ಬಗ್ಗೆ ನಾನು ಕೆಲವು ವಿಷಯಗಳನ್ನು ತಮ್ಮ ಮುಂದೆ ಇಟ್ಟರೆ ಹೀಗೆ ಮಾಡತಕ್ಕದ್ದು ಈಗ ಆವಶ್ಯಕವೇ ಅಥವಾ ಅನವಶ್ಯಕವೇ ಎನ್ನುವುದನ್ನು ತೀರ್ಮಾನಮಾಡುವುದಕ್ಕೆ ಅನುಕೂಲವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಈ ಟೆನೆನ್ಸಿ ಮಸೂದೆಯ ಬಗ್ಗೆ ನಿನ್ನೆಯ ದಿವಸ ಶ್ರೀ ಗೋಪಾಲಗೌಡರು ಬಹಳ ದೀರ್ಘವಾಗಿ ಭಾಷಣಮಾಡುತ್ತಾ ಒಂದೇ ಮಾತಿನಲ್ಲಿ ಇದರಿಂದ ಅಷ್ಟೇನೂ ಪ್ರಯೋಜನವಾಗುವುದಿಲ್ಲ ಗೇಣೀದಾರರಿಗೆ ಎಂದು ಹೇಳಿಬಿಟ್ಟರು. ಆದರೆ ಅವರು ಆ ಬಗ್ಗೆ ಯಾವ ಅಂಕಿ ಅಂಶಗಳನ್ನೂ ಕೊಡ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಲಲ್ಲ. ಹಾಗೆ ಕೊಟ್ಟಿದ್ದರೆ ನಾನು ಅವರು ಹೇಳಿದ್ದನ್ನೆಲ್ಲಾ ಒಪ್ಪಿಕೊಳ್ಳುತ್ತಿದ್ದೆನು.

ಆದರೆ ನಮ್ಮ ಈ ಮೈಸೂರು ದೇಶದಲ್ಲಿ ಟೆನೆನ್ಸಿ ಪ್ರಾಬ್ಲಂ ಇರುವುದು ಬಹಳ ಕಡಮೆ. ಇದು ಯಾವ ಯಾವ ದೇಶದಲ್ಲಿ ಎಷ್ಟೆಷ್ಟಿದೆಯೆಂಬುದನ್ನು ಲೆಕ್ಕಕ್ಕೆ ತೆಗೆದುಕೊಂಡರೆ-ನಮ್ಮ ಮೈಸೂರಿನಲ್ಲಿರುವುದು ಬಹಳ ಕಡಮೆಯೆಂಬುದು ಗೊತ್ತಾಗುತ್ತದೆ. ಮಧ್ಯ ಪ್ರದೇಶ, ತಿರುವಾಂಕೂರ್, ಕೊಚಿನ್ ಇತ್ಯಾದಿ ಪ್ರದೇಶಗಳಲ್ಲಿ ಈ ಟೆನೆನ್ಸಿ ಪ್ರಾಬ್ಲಂ ಎಷ್ಟೆಷ್ಟಿದೆಯೆಂಬುದಾಗಿ ನೋಡಿದರೆ—ಅದು ಅಲ್ಲೆಲ್ಲಾ ಶೇಕಡ 40, 45, 50 ಮತ್ತು $52\frac{1}{2}$ ಇದ್ದರೆ ನಮ್ಮ ಮೈಸೂರಿನಲ್ಲಿ ಅದು 6·8 ಇದೆ. ಹೀಗೆ ಈ ಟೆನೆನ್ಸಿ ಪ್ರಾಬ್ಲಂ ನಮ್ಮ ಮೈಸೂರಿನಲ್ಲಿರುವುದು ಬಹಳ ಕಡಮೆ. ನಾನು ಈಗ ಹೇಳುತ್ತಿರುವ ಅಂಕಿ ಅಂಶಗಳೆಲ್ಲವೂ ತಮ್ಮ ಲೇಟೆಸ್ಟ್ ಸೆನ್ಸಸ್ ಪ್ರಕಾರ ತಿಳಿದು ಬಂದಂಥವುಗಳಾಗಿವೆ. ಇತರರ ಭೂಮಿಯನ್ನೇ ತಮ್ಮ ಜೀವನೋಪಾಯಕ್ಕಾಗಿ ಯಾರುಯಾರು ಅವಲಂಬಿಸಿಕೊಂಡಿದ್ದಾರೋ ಅಂಥ ಜನರ ಒಟ್ಟು ಸಂಖ್ಯೆಯನ್ನು ಕಂಡುಹಿಡಿದು, ವ್ಯವಸಾಯಗಾರರ ಒಟ್ಟು ಸಂಖ್ಯೆಯಲ್ಲಿ ಇವರು ನೂರಕ್ಕೆ ಎಷ್ಟಾಗುತ್ತಾರೆಂಬುದನ್ನು ಲೆಕ್ಕ ಹಾಕಿದರೆ ಆಗ ತಮಗೆ ಈ ಅಂಶ ಗೊತ್ತಾಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ತಾವು ಈ ಅಂಕಿ ಅಂಶಗಳನ್ನು ಯಾವುದರಿಂದ ಓದುತ್ತಿದ್ದೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ನನಗೋಸ್ಕರವಾಗಿಯೇ ಶೇಖರಣೆ ಮಾಡಿ ಇಟ್ಟುಕೊಂಡಿರುವಂಥ ದಾಖಲೆಯಿಂದ ಹೇಳುತ್ತಿದ್ದೇನೆ. ನಮ್ಮ ದೇಶದಲ್ಲಿ ಈ ವ್ಯವಸಾಯದಿಂದ ಜೀವನ ನಡೆಸತಕ್ಕಂಥ ಮಂದಿ ಎಷ್ಟಿದ್ದಾರೆಂದರೆ—63 ಲಕ್ಷ 36 ಸಾವಿರದ 360 ಜನಗಳಿದ್ದಾರೆ. ಇದರಲ್ಲಿ ಇತರರ ಜಮೀನನ್ನೇ ತಮ್ಮ ಜೀವನಾಧಾರಕ್ಕಾಗಿ ಅವಲಂಬಿಸಿಕೊಂಡಿರುವಂಥವರ ಸಂಖ್ಯೆ 4 ಲಕ್ಷ 32 ಸಾವಿರದ 415. ಇಷ್ಟು ಕಡಮೆ ಸಂಖ್ಯೆ ಟೆನೆಂಟ್ಸ್‌ಗಳಿರುವ ಕಡೆ, ತಾವು ಯಾವುದೋ ದೇಶದ ಪದ್ಧತಿಯನ್ನು ಇಲ್ಲಿಯೂ ಜಾರಿಗೆ ತರುತ್ತೇವೆಂದು ಹೇಳತಕ್ಕದ್ದು ಸರಿಯೇ ಎಂದು ಕೇಳುತ್ತೇನೆ? ತಾವು ಈ ಪರ್ಸೆಂಟೇಜನ್ನು ಕಂಡುಹಿಡಿಯುವಾಗ ತಮಗೆ ಬೇಕಾದ ಈ ಅಂಕಿ ಅಂಶಗಳೆಲ್ಲವೂ ತಮ್ಮ ಸೆನ್ಸಸ್ ವರದಿಯಲ್ಲೇ ಇರುತ್ತವೆ. ಆ ಪುಸ್ತಕದಲ್ಲಿ ಎಲ್ಲೆಲ್ಲಿ ಏನೇನಿರುತ್ತೆಂಬುದನ್ನು ಸರಿಯಾಗಿ ಓದಿ ನೋಡಿಕೊಂಡು ಅರ್ಥಮಾಡಿಕೊಂಡರೆ ಆ ಪುಸ್ತಕದಿಂದಲೇ ಈ ಅಂಶಗಳೆಲ್ಲಾ ಹೊರಬೀಳುತ್ತವೆ. ನಮ್ಮ ಸಂಸ್ಥಾನದ ಒಟ್ಟು ಪ್ರಜಾಸಂಖ್ಯೆ 9·07 ಮಿಲಿಯನ್. ಈ ಪೈಕಿ 63 ಲಕ್ಷ 43 ಸಾವಿರದ 360 ಜನರು ವ್ಯವಸಾಯವನ್ನು ಅವಲಂಬಿಸಿಕೊಂಡಿರುತ್ತಾರೆ. ಇವರ ಪೈಕಿ 4 ಲಕ್ಷ ಚಿಲ್ಲರೆ ಜನರು ಪರರ ಜಮೀನನ್ನು ತಮ್ಮ ಜೀವನಾಧಾರಕ್ಕಾಗಿ ಅವಲಂಬಿಸಿಕೊಂಡಿದ್ದಾರೆ. ಈ 4 ಲಕ್ಷ ಚಿಲ್ಲರೆ ಜನರನ್ನೇ ನಾವೀಗ ಟೆನೆನ್ಸಿ ಪ್ರಾಬ್ಲಂಗೆ ಒಳಗಾಗಿದ್ದಾರೆಂದು ಹೇಳುತ್ತಿರುವುದು.

Sri K. PUTTASWAMY.—These 4 lakhs of tenants should be multiplied by five.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಗ ನಾವು 4 ಲಕ್ಷ ಚಿಲ್ಲರೆ ಜನರನ್ನೊಳಗೊಂಡ 75 ಸಾವಿರ ಸಂಸಾರಗಳಿರುತ್ತವೆಂದು ಹೇಳಬೇಕಾಗುತ್ತದೆ. ಹೀಗೆ ನಮ್ಮ ಮೈಸೂರು ಸಂಸ್ಥಾನದಲ್ಲಿ ತಮ್ಮ ಜೀವನೋಪಾಯಕ್ಕಾಗಿ ಮತ್ತೊಬ್ಬರ ಜಮೀನನ್ನು ಉತ್ತುಕೊಂಡು ಜೀವನಮಾಡತಕ್ಕಂಥ 75 ಸಾವಿರ ಸಂಸಾರಗಳಿರುತ್ತವೆಂದು ಗೊತ್ತಾಗಿದೆ. ಹೀಗೆ ಒಟ್ಟಿನಲ್ಲಿ ನಮ್ಮ ಸಂಸ್ಥಾನದಲ್ಲಿ ಚಿಕ್ಕದು, ದೊಡ್ಡದು ಆದ ಎಲ್ಲಾ ಗೇಣೀದಾರರ ಒಟ್ಟು ಸಂಖ್ಯೆ 4 ಲಕ್ಷ ಚಿಲ್ಲರೆ ಆಗುತ್ತದೆ. ಇದನ್ನು ಪರ್ಸೆಂಟೇಜಿಗೆ ತಿರುಗಿಸಿದರೆ 5·8 ಅಥವಾ 6 ಶೇಕಡ workout ಆಗುತ್ತದೆ. ಈ 4 ಲಕ್ಷ ಚಿಲ್ಲರೆ ಜನಗಳೂ ಇರತಕ್ಕಂಥ ಒಟ್ಟು ಸಂಸಾರಗಳ ಸಂಖ್ಯೆ 75,504. ಈ ಜನಗಳಿಗೆ ಭೂಸ್ವಾಮ್ಯವನ್ನುಂಟು ಮಾಡಿಕೊಡತಕ್ಕ ಸಂದರ್ಭದಲ್ಲಿ ನಮ್ಮ ಸಂಸ್ಥಾನದ ವ್ಯವಸಾಯಕ್ಕೆ ಯೋಗ್ಯವಾದಂಥ ಭೂಮಿ ಪ್ರಮಾಣ ಎಷ್ಟರಮಟ್ಟಿಗೆ ಇದೆಯೆಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಈಗ ಹಾಲಿ ಇರುವ ಜಮೀನ್ದಾರರ ಪೈಕಿ 100 ಎಕರೆಗಳಿಗಿಂತಲೂ ಕಡಮೆ ವಿಸ್ತೀರ್ಣದ ಭೂಮಾಲೀಕರ ಸಂಖ್ಯೆ ಶೇಕಡ 95 ಇದೆ. ಇನ್ನು 100 ಎಕರೆಗಳಿಗೆ ಮೇಲ್ಪಟ್ಟು ಇರತಕ್ಕಂಥ ಜಮೀನ್ದಾರರ ಸಂಖ್ಯೆ ಶೇಕಡ 5 ಮಾತ್ರ ಇದೆ. ಇದು ಬಹಳ ಕಡಮೆ ಪ್ರಮಾಣ. ಈ ಅಂಕಿ ಅಂಶಗಳೆಲ್ಲಾ ಸರ್ಕಾರದವರು ಪಬ್ಲಿಷ್ ಮಾಡಿರತಕ್ಕ ಸೆನ್ಸಸ್ ವರದಿಯಿಂದಲೇ ಪಡೆಯಲಾಗಿದೆ. ಹಾಗೊಂದು ವೇಳೆ ಸರ್ಕಾರದವರು ಪ್ರಕಟಣೆ ಹೊರಡಿಸಿರತಕ್ಕಂಥ ಈ ದಾಖಲಾತಿಗಳೆಲ್ಲಾ ತಪ್ಪಾಗಿದ್ದ ಪಕ್ಷದಲ್ಲಿ ಅದಕ್ಕೆ ನಾನು ಜವಾಬ್ದಾರನಲ್ಲ. ಆದರೆ ಈ ರೆಂಟ್‌ರಿಸೀವಿಂಗ್ ವರ್ಗದಲ್ಲಿ ಎರಡು ತರಹ ಜನಗಳಿದ್ದಾರೆ. ಕೋರಿಗೆ ಜಮೀನನ್ನು ಮಾಡತಕ್ಕವರು ಒಂದು ತರಗತಿ. ಮತ್ತೊಂದು ತರಗತಿ ಎಂದರೆ ತಮ್ಮ ಜಮೀನನ್ನು ತಾವೇ ಸಾಗುವಳಿ ಮಾಡಿಕೊಂಡು ಸಾಲದ್ದಕ್ಕೆ ಬೇರೆಯವರ ಜಮೀನನ್ನೂ ಸಾಗುವಳಿಗೆ ಮಾಡತಕ್ಕಂಥವರೂ ಇದ್ದಾರೆ. ಹೀಗೆ ಗೇಣಿಗೆ ಸಾಗುವಳಿ ಮಾಡತಕ್ಕಂಥ ರೈತವರ್ಗದಲ್ಲಿ ಏನೇನೂ ಜಮೀನಿಲ್ಲದಿರತಕ್ಕಂಥವರು ನಮ್ಮಲ್ಲಿ 2 ಲಕ್ಷ 62 ಸಾವಿರದ 362 ಜನಗಳಾಗುತ್ತಾರೆ. ಒಟ್ಟು ಸಾಗುವಳಿದಾರರ ಸಂಖ್ಯೆ 4 ಲಕ್ಷ ಚಿಲ್ಲರೆ. ಹಾಗೆ ಕೇವಲ ಜಮೀನಿಲ್ಲದಂಥ ಗೇಣೀದಾರರ ಸಂಖ್ಯೆ 4·1 per cent of the whole agricultural population in the State. ಈ ಗೇಣೀದಾರರು ಬಹಳ ಅಧಿಕ ಸಂಖ್ಯೆಯಲ್ಲಿರುವುದು ಆ ಟ್ರಾವನ್ಕೂರ್-ಕೊಚಿನ್, ಮಧ್ಯಪ್ರದೇಶ ಇಂಥ ಕಡೆಗಳಲ್ಲಿದ್ದಾರೆ. ಹಾಗೆ ಜಾಸ್ತಿ ಇರತಕ್ಕಂಥ ಟ್ರಾವನ್ಕೂರಿನಲ್ಲಿ ಅವರು ಆ ರೀತಿ ಶಾಸನಮಾಡಿದ್ದಾರೆ, ನಾವು ಇಲ್ಲಿಯೂ ಅದೇ ರೀತಿ ಮಾಡಬೇಕು, ಬೊಂಬಾಯಿನಲ್ಲಿ ಆ ರೀತಿ ಮಾಡಿದ್ದಾರೆ, ಆದ್ದರಿಂದ ನಾವೂ ಸಹ ಇಲ್ಲಿ ಅದೇ ರೀತಿ ಮಾಡಬೇಕು ಎಂದು ಹೇಳುವುದು ಅರ್ಥವಿಲ್ಲದ ಮಾತು. ಆ ಬೊಂಬಾಯಿ ಪ್ರಾಂತ್ಯದಲ್ಲಿ ಗೇಣೀದಾರರ ಸಂಖ್ಯೆ ಇರುವುದು $52\frac{1}{2}$ ಪರ್ಸೆಂಟಿದೆ. ಆದರೆ ನಮ್ಮ ಮೈಸೂರಿನಲ್ಲಿರುವುದೆಷ್ಟು? I am giving you authorities. If I make one mis-statement, I should be pulled up. I should be personally held responsible for all these things. I have got all authorities. If the Speaker is going to give time, I will read out the authorities. I am not making a statement about facts according to my own imagination. In Travancore-Cochin the tenancy is 50 per cent; West Bengal 40 per cent; in Mysore it is 6·8 per cent. I am only quoting

this information in order to bring home to the Hon'ble Minister the negligible amount of tenancy that is obtaining in Mysore.

Census figures ತೆಗೆದುಕೊಳ್ಳೋಣವಾಗಲಿ. ಅದನ್ನು ಓದಿದರೆ ಎಲ್ಲವೂ ಸಿಕ್ಕುತ್ತದೆ. ಏಕೆ ಈ ಅಂಕಿ ಅಂಶಗಳನ್ನು ಕೊಟ್ಟೆ ಎಂದರೆ, ಇಲ್ಲಿ tenancy problem ಕಡಮೆ. ರೆವಿನ್ಯೂ ಮಂತ್ರಿಗಳ ಜಿಲ್ಲೆಯಲ್ಲಿ ಶೇಕಡ 24, ಶ್ರೀಮಾನ್ ಕೆ. ಪುಟ್ಟಸ್ವಾಮಿಯವರ ಜಿಲ್ಲೆಯಲ್ಲಿ ಶೇಕಡ 3·3, ಮೈಸೂರು ಜಿಲ್ಲೆಯಲ್ಲಿ 7·3, ಬೆಂಗಳೂರು ಜಿಲ್ಲೆಯಲ್ಲಿ ಶೇಕಡ 6·8, ಹಾಸನ ಜಿಲ್ಲೆಯಲ್ಲಿ ಶೇಕಡ 3, ತುಮಕೂರು ಜಿಲ್ಲೆಯಲ್ಲಿ ಶೇಕಡ 4·2, ಚಿಕ್ಕಮಗಳೂರು ಜಿಲ್ಲೆಯಲ್ಲಿ ಶೇಕಡ 11·5, ಶಿವಮೊಗ್ಗದಲ್ಲಿ ಶೇಕಡ 24.

ಶ್ರೀ ಕಡಿದಾಳ್ ಮಂಜಪ್ಪ.—ಯಾವ ರಿಪೋರ್ಟಿನಿಂದ ಹೇಳುತ್ತೀರಿ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—From your own Census Report. ಅದರಲ್ಲಿ ಜಿಲ್ಲಾವಾರು ಕೊಟ್ಟಿರುವ ಅಂಕಿ ಅಂಶಗಳಿಂದ.

ಒಟ್ಟು 63 ಲಕ್ಷ ಜನರು ಜಮೀನನ್ನು ಅವಲಂಬಿಸಿಕೊಂಡಿರುವವರು, ಅವರ ಪೈಕಿ ಜಿಲ್ಲಾವಾರು ಎಷ್ಟಿದ್ದಾರೆಂಬುದನ್ನು ಹೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟನೆಯ ಪುಟದಲ್ಲಿದೆ?

Sri V. VENKATAPPA.—Page 71.

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿ ಜಿಲ್ಲಾವಾರು ಸಂಖ್ಯೆಗಳಿಲ್ಲ.

Mr. SPEAKER.—He has calculated the percentage.

Sri H. M. CHANNABASAPPA.—Exactly, my figures are based on the figures supplied by you. I have done a little bit of mathematics.

(*A Voice.—Kolar ?*)

Sri H. M. CHANNABASAPPA.—4·7 per cent; very low.

(*A Member.—Chitaldrug ?*)

Sri H. M. CHANNABASAPPA.—5 per cent. ಆದುದರಿಂದ ಗಲಾಟೆಮಾಡಿದರೆ, ಯಾರು ಮಾಡಬೇಕು ? That is why I made out a case that there is no need for such a severe legislation.

ಅದಕ್ಕಾಗಿಯೇ ಹೋದಸಾರಿ ಟೆನೆನ್ಸಿ ಕಾನೂನು ತಂದಾಗ, ತಮಗೆ ಬೇಕಾದರೆ ತೀರ್ಥಹಳ್ಳಿಯ ತಾಲ್ಲೂಕಿನಲ್ಲಿ ಮಾಡಿಕೊಳ್ಳಿ, ಸಂಸ್ಥಾನಕ್ಕೆ ಇದು ಅನಾವಶ್ಯಕ ಎಂದು ವಾದಮಾಡಿದೆವು. (*Interruption*) I am going to stand by my figures and by my policies wherever you take me. You cannot disprove this. So, when you want to make a legislation, let us take the hard facts obtaining in the country and the pressure of the population on the land and the amount of difficulty that is being experienced by the tenants—all these things have to be taken into consideration and if a measure of this kind is necessary, I will be the first man to vote for it.

ಇದರಲ್ಲಿ ಏನೆಂದರೆ, ಜಮೀನ್‍ದಾರನಿಗೂ ಹೊಲ ಉಳುವವನಿಗೂ ಇಬ್ಬರಿಗೂ ಅನುಕೂಲವಾಗಬೇಕೆಂಬ ವಿಷಯದಲ್ಲಿ ನನ್ನ ಭಿನ್ನಾಭಿಪ್ರಾಯವಿಲ್ಲ. ಉಳುವವನೇ ಭೂಮಿಯ ಒಡೆಯನಾಗಬೇಕೆಂಬುದರಲ್ಲಿ ನನಗೆ ಸಂಪೂರ್ಣ ಒಪ್ಪಿಗೆಯಿದೆ. ಪ್ರತಿಯೊಬ್ಬ ಜಮೀನ್‍ದಾರನೂ ಸ್ವಂತವಾಗಿ ಉಳಬೇಕು, ಇಲ್ಲದಿದ್ದರೆ ಬಿಟ್ಟುಬಿಡಬೇಕು. ಒಬ್ಬ ಮನುಷ್ಯ ಬೆಂಗಳೂರಿನಲ್ಲಿದ್ದುಕೊಂಡು ಶಿವಮೊಗ್ಗ ಅಥವಾ ಪಿರಿಯಾಪಟ್ಟಣದಲ್ಲಿ ಜಮೀನಿಟ್ಟುಕೊಂಡು ಅದನ್ನು ಬೇರೆಯವರಿಂದ ಉಳಿಸಿ, ತಾನು ಮಾತ್ರ ಸುಖವಾಗಿದ್ದುಕೊಂಡು ಇನ್ನೊಬ್ಬ ತನಗಾಗಿ, ತನ್ನ ಸುಖಕ್ಕಾಗಿ ಕಷ್ಟಪಡಬೇಕು ಎನ್ನುವುದು ಸಮತಾವಾದಕ್ಕನುಗುಣವಾಗಿಲ್ಲ. ಆದರೆ ಇದನ್ನು ಯಾವರೀತಿ ಮಾಡಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ನನಗಿರತಕ್ಕ ಜಮೀನನ್ನೆಲ್ಲಾ ಕಿತ್ತುಕೊಂಡರೂ ನಾನು ವ್ಯವಸಾಯಮಾಡತಕ್ಕ ಶಕ್ತಿ ನನಗಿದೆ, ಮಾಡಿದ್ದೇನೆ. ನನಗೂ ಶ್ರೀಮಾನ್ ದೇವರಾಜ ಅರಸಿನವರಿಗೂ ಯಾರೂ ಹೇಳಬೇಕಾಗಿಲ್ಲ. ಆದಕಾರಣ ನಮಗೆ ಹೇಗೆ ಎಂಬ ಯೋಚನೆ ಖಂಡಿತವಾಗಿ ನಮಗಿಲ್ಲ. ಆ ಆಧಾರದಮೇಲೆ ಶಾಸನ ಮಾಡಬಾರದು. ಟೆನೆನ್ಸಿ perpetuityಯಲ್ಲಿ ಅಥವಾ ಶಾಶ್ವತವಾಗಿರಬೇಕೆಂದು ಶ್ರೀಮಾನ್ ಗೋಪಾಲ ಗೌಡರು ಹೇಳಿದರು. ಐದು ಹತ್ತು ವರ್ಷಇರುವುದು ಚೆನ್ನಾಗಿಲ್ಲವೆಂದು ಹೇಳಿದರು. ನನಗೆ ಆಶ್ಚರ್ಯವಾಯಿತು. ಟೆನೆಂಟ್ ಆಗಿರುವವನು ಯಾವಾಗಲೂ ಟೆನೆಂಟ್ ಆಗಿಯೇ ಇರಬೇಕೆಂದು ಸೋಷಿಯಲಿಸ್ಟರು ಹೇಳಿದರಲ್ಲಾ ಎಂದು ನನಗೆ ಆಶ್ಚರ್ಯವಾಯಿತು.

(*Interruption*).

I want to improve the land owner. I am only commenting on the word used by my friend Sri Gopala Gowda, the praja-socialist friend of mine. He wanted the tenant to continue as a tenant for his life. I go a step further and say that the word tenant should be eliminated from the Mysore State. But, by what method ? I will go point by point.

ಈಗ ನೀವು ತಂದಿರತಕ್ಕ ಶಾಸನದಲ್ಲಿ ಟೆನೆಂಟನ್ನು ಜಮೀನ್‍ದಾರನಾಗಿ ಮಾಡುವುದಕ್ಕಾಗಿ ತಂದಿದ್ದೇವೆ ಎಂದು ನೀವು ಹೇಳಿದರೆ, ಅದು ಬರಿಯ ಭ್ರಾಂತಿಯ ಮಾತು. ಎರಡು ವರ್ಷವಾದಮೇಲೆ ನೀವೇ ಹೇಳುತ್ತೀರಿ ಭ್ರಾಂತಿ ಎಂದು. ಹೇಗೆಂದರೆ, ಒಬ್ಬ ಟೆನೆಂಟ್ ಆಗಿರುವವನು ಅವನಲ್ಲಿ ಹಣವಿದ್ದಿದ್ದರೆ, ಸ್ವಂತ ಶಕ್ತಿಯಿದ್ದಿದ್ದರೆ ಅವನು ಟೆನೆಂಟ್ ಆಗಿರುತ್ತಿರಲಿಲ್ಲ. ಅವನಿಗೆ ಉಣಲಿಕ್ಕೆ ಅನ್ನವಿಲ್ಲ, ಕೈಲಿ ಹಣವಿಲ್ಲವಾದುದರಿಂದಲೇ ಬೇರೆಯವರಲ್ಲಿ ಬಂದು ವ್ಯವಸಾಯಕ್ಕೆ ಜಮೀನುಕೊಡಿ ಎಂದು ಕೇಳುತ್ತಾನೆ. ಶಾಸನದ ಪ್ರಕಾರ 9 ವರ್ಷ ಟೆನೆಂಟ್ ಆಗಿದ್ದರೆ ಅನಂತರ ಜಮೀನು ಪಡೆದುಕೊಳ್ಳುವ ಹಕ್ಕು ಬರುತ್ತದೆ. ಹೀಗೆ ಇಲ್ಲಿ ನೀವು ಶಾಸನಮಾಡಿದ ಮಾತ್ರಕ್ಕೇ ಅವನಿಗೆ ಜಮೀನು ಬರುತ್ತದೆಯೆ ? ಅವನು ಹಣ ಕೊಡಬೇಕು. ಅವನಿಗೆ ಹತ್ತುವರ್ಷ ಅವಧಿಯನ್ನೇನೋ ಕೊಡಬಹುದು. ಅಷ್ಟರಲ್ಲಿ ಅವನು ಹಣವನ್ನು ಕೊಟ್ಟರೆ ಅವನಿಗೆ ಜಮೀನು ಕೊಡಬಹುದೆಂದು ಮಾಡಿದೆ. ಈ ತತ್ವವನ್ನೊಪ್ಪೋಣ. ಇದರ ಕಷ್ಟ ಸುಖಗಳನ್ನು ಕುರಿತು

(SRI. H. M. CHANNABASAPPA.)
ಆಮೇಲೆ ಮಾತನಾಡುತ್ತೇನೆ. ಅವನು ಗೇಣಿಕೊಡಬೇಕು, ತನ್ನ ಜೀವನವನ್ನು ನಡೆಸಬೇಕು, ಜಮೀನಿಗಾಗಿ ಹಣವನ್ನೂ ಕೊಡಬೇಕು !

ಶ್ರೀ ಕಡಿದಾಳ್ ಮಂಜಪ್ಪ.—ಹಾಗಾದರೆ ದುಡ್ಡಿಲ್ಲದೆ ಹಾಗೆಯೇ ಅವನನ್ನು Occupant ಮಾಡಬೇಕೆಂದು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಭರತ ಖಂಡವನ್ನಲ್ಲದೆ ಇ‍ ರ ಯಾವ ದೇಶದೊಡನಾದರೂ ಹೋಲಿಸಿ ನೋಡಿ. ಪ್ಲಾನಿಂಗ್ ಕಮಿಷನ್‌ನವರು ಕೂಡ ಇದರಲ್ಲಿ ಒಂದು ತಪ್ಪುಮಾಡಿದ್ದಾರೆ. ಬೇರೆ ದೇಶಗಳಲ್ಲಿ ಮೂವತ್ತು ಮೂವತ್ತೈದು ವರ್ಷಗಳ ಹಿಂದೆಯೇ ಭೂಸ್ವಾಮ್ಯ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಇದನ್ನು ತರುವುದಕ್ಕೆ ಮೊಟ್ಟಮೊದಲನೆಯ ಕಾರ್ಯ ಅವರು ಮಾಡಿರುವುದು, ಟೆನೆಂಟಿಗೆ ಜಮೀನು ಕೊಂಡುಕೊಳ್ಳಲು ಸಂಪೂರ್ಣ ಬೆಲೆಯೇನಿದೆಯೋ ಅದನ್ನು ಆತನಿಗೆ ಒದಗಿಸುವುದಕ್ಕೆ ಅವಕಾಶಮಾಡಿದ ಮೇಲೆ ತಂದಿದ್ದಾರೆ.

(*A VOICE.—Are you opposing the Bill?*)

Sri H. M. CHANNABASAPPA.—No. I am giving positive suggestions for the realisation of the objective that the tenant should become the owner of the land. But this is not the legislation for it.

Sri G. A. THIMMAPPA GOWDA.—In western countries, what is the percentage of agricultural class, to the other classes ?

Sri H. M. CHANNABASAPPA.—I will give you all the material. You need not worry. I will go one step further than you.

In your whole Bill have you thought about it ? Have you applied serious thought to this problem ? A tenant cannot become the owner of the land unless you provide for him the wherewithal to purchase the land. In America in 1945, there was a similar Act made. According to that Act, the tenant who wants to become the owner of the land can apply to the Banks for loan to purchase the land and he will get the full value of the land at three per cent interest payable in forty instalments. I am telling you that it is the same in Mexico, Yugolslavia, Holland, Belgium and Poland. I am going to give you facts and figures. In all those countries where the tenancy problem existed. . .

Sri G. A. THIMMAPPA GOWDA.—What about China ?

ANOTHER MEMBER.—What is the position in Russia ?

Sri H. M. CHANNABASAPPA.—Thank you for bringing the question of China. The Chinese Government decided to introduce a campaign for paying 25 per cent on the return of land revenue and authorised to advance loans from the State Farmers' Bank to the farmers desiring to buy the land which they wanted to cultivate as tenants

Sri Mulka GOVINDA REDDY.—Is this bnformation pertaining to Peoples' China or Chiang-kei-Sheik's China ?

Sri H. M. CHANNABASAPPA.—It is all the same whether it is Peoples' China or Chiang-kei-Sheik's China or whether it is Hon'ble Member's China. The principle involved is that the tenants will be enabled with the finance to purchase the land which they are cultivating as tenants. Otherwise, all this is mere sham. ನಾನು ಕೇಳುತ್ತೇನೆ, ತಾವು ಟೆನೆನ್ಸಿ ಕಾನೂನು ಮಾಡಿಕೊಂಡು ಆ ರೀತಿ ಏಕೆ ಮಾಡಲಿಲ್ಲ ? ಪ್ಲಾನಿಂಗ್ ಕಮಿಷನ್ ಏಕೆ ಮಾಡಲಿಲ್ಲ ? ಏಕೆಂದರೆ, I tell again that they have not got that determination. They are afraid of certain sections. That is the hard fact. Their problem is where to find the money. The money has got to be found. The tenant must be provided with the wherewithal to purchase the land. ಇಲ್ಲದಿದ್ದರೆ, ಯಾವಾಗಲೂ ಹೀಗೆಯೇ ಇರಲಿ ಎಂತಲೇ ?

ಆದುದರಿಂದ ನಾನು ಹೇಳುವುದು, ನಿಮಗೆ ಶಕ್ತಿ ಇಲ್ಲ. ಪ್ಲಾನಿಂಗ್ ಕಮಿಷನ್ ನೋಡಿದರೆ ಅದರಲ್ಲಿ ಮೊದಲಿನಿಂದ ಕೊನೆಯವರೆಗೂ ಅದು ಹೀಗಾಗಬೇಕು, ಹಾಗಾಗಬೇಕು ಎಂದು ವೇದಾಂತ ಇದೆಯೇ ಹೊರತು ಯಾವ ರೀತಿ ಸಾಧನೆ ಮಾಡಬೇಕು ಎನ್ನುವುದನ್ನು ಅಲ್ಲಿ ಸ್ಪಷ್ಟಮಾಡಿಲ್ಲ. ತಕ್ಕ ಏರ್ಪಾಡು ಮಾಡಿ ಶಾಸನ ತಂದರೆ ಸಾರ್ಥಕ, ಟೆನೆಂಟ್‌ಗಳು ಜಮೀನ್‌ದಾರರಾಗುತ್ತಾರೆ. ಹಾಗಿಲ್ಲದೆ ಕೇವಲ ಶಾಸನ ಮಾಡಿಬಿಟ್ಟರೆ ಅವರ ಪಾಡು ದೇವರೇ ಗತಿ ! ಹಳ್ಳಿಗಳಲ್ಲಿ ಏನು ಪರಿಸ್ಥಿತಿ ಇದೆ ಎನ್ನುವುದನ್ನು ನೋಡಬೇಕು. ಹಳ್ಳಿಗಳಲ್ಲಿ ಅನೇಕ ಅವಿದ್ಯಾವಂತ ಜನರಿದ್ದಾರೆ, ಟೆನೆಂಟ್‌ಗಳಿಗೆ ತಿಳುವಳಿಕೆಯಿರುವುದಿಲ್ಲ. ಜಮೀನ್‌ದಾರರು ತಿಳುವಳಿಕಸ್ಥರು, ಹಣವಂತರು ಮತ್ತು ಪ್ರಭಾವಶಾಲಿಯಾಗಿರುತ್ತಾರೆ; ತಮ್ಮ ಆಸ್ತಿ ಬೇರೆಯವರಿಗೆ ಕೊಡಬೇಕೆಂದರೆ ಸಾಧ್ಯವಾದಷ್ಟು ಪ್ರಯತ್ನ ಮಾಡಿ ತಮ್ಮ ಆಸ್ತಿ ಹೋಗದೇ ಇರುವ ಏರ್ಪಾಡು ಮಾಡುತ್ತಾರೆ; ಇದು ಮನುಷ್ಯ ಸ್ವಭಾವ.

ಆದುದರಿಂದ ಅವನು ದುಡ್ಡು ಕೊಟ್ಟು ಹೊರತು ಜಮೀನು ಕೊಡುವುದಿಲ್ಲ. ಜಮೀನ್‌ದಾರನ ವಿಚಾರ ತೆಗೆದುಕೊಳ್ಳಿ. ನೀವು provide ಮಾಡಿರುವುದು ಒಂದು ನೋಟೀಸ್ ಕೊಡಬೇಕೆಂದು. ಆಗ ರೈತ ಇಷ್ಟು ರೂಪಾಯಿ ಕೊಡಬೇಕೆಂದು ಹೇಳಿದರೆ ಅದನ್ನು ಜಮೀನ್‌ದಾರ ಒಪ್ಪಿಕೊಂಡರೂ ಒಪ್ಪಿಕೊಳ್ಳಬಹುದು. ಒಂದು ಸಮಯ ಒಪ್ಪಿಕೊಳ್ಳದಿದ್ದರೆ ಅಮಲ್ದಾರರು ಅದನ್ನು

ನಿರ್ಧಾರ ಮಾಡಬೇಕಾಗಿದೆ. ಹತ್ತು ವರ್ಷಗಳು ಕಳೆಯುವವರೆಗೆ ಆ ಮನುಷ್ಯ ದುಡ್ಡು ಡಿಪಾಜಿಟ್ ಮಾಡುವುದಕ್ಕೆ ತಯಾರಾಗಿರಬೇಕು. Your aim is that within these 10 years the poor man should become the owner of the land. It is rather surprising to me.

Mr. SPEAKER.—The House will now rise for lunch and meet again at 3-30 P.M.

The House adjourned for Lunch at Three of the Clock and reassembled at Thirty Minutes past Three of the Clock.

[MR. SPEAKER in the Chair].

Mr. SPEAKER.—Sri H. M. Channabasappa will continue his speech.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಮೈಸೂರು ಸಂಸ್ಥಾನದಲ್ಲಿ tenants ಬಹಳ ಕಡಿಮೆ ಇದ್ದಾರೆ ಎನ್ನತಕ್ಕಂಥಾದ್ದು ಅಂಕಿ ಅಂಶಗಳಿಂದ ಖಚಿತವಾಗಿದೆ. ಈ tenancy ಪ್ರಶ್ನೆಯನ್ನು ನಾವು ಉತ್ತಮ ಪಡಿಸುವುದಾಗಿ ಅವರೆಲ್ಲರೂ ಜಮೀನ್ದಾರರಿಗಾಗಿ ಮಾಡಿದ ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಂಡರೆ ಇವೆಲ್ಲಕ್ಕಿಂತಲೂ ಕೂಡ ಆ ಮಾರ್ಗ ಬಹಳ ಉತ್ತಮವಾದುದು ಎಂಧು ನನ್ನ ಅಭಿಪ್ರಾಯ. ಹಾಗೆ ಮಾಡಬೇಕಾದರೆ 2-3 ವಿಧಾನಗಳಿವೆ. ಮೊದಲನೆಯದು ಜಮೀನ್ದಾರರಲ್ಲಿ ಹೆಚ್ಚಾಗಿರತಕ್ಕ ಜಮೀನನ್ನು ಸರಕಾರದವರು ಕೊಂಡುಕೊಂಡು ಗೇಣೀದಾರರಿಗೆ ಆ ಜಮೀನನ್ನು ಹಂಚಿಕೆಮಾಡಿ lands bondನ್ನು ಹಣಕ್ಕೆ ಬದಲಾಗಿ ಸರಕಾರದವರು ಕೊಟ್ಟು ಗೇಣೀದಾರರಿಂದ ಹಣವನ್ನು 25 ಅಥವಾ 30 ವರ್ಷಗಳಲ್ಲಿ ವಾಪಸ್ಸು ತೆಗೆದುಕೊಳ್ಳುವುದು ಒಂದು ವಿಧಾನ, ಅಂದರೆ ಇಂತಹ Land bonds, soil bonds ಎಂಬ ಕಾರ್ಯಕ್ರಮವನ್ನು ಅನೇಕ ಪಾಶ್ಚಿಮಾತ್ಯ ದೇಶಗಳಲ್ಲಿ ಕೈಗೊಂಡಿದ್ದಾರೆ. ಇದೂ ಇಲ್ಲದೆ ಹೋದ ಪಕ್ಷದಲ್ಲಿ banking facilities ಏರ್ಪಾಡುಮಾಡಿ ಗೇಣೀದಾರರು ಯಾರಾದರೂ ಜಮೀನನ್ನು ತೆಗೆದುಕೊಳ್ಳುತ್ತೇವೆಂದು ಅಭಿಪ್ರಾಯಪಟ್ಟರೆ ಅವರುಗಳಿಗೆ ಬಹಳ ಕಡಿಮೆ ದರದ ಬಡ್ಡಿಯಲ್ಲಿ 25 ವರುಷಗಳಿಗೆ ಮೇಲ್ಪಟ್ಟು ಅವಧಿ ಕೊಟ್ಟು ಹಣವನ್ನು ಆ ಸಾಲನಲ್ಲಿ ಅಷ್ಟಷ್ಟು ವಾಪಸ್ಸು ಕೊಟ್ಟುಕೊಂಡು ಪೂರ್ತಿ ಹಣ ತೀರಿಸುವಹಾಗೆ ಮಾಡುವುದು ಎರಡನೇ ವಿಧಾನ, ಮೂರನೆಯದು ಯಾರದೇ ಆಗಿರತಕ್ಕಂಥ ಜಮೀನನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಅಕ್ವೈರುಮಾಡಿ ಯಾವ ಯಾವ ಡಿಸ್ಟ್ರಿಕ್ಟಿನಲ್ಲಿ ಯಾರು ಯಾರು ಗೇಣೀದಾರರು ಇದ್ದಾರೋ ಅವರಿಗೇ ಹಂಚಿಕೆ ಮಾಡತಕ್ಕದ್ದು. ಮತ್ತು ಅದರ ಖರೀದಿಯನ್ನು ಅವರಿಂದ ಕೆಲವು ವರ್ಷಗಳಲ್ಲಿ ವಸೂಲು ಮಾಡತಕ್ಕದ್ದು. ಇದನ್ನೂ ಬಿಟ್ಟರೆ ಈಗ ಸರಕಾರದ ವಶದಲ್ಲಿ ಜಮೀನು ಇದೆಯೋ ಇಲ್ಲವೇ ಎಂಬುದು ಪರಿಶೀಲನೆಮಾಡುವ ಅಂಶ. ನಮ್ಮಲ್ಲಿ ಬೇಕಾದಷ್ಟು ಜಮೀನನ್ನು ಹಾಲಿ ಇಟ್ಟುಕೊಂಡು ಈ ಭೂ ಸಮಸ್ಯೆ ವ್ಯವಸ್ಥೆಯನ್ನು ನಾವು ಸರಿಪಡಿಸುತ್ತೇವೆ ಎಂಬುದಾಗಿ ನಾವು ಪ್ರಯತ್ನ ಮಾಡಿದರೆ ಅದು ತಪ್ಪಾಗುವುದಿಲ್ಲ. ಇವೊತ್ತು ನನಗೆ ತಿಳಿದಿರುವಂತೆ ಸರಕಾರದವರು ಪ್ರಕಟಿಸರತಕ್ಕ ಅಂಕಿ ಅಂಶಗಳ ಆಧಾರದಮೇಲೆ ಹೇಳಬಹುದಾದರೆ, 8,83,000 ಎಕರೆಗಳಷ್ಟು ಸಾಗುವಳಿಗೆ ಯೋಗ್ಯವಾದ, ಮತ್ತು ಯಾವ ತಂಟೆ ತಕರಾರುಗಳಿಗೂ ಒಳಪಡದೆ ಇರತಕ್ಕಂಥ ಭೂಮಿ, ಬಳ್ಳಾರಿಜಿಲ್ಲೆ ಸೇರಿಸಿ, ಸರಕಾರದ ವಶದಲ್ಲಿದೆ. ಸಾಗುವಳಿಗೆ ಯೋಗ್ಯವಾದುದು ತಂಟೆ ತಕರಾರುಗಳಿಲ್ಲದೆ ಸರಕಾರದ ಸಂಪೂರ್ಣ ಹತೋಟಿ ಮತ್ತು ಸ್ವಾಮ್ಯದಲ್ಲಿರತಕ್ಕ ಇಂತಹ ಭೂಮಿಯನ್ನು ಏನಾದರೂ ಕೊಟ್ಟರೆ ಬೇಡವೆಂದು ಹೇಳತಕ್ಕವರು ಯಾರೂ ಇಲ್ಲ. ಅಂತಹ ಭೂಮಿ ನಾನು ಆಗಲೇ ಹೇಳಿದಂತೆ ಬಳ್ಳಾರಿ ಸೇರಿಸಿ 8,83,314 ಎಕರೆಗಳಿದೆ. ಇದರ ಪೈಕಿ ಬಳ್ಳಾರಿ ಬಿಟ್ಟು ಮೈಸೂರು ಸಂಸ್ಥಾನದಲ್ಲಿ 6,14,555 ಎಕರೆಗಳಿವೆ. ಬಳ್ಳಾರಿ ಒಂದರಲ್ಲಿ 2,68,759 ಎಕರೆಗಳಿವೆ. ಇದರ ಜೊತೆಗೆ ಅನಾವಶ್ಯಕವಾಗಿ ಬೇಚರಾಕು ಗ್ರಾಮಗಳಲ್ಲಿ ಗೋಮಾಳಗಳು 300 ರಿಂದ 800 ಎಕರೆವರೆಗೆ ಆಗುವ ಸನ್ನಿವೇಶ ಅನೇಕ ಇವೆ. ಅಂಥಾದ್ದು ಪೆರಿಯಾಪಟ್ಟಣ ತಾಲ್ಲೂಕು ಒಂದರಲ್ಲೇ 15 ಸಾವಿರ ಎಕರೆಗಳಿಗೆ ಮೇಲ್ಪಟ್ಟು ಜಮೀನು ಇದೆ ಎನ್ನುವಾಗ ಇನ್ನೂ ದೇಶಾದ್ಯಂತ ಅಂದರೆ ಹೆಗ್ಗಡದೇವನಕೋಟೆ, ಹುಣಸೂರು ಮುಂತಾದ ಜಾಗಗಳಲ್ಲಿ ಎಷ್ಟಿರಬಹುದೆಂಬುದನ್ನು ತಾವೇ ಯೋಚನೆಮಾಡಿ. ಅಂತೂ ಸರಕಾರದಲ್ಲಿ ಸಾಗುವಳಿಗೆ ಯೋಗ್ಯವಾದ ಮತ್ತು ಬೇ ತಕರಾರು ಜಮೀನು ಅಷ್ಟು ಹೆಚ್ಚಿನ ಪ್ರಮಾಣದಲ್ಲಿದೆ ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಇಷ್ಟು ಸರ್ಕಾರಿ ಜಮೀನುಗಳಿದ್ದರೂ ಜನಗಳು ಇನ್ನೊಬ್ಬ ಜಮೀನ್ದಾರನ ಜಮೀನನ್ನು ಗೇಣೀ ಮಾಡಿಕೊಂಡಿರುವುದಕ್ಕೆ ಕಾರಣವೇನಿದೆ ಎಂಬುದು ಯೋಚನೆ ಮಾಡತಕ್ಕ ವಿಷಯ. ಸರಕಾರದವರು ಜಮೀನನ್ನು ಧಾರಾಳವಾಗಿ ಜನಗಳಿಗೆ ಕೊಡುತ್ತಾ ಇಲ್ಲ, ಎಂದು ಅರ್ಥವಾಗಬೇಕು. ಇಲ್ಲದಿದ್ದರೆ ಜಮೀನು ಸಾಗುಮಾಡುವುದಕ್ಕೆ ರೈತರಿಗೆ ಅನೇಕ ತೊಂದರೆಗಳಿವೆ ಎಂಬುದು ಅರ್ಥವಾಗಬೇಕು. ಇವೆರಡರ ಜೊತೆಗೆ ಸಾಗುಮಾಡುವುದಕ್ಕೆ ಹೋಗಬೇಕೆಂದರೆ ದುಡ್ಡಿನ ಸೌಲಭ್ಯಗಳಿಲ್ಲ ಎನತಕ್ಕಂಥಾದ್ದು ಇನ್ನೊಂದು ಕಾರಣವಿರಬಹುದು. ಹೀಗೆ ನಾಲ್ಕೈದು ಕಾರಣಗಳಿವೆ. ಸರಕಾರದವರು ಈ ಭೂ ಪದ್ಧತಿಯನ್ನು ಬದಲಾವಣೆಮಾಡಿ—ಉಳ. ಬೇಕು ಎನ್ನತಕ್ಕಂಥವನಿಗೆ, ಭೂಮಿಯನ್ನು ನೋಡಿಕೊಂಡಿರುವವನಿಗೆ ಸಾಕಾಷ್ಟು ಭೂಮಿಯನ್ನು ಕೊಡುವುದು ಸರಕಾರದವರ ಧರ್ಮ,—ಹಾಗೆ ಸರಕಾರದ ಭೂಮಿಯನ್ನು ವಿಲೇವಾರಿಮಾಡಿ ಅವುಗಳನ್ನೆಲ್ಲಾ ಸಾಗುವಳಿಗೆ ತರುವುದಕ್ಕೋಸ್ಕರ ಒಂದು ಯೋಜನೆಯನ್ನು ತಯಾರುಮಾಡಿ ಆ ಜಮೀನನ್ನು ಗೇಣೀದಾರರಿಗೆ ಹಂಚಬೇಕು. ಒಂದುವೇಳೆ ಭೂಮಿಯನ್ನು ಹಾಗೆ ಹಂಚಿದಮೇಲೆ ಅದು ಸಾಲದೆ ಹೋದ ಪಕ್ಷದಲ್ಲಿ ಹೇರಳವಾಗಿ ಜನ ಮುಂದೆ ಬಂದು ನನಗೆ ಜಮೀನು ಇಲ್ಲ, ಜೀವನಕ್ಕೆ ರಹಾ ಇಲ್ಲ, ನನಗೆ ಜಮೀನುಬೇಕು ಎಂದು ದೇಶದಲ್ಲಿ ಹಾಹಾಕಾರ ಹುಟ್ಟಿದ ಪಕ್ಷದಲ್ಲಿ ಭೂಮಿ ಯಾರ ಹತ್ತಿರ ಇದೆಯೋ, ಅದನ್ನು ಕೂಡ ಸಾರ್ವಜನಿಕ ಹಿತದೃಷ್ಟಿಯಲ್ಲಿ ಬಲವತ್ ಬಂದಿಯಾಗಿ ಜಮೀನ್ದಾರನಿಂದ ತೆಗೆದುಕೊಳ್ಳಬೇಕಾದುದು ಅದೂ ಒಂದು ಮಾರ್ಗ. ಇವೊತ್ತಿನ ಪರಿಸ್ಥಿತಿ ನೋಡಿದರೆ ಸರಕಾರದವರ ವಶದಲ್ಲಿ ಸುಮಾರು 883 ಸಾವಿರ ಎಕರೆಗಳು Assessed waste ಮತ್ತು ಇದರ ಜೊತೆಗೆ ಲಕ್ಷಾಂತರ ಎಕರೆಗಳು ಸಾಗುವಳಿಗೆ ಯೋಗ್ಯ

(ಶ್ರೀ ಎಚ್. ಎಂ. ಚನ್ನಬಸಪ್ಪ)

ವಾದಂಥ ಗೋಮಾಳ ಮತ್ತು ಅನಾವಶ್ಯಕವಾದ ಜಮೀನು ಇವೆರಡನ್ನೂ ಕೂಡ ಸರ್ಕಾರವೇ ಇಟ್ಟುಕೊಂಡು, ಸರ್ಕಾರವೇ ಇಡೀ ರಾಷ್ಟ್ರದಲ್ಲಿ ದೊಡ್ಡ ಜಮೀನ್ದಾರರಾಗಿದ್ದುಕೊಂಡು, ಇತರ ಬಡಪಾಯಿ ಜಮೀನ್ದಾರರನ್ನು ಕಿರುಕುಳಕ್ಕೆ ಒಳಪಡಿಸುವುದು ನ್ಯಾಯವೇ ಮತ್ತು ಆ ವಿಚಾರವನ್ನು ಯೋಚನೆಮಾಡಿದ್ದೀರಾ ಎಂದು ಕೇಳುತ್ತೇನೆ. ತಾವು ಉತ್ತರವನ್ನು ಹೇಳುವುದಾದರೂ ಇಷ್ಟೆ. 'ಇವೆಲ್ಲಾ ಕಾಡು ಮೇಡು, ಇವನ್ನು ಸಾಗುಮಾಡುವುದಕ್ಕೆ ಅವಕಾಶವಿಲ್ಲ. ನಿಮ್ಮ ಮನೆ ಚೊಕ್ಕಟವಾಗಿದೆ. ಆದ್ದರಿಂದ ನಾವು ಬಂದು ನಿಮ್ಮ ಮನೆಯಲ್ಲಿ ಕುಳಿತುಕೊಳ್ಳುತ್ತೇವೆ' ಎಂದು ಹೇಳಿದ ಹಾಗಿದೆ. ಅದು ಸರಿಯಲ್ಲ. ಸರಕಾರ ಯಾವಾಗಲೂ ರಾಷ್ಟ್ರಹಿತದೃಷ್ಟಿಯಿಂದ, ನಾನು ಮೊದಲೇ ಹೇಳಿದಂತೆ, ದೊಡ್ಡ ಯೋಜನೆಯೊಂದನ್ನು ಹಾಕಬೇಕು. ಪಾಶ್ಚಾತ್ಯದೇಶದಲ್ಲಿ Land resettlement ಎಂಬುದಾಗಿ ಮಾಡಿದ್ದಾರೆ. ಬರೀ ಜಮೀನನ್ನು ಕೊಡುವುದಷ್ಟೇ ಅಲ್ಲ, ಆ ಜಮೀನನ್ನು ಸಾಗುಮಾಡಿ ಅದರಿಂದ ಉತ್ಪನ್ನ ಮಾಡತಕ್ಕಂಥ ಸ್ಥಿತಿಗೆ ತರುವವರೆಗೂ ಹಣವನ್ನು ಸರ್ಕಾರದವರು ಕೊಟ್ಟು ಆ ಹಣವನ್ನು ಹತ್ತಾರು ವರ್ಷಗಳಲ್ಲಿ ವಾಪಸ್ಸು ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಬೇರೆ ರಾಷ್ಟ್ರದಲ್ಲಿ ಮಾಡಿದ್ದಾರೆ. ಇಲ್ಲಿಯ ಸರ್ಕಾರ ಆ ರೀತಿ ಯಾವ ವ್ಯವಸ್ಥೆಯನ್ನು ಮಾಡಿದೆ? ನನಗೆ ತಿಳಿದಿರುವ ಮಟ್ಟಿಗೆ ಸಮರ್ಪಕವಾಗಿ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ.

ಒಬ್ಬ ಸದಸ್ಯರು.—ಐವತ್ತು ಕೋಟಿ ರೂಪಾಯಿಗಳನ್ನು ಒದಗಿಸಿ ಕೊಟ್ಟರೆ ಅವರು ಹೇಳಿದಂತೆ ಮಾಡಲು ಸಾಧ್ಯವಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಪ್ಪಿಕೊಂಡೆ, ದುಡ್ಡು ಇಲ್ಲದೆ ಯಾವ ಕೆಲಸವೂ ಆಗುವುದಿಲ್ಲ. ದುಡ್ಡು ಇರುವವರನ್ನು ಮಾತನಾಡಿಸುವುದಕ್ಕೂ ಕೂಡ ತಮಗೆ ಶಕ್ತಿಯಿಲ್ಲ. ಹಿಂದೆ ದವಸ ಧಾನ್ಯಗಳು ಹೇರಳವಾಗಿ ಹಳ್ಳಿಗಾಡಿನಲ್ಲಿದ್ದಾಗ ಬೆಲೆ ಹೆಚ್ಚಾದರೆ, ರೈತರು ಧಾನ್ಯ ಕೂಡಿ ಹಾಕಿದರೆ ಅದರಿಂದ ದೇಶಕ್ಕೆ ಕಷ್ಟವಾಗುತ್ತದೆಂದು ಇದರ ಬಗ್ಗೆ ಒಂದು ನ್ಯಾಯವಾದ ಕಾರ್ಯಾಚರಣೆಯನ್ನು ನಿರ್ಧಾರಮಾಡಿ ರೈತರ ಹೊಟ್ಟೆಪಾಡಿಗೆ ಬೇಕಾದಷ್ಟು ದವಸವನ್ನು ಬಿಟ್ಟು ಬಿಟ್ಟು ಬಾಕಿಯದನ್ನು ವಸೂಲು ಮಾಡಲಿಲ್ಲವೇ? ಅದೇ ರೀತಿಯಾಗಿ ರಾಷ್ಟ್ರದ ಹಿತದೃಷ್ಟಿಯಿಂದ ಬಡವರೂ ಬಲ್ಲಿದರೂ ಎಲ್ಲರೂ ಕೂಡಿ ಸಾಗುವಳಿದಾರನಿಗೆ ಸುಖ ಸಂತೋಷ ಉಂಟಾಗುವುದಕ್ಕೆ ತಕ್ಕ ವ್ಯವಸ್ಥೆಮಾಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾದುದು ಅತ್ಯಾವಶ್ಯಕ. ಹೀಗಿರುವಾಗ ಯಾರು ಯಾರಲ್ಲಿ ಅನಾವಶ್ಯಕವಾಗಿ ದುಡ್ಡು ಹೇರಳವಾಗಿದ್ದು ಕೊಳೆಯುತ್ತಾ ಬಿದ್ದಿದೆಯೋ ಅಂಥವರಿಂದ ಪುಗಸಟ್ಟೆ ತೆಗೆದುಕೊಳ್ಳಿ ಎಂದು ಹೇಳುವುದಿಲ್ಲ, ಸ್ವಲ್ಪ ಬಡ್ಡಿಯನ್ನು ಕೊಟ್ಟು ತೆಗೆದುಕೊಳ್ಳಿ. ತಾವು ಯಾವರೀತಿ ಯಥೇಚ್ಛವಾಗಿ ಧಾನ್ಯವನ್ನು ದೇಶದ ಹಿತದೃಷ್ಟಿಯಿಂದ ಅವಶ್ಯಕ ಬಂದಾಗ ಹಣಕೊಟ್ಟು ರೈತರಿಂದ ತೆಗೆದುಕೊಂಡು ಎಲ್ಲರಿಗೂ ಹಂಚಿ ದೇಶದಲ್ಲಿ ಸುಭಿಕ್ಷ ವಾತಾವರಣವನ್ನು ಕಲ್ಪನೆ ಮಾಡಿದಿರೋ ಅದೇ ರೀತಿಯಾಗಿ ಭೂಸ್ವಾಮ್ಯವನ್ನು ಸುಧಾರಣೆ ಮಾಡಬೇಕಾದರೆ ಹಣವನ್ನು ಎಲ್ಲಿಂದ ತರಬೇಕೆಂಬ ಪ್ರಶ್ನೆಗೆ ಉತ್ತರ ಅದರ ಹಿಂದೆಯೇ ಬರುತ್ತದೆ. ಬೆಂಗಳೂರು, ಮೈಸೂರು ಪಟ್ಟಣಗಳಲ್ಲಿರುವ ಜನಗಳಿಗೆ ಅನ್ನ ಎಲ್ಲಿಂದ ತರಬೇಕೆಂದು ಸರ್ಕಾರ ಕೇಳಿದಿರಾ? ಆಗ ಅಲ್ಲಲ್ಲಿ ಕಾನೂನು ಮಾಡಿ ದವಸವನ್ನು ತೆಗೆದುಕೊಂಡು ಬಂದು ದುಡ್ಡು ಕೊಟ್ಟು ಅವರನ್ನು ಕಾಪಾಡಲಿಲ್ಲವೇ? ಅದರಿಂದಲೇ ಇವೊತ್ತಿನ ದಿವಸ ತಾವು ಬಹಳ ದೀರ್ಘವಾಗಿ ಆಲೋಚನೆಮಾಡಿ ರಾಷ್ಟ್ರ ಹಿತದೃಷ್ಟಿಯಿಂದ ಪ್ರತಿಯೊಬ್ಬ ಮನುಷ್ಯನೂ ಕೂಡ ಭೂಮಿ ಒಡೆಯನಾಗಬೇಕು, ಇನ್ನೊಬ್ಬನ ಜಮೀನನ್ನು ಉತ್ತು ದೇಹವನ್ನು ದಂಡಿಸಿ ಆತನ ಹೊಟ್ಟೆಯನ್ನು ಕಾಪಾಡದೆ ಇನ್ನೊಬ್ಬನ ಹೊಟ್ಟೆಯನ್ನು ಹೊರಿಸುವ ಪದ್ಧತಿ ಹೋಗಬೇಕು, ಪ್ರತಿಯೊಬ್ಬ ಮನುಷ್ಯನಿಗೂ ದುಡಿಯದೆ ಅನ್ನ ಸಿಕ್ಕಬಾರದು, ಎಂಬ ರೀತಿ ವ್ಯವಸ್ಥೆ ಮಾಡಬೇಕು. ಒಂದು ಕಡೆ ಜನಗಳು ಅವರ ತಂದೆಯೋ ಅಥವಾ ಮುತ್ತಾತನೋ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿ ಬ್ಯಾಂಕಿನಲ್ಲಿ ಇಟ್ಟುಕೊಂಡು ಅವನ್ನು ಯಾವುದಾದರೂ ತೋರಿಸಲೇ, ಹಾಗೆಯೇ ಸ್ವಲ್ಪವೂ ಶ್ರಮ ಪಡದೆ, ಕುಡಿದ ನೀರೂ ಕೂಡ ಅಲ್ಲಾಡದೆ ಜೀವನವನ್ನು ಸಾಗಿಸಿಕೊಂಡು ಹೋಗುವ ದೃಶ್ಯ ಒಂದುಕಡೆ. ಇನ್ನೊಂದುಕಡೆ, ಹೊಟ್ಟೆಯಲ್ಲಿ ಕುಡಿದ ನೀರು ಅಲ್ಲಾಡುತ್ತಾ ಹೋಗುವುದಲ್ಲದೆ ತನ್ನ ಜೀವನವನ್ನು ಸಾಗಿಸುವುದಕ್ಕೋಸ್ಕರ ಇನ್ನೊಬ್ಬ ಮನುಷ್ಯನ ಹತ್ತಿರ ಬೆಳಿಗ್ಗೆಯಿಂದ ಸಂಜೆಯವರೆಗೂ ದುಡಿದರೂ ಕೂಡ ಅನ್ನಕ್ಕೆ ಮತ್ತು ಬಟ್ಟೆಗೆ ಸಾಕಷ್ಟು ಹಣ ಒದಗದಿರುವ ಪರಿಸ್ಥಿತಿ. ಇಂತಹ ಸಮತಾವಾದದ ಪರಿಸ್ಥಿತಿ ಸರಿಯಲ್ಲ. ಇದನ್ನು ಸರಿಹೊಂದಿಸಬೇಕಾದರೆ ಒಂದು ಕಡೆ ಎಲ್ಲಿಯೋ ಪ್ರಯತ್ನಮಾಡಿದರೆ ಅದು ಸರಿ ಹೋಗುವುದಿಲ್ಲ. ಒಂದುಕಡೆ ದೃಷ್ಟಿಯಿಂದ ಹೋದರೆ ಅದು ಸರಿಹೋಗಲಾರದು. ಸಮಗ್ರದೃಷ್ಟಿಯಿಂದ ಈ ವಿಚಾರವನ್ನು ಪರ್ಯಾಲೋಚನೆ ಮಾಡಬೇಕು. ಹಣ ಎಲ್ಲಿದೆಯೆಂದು ಮಾನ್ಯಸದಸ್ಯರು ಕೇಳಿದ್ದಕ್ಕೆ ನಾನು ಉತ್ತರ ಕೊಡುತ್ತೇನೆ. ಇವೊತ್ತು ದೇಶದಲ್ಲಿ ಅನಾವಶ್ಯಕವಾಗಿ ಬ್ಯಾಂಕಿನಲ್ಲಿ ಕೊಳೆಯುತಕ್ಕಂಥಾದ್ದು ಬೇಕಾದಷ್ಟು ಹಣವಿದೆ. ಇವೆಲ್ಲಕ್ಕೂ ಕೂಡ ಒಂದು ಸರಿಯಾದ ಬಡ್ಡಿ ಕೊಡಿ. ನನ್ನ ಅಭ್ಯಂತರವಿಲ್ಲ. ಅವರಿಗೆ ಅನ್ಯಾಯಮಾಡಬೇಕೆಂದು ನನ್ನ ಅಭಿಪ್ರಾಯವಲ್ಲ. ಅಂತಹ ಹಣವೆಲ್ಲವನ್ನೂ ಸರಕಾರದವರು ಸ್ವಾಧೀನಪಡಿಸಿಕೊಂಡು ದೇಶಾಭಿವೃದ್ಧಿಗೋಸ್ಕರ ಆ ಜಮೀನನ್ನು ಸಾಗುವಳಿಗೆ ತರುವುದಕ್ಕೋಸ್ಕರ ಖರ್ಚುಮಾಡಿ. ಒಂದೊಂದುಕಡೆ 5 ಸಾವಿರ ಎಕರೆಗಳನ್ನಿಟ್ಟು plot ಗಳನ್ನು ಮಾಡಿ ನಮ್ಮಲ್ಲಿರತಕ್ಕಂಥ ಎಲ್ಲಾ ದುಡ್ಡುಗಳನ್ನೂ ಉಪಕರಣಗಳನ್ನೂ ಅದಕ್ಕೆ ಹಾಕಿ 10-10 ಎಕರೆಗಳಂತೆ ಜಮೀನು ಇಲ್ಲದಂಥ ಪ್ರತಿಯೊಬ್ಬರಿಗೂ ಕೊಡುತ್ತಾ ಬಂದರೆ, ಆಗ ಹೊಲವನ್ನು ಉತ್ತು ಬಿತ್ತಿ ಸಾಗುಮಾಡುವುದಕ್ಕೆ ಸಾಧ್ಯ. ಇಲ್ಲದೇ ಹೋದರೆ ಜಮೀನು ಕೊಡುತ್ತೇವೆಂದು 15-20 ಎಕರೆಗಳನ್ನು ಪೆರಿಯಾಪಟ್ಟಣದ ಕಾಡಿನೊಳಗೋ ಇಲ್ಲವೇ ಹೆಗ್ಗಡದೇವನಕೋಟೆಯ ಕಾಡಿನೊಳಗೋ ಅಥವಾ ಖರಾಬು ಇರುವ ಕಾಡಿನೊಳಗೋ ಕೊಟ್ಟರೆ ಅದರಿಂದ ರೈತನಿಗೆ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ತಾವು ಸ್ವಲ್ಪ ಧೈರ್ಯಮಾಡಿ ನಾನು ಹೇಳಿದ ಕಾರ್ಯಕ್ರಮವನ್ನು ತೆಗೆದುಕೊಂಡು, 8,83,000 ಎಕರೆ ಜಮೀನಿನ ಜೊತೆಗೆ ಲಕ್ಷಾಂತರ ಎಕರೆ ಗೋಮಾಳವನ್ನು ಮತ್ತು ಇತರ ಅನೇಕ ಬಾಬಿನಲ್ಲಿರತಕ್ಕಂಥ ಜಮೀನುಗಳನ್ನು ಸಾಗುವಳಿಗೆ ತರುವುದಕ್ಕೆ ವ್ಯವಸ್ಥೆಮಾಡಿ. ಅದಕ್ಕೆ ಹಣವನ್ನು ಒದಗಿಸಿ ಜಮೀನು ಇಲ್ಲದೆ ಇರತಕ್ಕಂಥ ಜನರಿಗೆಲ್ಲಾ ಭೂಮಿಯನ್ನು ಹಂಚಿ ಅವರು ಸಾಗುಮಾಡಿಕೊಂಡು ಸುಖ ಜೀವನವನ್ನು ನಡೆಸುವುದಕ್ಕೆ ವ್ಯವಸ್ಥೆಮಾಡಿ. ಇದನ್ನು ತಾವು ಪುಗಸಟ್ಟೆಮಾಡಬೇಕಾಗಿಲ್ಲ. ಅದಕ್ಕೆ ತಗುಲುವ ಖರ್ಚನ್ನೂ ಸಹ ತೆಗೆದುಕೊಳ್ಳಿ. ಯಾವ ದಿವಸವೂ ತಾವು ಹಣಕ್ಕೆ ಯೋಚನೆ

ಮಾಢಬೇಕಾಗಿಲ್ಲ. ದೇಶದಲ್ಲಿ ಬೇಕಾದಷ್ಟು ಹಣ ವಿದೆ.

ಶ್ರೀ ಎಸ್. ಗೋಪಾಲಗೌಡ್ರ.—ಹಣವೆಲ್ಲಿದೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ದವಸ ಎಲ್ಲಿತ್ತು ? ಅದು ಹೆಚ್ಚಾಗಿ ಬೆಳೆದವರ ಹತ್ತಿರವಿತ್ತು. ಹಾಗೆಯೇ ಹಣವೂ ಕೂಡ ಹೆಚ್ಚಾಗಿ ಮಡಗಿರುವವರ ಹತ್ತಿರವಿದೆ.

ಶ್ರೀ ಎಸ್. ಗೋಪಾಲಗೌಡ.—ಅದು ಎಲ್ಲಿದೆ ಎಂದು ಹೇಳಿದರೆ ಅದನ್ನು ತೆಗೆದುಕೊಳ್ಳುವುದಕ್ಕೆ ನಮಗೆ ಅನುಕೂಲವಾಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈ ರೀತಿಯಾಗಿ ಕಾರ್ಯಸಾಧನೆ ಮಾಡತಕ್ಕಂಥ ವಿಧಾನವನ್ನು ಬಿಟ್ಟು ಇಂತಹ ಗೇಣಿ ಕಾನೂನು ಮಾಡುವುದರಿಂದ ಎಷ್ಟು ಮಟ್ಟಿಗೆ ರೈತನ ವರಮಾನ ಉತ್ತಮವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು.

ನೋಡಿ; ನೂರು ಎಕರೆಗಳನ್ನು ಒಂದು ಸ್ಟ್ಯಾಂಡರ್ಡ್ ಎಕರೆಯೆಂದು ತಾವು ಏರ್ಪಾಡು ಮಾಡಿದ್ದೀರಿ. ಇಷ್ಟು ಎಕರೆಗಳನ್ನು ಒಬ್ಬ ಮನುಷ್ಯನು permissible holding ಎಂದು ಹೇಳಿ ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ಈಗ ನಮ್ಮ ಜಮೀನ್ದಾರರಲ್ಲಿತಕ್ಕ ಜಮೀನುಗಳು ಎಷ್ಟೆಷ್ಟು ಎಂದು ಪರಿಶೀಲನೆ ಮಾಡಿದರೆ, ಈ ಟೆನೆನ್ಸಿ ಕಾನೂನೇ ನಮ್ಮ ಶಾಸನ ಕಡತಕ್ಕೆ ಒಂದು ಹೊರೆಯಾಗುತ್ತದೆ; ಇದರಿಂದ ಯಾರಿಗೂ ಯಾವ ಉಪಯೋಗವೂ ಆಗುವುದಿಲ್ಲವೆಂಬುದು ಕಂಡು ಬರುತ್ತದೆ. ನಾನು ಈ ಹೊತ್ತು ಹೇಳುವ ಮಾತನ್ನು ಇನ್ನು ಎರಡು ವರ್ಷಗಳಾದ ಮೇಲೆ, ಯಾರು ಈ ಕಾನೂನನ್ನು ಈಗ ತಂದಿದ್ದಾರೋ ಅವರೇ ಹೇಳುತ್ತಾರೆಂದು ನಾನು ಬಲ್ಲೆ. Today I am going to tell you that this legislation is going to bring in all sorts of litigations and put that poor man, that tenant and landlord into lot of litigation and expense. ಅವಶ್ಯಕವಾಗಿದ್ದರೆ, ಅವರಿಗಿಂತ ನಾನೇ ನಾಲ್ಕು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ಅಂಥ ಅವಶ್ಯಕತೆ ಖಂಡಿತವಾಗಿಯೂ ನನಗೆ ತೋರುವುದಿಲ್ಲ. 100 ಎಕರೆಗಳಿಗಿಂತ ಹೆಚ್ಚಿಗೆ ಇರತಕ್ಕಂಥ ಜಮೀನ್ದಾರರು ನಮ್ಮ ದೇಶದಲ್ಲಿ ಎಷ್ಟು ಜನರಿದ್ದಾರೆ? 1,224 ಜನರು ಮಾತ್ರ! ನೂರಕ್ಕೆ 96ರಷ್ಟು ಮಂದಿ ನೂರು ಎಕರೆಗೆ ಒಳಪಟ್ಟ ಹಿಡುವಳಿಯನ್ನು ಹೊಂದಿರತಕ್ಕ ಜಮೀನ್ದಾರರು 500 ಎಕರೆಗಳಿಗೆ ಮೇಲ್ಪಟ್ಟಿರತಕ್ಕ ಜಮೀನ್ದಾರರು ಶೇಕಡ·8. ಒಟ್ಟಿನಲ್ಲಿ ಕೇವಲ 64,576 ಎಕರೆಗಳು 500 ಎಕರೆಗೆ ಮೇಲ್ಪಟ್ಟ ಹಿಡುವಳಿಯನ್ನು ಹೊಂದಿರುವವರಿಗೆ ಸೇರಿವೆ. ನಿಮ್ಮ ಲೆಕ್ಕಾಚಾರದ ಪ್ರಕಾರ ಪರ್ಮಿಸಿಬಲ್ ಹೋಲ್ಡಿಂಗ್ ಸರಾಸರಿ 2½ ಪಲ್ಲ ರಾಗಿ ಬೆಳೆಯುವ ಜಮೀನು 400 ಎಕರೆಗಳಷ್ಟು ಖುಷ್ಕಿ ಆಯಿತು. 2½ ಪಲ್ಲಕ್ಕಿಂತ ಹೆಚ್ಚಿಗೆ ರಾಗಿ ಬೆಳೆಯುವ ಪ್ರದೇಶವನ್ನು ನಾನು ಎಲ್ಲಿಯೂ ನೋಡಿಲ್ಲ. ಅಲ್ಲಿಗೆ Standard Acre ಎನ್ನುವುದು 400 ಎಕರೆಯೆಂದಾಗುತ್ತದೆ. 400 ಎಕರೆಗಳವರೆಗೂ ಒಂದು ದೊಡ್ಡ ಕುಟುಂಬ ಇಟ್ಟುಕೊಳ್ಳಬಹುದೆಂದು ಹೇಳಿದಂತಾಯಿತು. ನಮ್ಮಲ್ಲಿ 500 ಎಕರೆಗಳಿಗೆ ಮೇಲ್ಪಟ್ಟಿರುವ ಹಿಡುವಳಿಯೆಲ್ಲಾ 54,000 ಎಕರೆಗಳು; ಅಂಥ ಹಿಡುವಳಿದಾರರ ಸಂಖ್ಯೆ 77 ಮಾತ್ರ. ಈಗ ನೀವು ಹೇಳಿದಂತೆ, ಈ 77 ಜನರಿಗೂ 400 ಎಕರೆಗಳಂತೆ ಬಿಟ್ಟುಬಿಡಿ. ಅಲ್ಲಿಗೆ ಉಳಿಯುವುದು 7,700 ಎಕರೆಗಳು. ಇಷ್ಟು ಎಕರೆಗಳನ್ನು ಮಾತ್ರ tenantsಗಳಿಗೆ ಕೊಡಬೇಕಾಗಿ ಬರುತ್ತದೆ. ನಾನೇನೂ ಹೊಸ ಅಂಕಿ ಅಂಶಗಳನ್ನು ಹೇಳುತ್ತಿದ್ದೇನೆಂದು ತಾವು ಭಾವಿಸಬೇಕಾಗಿಲ್ಲ. ತಾವು ಕೊಟ್ಟಿರತಕ್ಕ ಅಂಕಿ ಅಂಶಗಳನ್ನೇ ನಾನು ತಮ್ಮ ಮುಂದಿಡುತ್ತಿದ್ದೇನೆ ಅಷ್ಟೆ. ಅದನ್ನು ಪರಿಶೀಲಿಸಿ ಮುಂದೆ ಈ ಕಾನೂನು ನಮಗೆ ಅವಶ್ಯಕವೇ ಇಲ್ಲವೇ ಎಂಬುದನ್ನು ನೀವೇ ನೋಡಿಕೊಳ್ಳಿ.

ಶ್ರೀ ಕಡಿದಾಳ್ ಮಂಜಪ್ಪ.—ಹಾಗಾದರೆ, permissible holdingನ್ನು ಕಡಮೆ ಮಾಡಬೇಕೆಂದು ಹೇಳುತ್ತಿದ್ದೀರಾ ?

Sri H. M. CHANNABASAPPA.—I am only drawing the attention of the Hon'ble Minister that by what you are going to do, you are not going to confer the benefits on the tenants. That is all.

Sri Kadidal MANJAPPA.—With your permission, I want to know whether it is not desirable to reduce the permissible holding in the light of the arguments advanced by my Hon'ble friend ?

Sri H. M. CHENNABASAPPA.—I will come to give my opinion later. I am only placing the facts before you. I will satisfy you that 7,000 acres will be releasable under this Bill.

Sri Kadidal MANJAPPA.—Do not consider your own points.

Sri H. M. CHANNABASAPPA.—These are all hard facts which you yourself have published. I am making out a case that this is not going to bring about the desired effect.

Sri Kadidal MANJAPPA.—Wrong mathematics !

ಶ್ರೀ ಎಚ್. ಎಂ. ಚೆನ್ನಬಸಪ್ಪ.—Do you dispute these facts ? ಅದೂ ಹೋಗಲಿ. ದೊಡ್ಡ ಜಮೀನ್ದಾರರ ವಿಷಯ ಬೇಡ. ನೂರು ಎಕರೆಗಳಿಗೆ ಒಳಪಟ್ಟಿರುವವರನ್ನು ತೆಗೆದುಕೊಳ್ಳೋಣ. ಅವರಿಗೆ ಈ ಮಸೂದೆ affect ಆಗುವುದಿಲ್ಲವೆಂದು ನಾನು ತೋರಿಸಿಕೊಡುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಹಾಗಾದರೆ ಪರ್ಮಿಸಿಬಲ್ ಹೋಲ್ಡಿಂಗ್ 50 ಎಕರೆಯೆಂದು ಮಾಡೋಣವೇ!

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದರಂತೆ ಅನುಸರಿಸುವುದಾದರೆ ಮಾಡಿ. ಅದಕ್ಕೆ ನಾನೂ ಒಪ್ಪುತ್ತೇನೆ.

I would like to bring it to the notice of this Hon'ble House, in 1951 when the Fallow Land Cultivation Bill was place before the House, Sri. T. Mariappa (then a Minister) had said: "Look here, we have got 17 lakhs of acres lying fallow in the hands of the hiduvalidars.—What a great pity, we have got somehow to see that that land would be brought under cultivation. So we want this Fallow Land Cultivation Bill to be passed."

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮುಳ್ಳು ಕಲ್ಲು ಇರುವ ಜಾಗಗಳನ್ನು ಕೊಟ್ಟರೆ ಯಾರೂ ಹೋಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗಿದ್ದಮೇಲೆ ಅದನ್ನೇಕೆ ಮಾಡಿದರು ? Why did you do so hastily. ಆ ಕಾಲದಲ್ಲಿ ಆ 17 ಲಕ್ಷ ಎಕರೆಗಳೂ ಸಾಗುವಳಿಗೆ ಬಂದರೆ ದೇಶದಲ್ಲಿ ಸುಭಿಕ್ಷವುಂಟಾಗುತ್ತದೆಂದು ಎಲ್ಲರಿಗೂ ಅನ್ನಿಸಿತು. ಆದರೆ ನಾನು ಅಂದೇ ಹೇಳಿದೆ, 'This is going to be a dead letter in the Statute Book.'

Therefore what I am going to say is, don't go hasty. This is going to be a waste. The previous proceedings of that Bill are nothing but a dead letter. We have added simply a piece of legislation to the statute book. It is lying there. I do not know whether the members who were the parties to that Bill are here today. And I would like to know from the Hon'ble Minister if it is possible to find out whether those 17 lakhs of land have been brought under cultivation in pursuance of that Bill ? No.

Sri Kadidal MANJAPPA.—I can say it with authority that a portion of the land has been brought under cultivation on account of that Act.

Sri H. M. CHANNABASAPPA.—If it is, I shall be much obliged if the Hon'ble Minister would place before this House either today or tomorrow or even a week hence, what amount of land has been brought under cultivation in pursuance of the Fallow Land Act. Otherwise that is a different thing.

Sri Kadidal MANJAPPA.—On account of the existence of that Act, people have brought the land under cultivation.

(*A MEMBER.—It is a very fine argument anyway.*)

Sri H. M. CHANNABASAPPA.—I know why that Bill was brought forward. Therefore you need not worry your elf about furnishing the information. Why I brought all these things to the notice of the Hon'ble Members is, whenever you want to make a piece of legislation, the need for it must be such that we should take serious notice and go ahead. I may tell for the information of the Hon'ble Minister that 17 lakhs acres of fallow land have been reimbursed again. How ? I will place figures before you. Today I can give you the figures. These are very interesting statistics.

In the year 1941-42 the net area under occupancy was 79·1 lakhs, that has risen to 86·04 lakhs in the year 1951-52. ಅಲ್ಲಿಗೆ 7 ಲಕ್ಷ ಎಕರೆಗಳಷ್ಟು ಜಮೀನು ಹಿಡುವಳಿ ಜಾಸ್ತಿಯಾಯಿತೆಂದು ಗೊತ್ತಾಗುತ್ತದೆ. ಹಿಡುವಳಿಗೆ ಬಂದ ಮಾತ್ರಕ್ಕೆ ಅಲ್ಲಿ ಬೆಳೆಯಾಯಿತೇ ? ಇಲ್ಲ. ಅಂದಮೇಲೆ ಇನ್ನೂ 7 ಲಕ್ಷ ಎಕರೆ ಹಿಡುವಳಿ ಬಂಜರಿಗೆ ಸೇರಿತು: ಇವೆಲ್ಲಾ ನಿಮ್ಮ ರಿಪೋರ್ಟಿನಲ್ಲೇ ಇದೆ. ಆದ್ದರಿಂದ ಇವೊತ್ತು 17 ಲಕ್ಷದ ಜೊತೆಗೆ ಇನ್ನೂ 7 ಲಕ್ಷ ಎಕರೆಗಳು ಬಂಜರಿಗೆ ಬಂದಿವೆಯೆಂಬುದು ವ್ಯಕ್ತವಾಗುತ್ತದೆ. I do not want to embarrass you more.

Sri Kadidal MANJAPPA.—I am not at all embarrassed. I am enjoying the speech of the Hon'ble Member.

Sri H. M. CHANNABASAPPA.—It is not a matter of enjoying the speech, but it is a matter for serious consideration and serious thought.

Sri Kadidal MANJAPPA.—I am enjoying the brilliant speech of the Hon'ble Member.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂತೂ, ಇದರಿಂದ ಒಂದು ವಿಷಯ ಗೊತ್ತಾಗುತ್ತದೆ. ಸಾಗುವಳಿಯಾಗಿ ಭೂಮಿಯಿಂದ ಬೆಳೆಯನ್ನು ತೆಗೆಯಿರತಕ್ಕ ಜಮೀನು ಹೆಚ್ಚಾಗಿದೆ. ಇದು ಸುಮಾರು 1 ಲಕ್ಷ ಎಕರೆ. ನೀವು ಮಾಡಿರುವ ಗ್ರೋಮೋರ್ ಫುಡ್ ಮುಂತಾದ ಎಲ್ಲಾ ಪ್ರಚಾರಗಳಿಗೆ ಖರ್ಚು ಮಾಡಿರುವ ಕೋಟಿ ಕೋಟಿ ರೂಪಾಯಿಗಳ ಫಲವಾಗಿ ಇದಿಷ್ಟಾಗಿದೆ. ಇದರ ಜೊತೆಗೆ ಹಿಡುವಳಿ ಬಂಜರು 1941-1942 ರಲ್ಲಿ 13 ಲಕ್ಷ 45,000 ಎಕರೆಗಳಿದ್ದದ್ದು 19 ಲಕ್ಷ 44,000 ಸಾವಿರಕ್ಕೆ ಹೋಯಿತು ; ಅಂದಮೇಲೆ ಇನ್ನೂ ಆರು ಲಕ್ಷ ಸೇರಿತು. So much so, I ask, is there land hunger in the State of Mysore ?

(*A MEMBER.—Yes.*)

ಶ್ರೀ ಎಚ್. ಎಂ. ಚನ್ನಬಸಪ್ಪ.—By whom ? By persons who want to cultivate ? ಆದ್ದರಿಂದ ಈ 19 ಲಕ್ಷ ಎಕರೆಗಳನ್ನು ಜಮೀನ್ದಾರರುಗಳು ತಮ್ಮ ಹತ್ತಿರ ಇಟ್ಟುಕೊಂಡು ತಾವೂ ವ್ಯವಸಾಯ ಮಾಡದೆ ಇತರರಿಗೂ ಕೊಡದೆ ಇರತಕ್ಕದು ನ್ಯಾಯವಲ್ಲ. ಆದಕಾರಣ ನಿಮ್ಮ ಮೊದಲನೆಯ attack ಎತ್ತ ಇರಬೇಕು ? ಈ 19 ಲಕ್ಷ ಎಕರೆಗಳ ಜಮೀನನ್ನು ತೆಗೆದುಕೊಂಡು ಯಾವ ರೀತಿ ವಿನಿಯೋಗ ಮಾಡಬೇಕೆಂಬುದು ಮೊದಲು ಆಗಬೇಕಾದದ್ದು. ಹಾಗಿಲ್ಲದೆ, ಈ 19 ಲಕ್ಷ ಎಕರೆಗಳನ್ನು ಹಾಗೆಯೇ ಬೀಳುಬಿಟ್ಟು ಅಚ್ಚುಕಟ್ಟು ಮಾಡಿರುವ ಜಮೀನನ್ನು, ಒಬ್ಬರು ವ್ಯವಸಾಯ ಮಾಡುತ್ತಿರುವುದನ್ನು ಕಿತ್ತುಕೊಳ್ಳುವುದು ಸರಿಯೇ, ನೀವೇ ಯೋಚನೆ ಮಾಡಿ. I am not making a speech just to induce you to appreciate my arguments. These are all facts which are borne out by your own figures.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ),—ಯಾರೂ ಸಾಗುವಳಿ ಮಾಡದಿರುವ ಜಮೀನನ್ನು ಕಿತ್ತುಕೊಳ್ಳುವುದು ಈ ಮಸೂದೆಯ ಉದ್ದೇಶವಲ್ಲ; ರೈತರು ಮಾಡುತ್ತಿರುವುದನ್ನು ಬಿಡಿಸಿಕೊಳ್ಳುವುದು ಅಷ್ಟೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವಾಗ ? ದೇಶದ ಎಲ್ಲಾ ಭಾಗಗಳಲ್ಲೂ ಇರುವ ಜಮೀನುಗಳು ವಿಲೆ ಯಾಗಿ, ಇನ್ನೆಲ್ಲೂ ಜನಗಳಿಗೆ ಉತ್ಕೃಷ್ಟವಾದ ಜಮೀನೇ ಇಲ್ಲವೆಂದು ಹೇಳುವಾಗ, ಒಬ್ಬರು ಹೆಚ್ಚಾಗಿ ಜಮೀನುಗಳನ್ನಿಟ್ಟುಕೊಂಡು ಇನ್ನೊಬ್ಬರಿಗೆ ಇಲ್ಲದಿರುವುದು ಸರಿಯಲ್ಲ. ಈಗ, ನಾನಾಗಲೇ ಹೇಳಿದಂತೆ, 19 ಲಕ್ಷದ 44 ಸಾವಿರದ ಜೊತೆಗೆ 8 ಲಕ್ಷದ 84 ಸಾವಿರ ಅಂದರೆ ಒಟ್ಟು 27 ಲಕ್ಷ ಎಕರೆಗಳಷ್ಟು ಜಮೀನು ಯಾರಿಗೂ ಪ್ರಯೋಜನ ಕೊಡದೆ ಪಾಳು ಬಿದ್ದಿದೆ. ಅದನ್ನು ಸರ್ಕಾರಕ್ಕಾದರೂ ಕೊಡಲಿ, ಇಲ್ಲದಿದ್ದರೆ Fallow Land Cultivation Act ಪ್ರಕಾರವಾದರೂ ಈ ಜಮೀನುಗಳನ್ನು ತೆಗೆದುಕೊಂಡು ಜಮೀನಿಲ್ಲದವರಿಗೆ ಹಂಚಿ, ಅವರಿಗೆ ಅವಶ್ಯಕವಾದ ಬಂಡವಾಳವನ್ನು ಕೊಡುವುದಕ್ಕೆ ಏರ್ಪಾಡು ಮಾಡಿ. ಹತ್ತಾರು ವರ್ಷಗಳಲ್ಲಿ ಸುಲಭ ರೀತಿಯಲ್ಲಿ ಈ ಸಾಲವನ್ನು ವಾಪಸು ತೆಗೆದುಕೊಳ್ಳುವ ಸೌಲಭ್ಯವನ್ನುಂಟುಮಾಡಿಕೊಡಿ. ಹೀಗೆಲ್ಲಾ ಮಾಡಿದಮೇಲೆ ಇನ್ನೂ ಪೂರಾ ಜನಗಳಿಗೆ ಜಮೀನಿಲ್ಲದೆ ಹೋದ ಪಕ್ಷಕ್ಕೆ ವಾಸ್ತವವಾಗಿ ಯಾರದೇ ಆ ಜಮೀನಾಗಿರಲಿ, ಶ್ರೀಮಾನ್ ಮಂಜಪ್ಪನವರದೇ ಆಗಿರಲಿ ಅದನ್ನೂ ತೆಗೆದುಕೊಳ್ಳಿ.

4 P.M.

ಈಗ ನಾನು ಹೇಳತಕ್ಕದ್ದು ಬಹಳ ಮುಖ್ಯವಾದ ಪ್ರಶ್ನೆ. ಇದನ್ನು ನೀವು ಸಾಧನೆ ಮಾಡಿ ಎಂದು ಹೇಳುವುದಕ್ಕೆ ಅನುಕೂಲವಾಗಿರತಕ್ಕಂಥ ಸಲಹೆಗಳನ್ನು ಕೊಡುತ್ತಿದ್ದೇನೆ. ತಾವು ಈಗ ಈ ಬಿಲ್ಲನ್ನು ತಂದಿರತಕ್ಕ ರೀತಿಯಲ್ಲೇ ಇದನ್ನು ಪಾಸ್‌ಮಾಡಿಬಿಟ್ಟರೆ ಮುಂದೆ ಏನೇನು ತೊಂದರೆಗಳಾಗಬಹುದೆಂಬುದನ್ನು ಯೋಚಿಸಿ ಅದರ ಮೇಲೆ ನಾನು ಈ ವಿಷಯಗಳನ್ನು ಪ್ರಸ್ತಾಪಮಾಡುತ್ತಿದ್ದೇನೆ. ಆದರೆ ನಾನಿನ್ನೂ ಈ ಬಿಲ್ಲಿನ ಕ್ಲಾಜ್ ಬೈ ಕ್ಲಾಜ್ ಮೇಲೆ ಮಾತನಾಡತಕ್ಕ ಮಟ್ಟಕ್ಕೆ ಬಂದಿಲ್ಲ. ಆದರೆ ನಮ್ಮ ಹಾಸನ ಜಿಲ್ಲೆಯಿಂದ ಬಂದಿರತಕ್ಕಂಥ ಮಾನ್ಯ ಸದಸ್ಯರು ಅಲ್ಲಿ ಏನೋ ಒಂದು ದೊಡ್ಡ ಪ್ರಳಯವೇ ಆಗಿ ಹೋಗಿದೆಯೇನೋ ಎನ್ನುವ ರೀತಿಯಲ್ಲಿ ಹೇಳುತ್ತಿದ್ದಾರೆ. ಆದರೆ ಹಾಸನದಲ್ಲಿ ಅಂಥ ಸಮಸ್ಯೆಯೇನೂ ಬಂದಿಲ್ಲ. ನಾನು ಹೇಳತಕ್ಕದ್ದು ಆ ರೈತರಿಗೆ ಒಳ್ಳೆಯದಾಗಬಾರದು ಎಂದು ಖಂಡಿತ ಅಲ್ಲ. ಆದರೆ ಈಗ ತಾವು ಹೇಳತಕ್ಕ ರೀತಿಯಲ್ಲಿ ಅವರ ಸ್ಥಿತಿಗತಿಗಳೇನೂ ಉತ್ತಮವಾಗುವುದಿಲ್ಲ. ಅವರನ್ನು ಉತ್ತಮಪಡಿಸಬೇಕಾಗಿದ್ದರೆ ಏನೇನು ಮಾರ್ಗಗಳನ್ನು ಹಾಕಬೇಕು, ಅವರಿಗೆ ಏನೇನು ಸೌಲಭ್ಯಗಳನ್ನು ಇದರ ಜೊತೆಗೆ ಒದಗಿಸಿಕೊಡಬೇಕು ಎಂಬುದನ್ನೆಲ್ಲಾ ಸಿದ್ಧಪಡಿಸದೆ ತಾವು ಹೀಗೆಲ್ಲಾ ಬರಿ ಒಂದು ಸ್ಲೋಗನ್ ಹೇಳುತ್ತ ಉತ್ತಮಪಡಿಸುತ್ತೇವೆಂದು ಹೇಳುತ್ತಿರುವುದರಿಂದ ಮುಂದೆ ದೇಶದಲ್ಲಿ ಇದೆಲ್ಲವೂ ಒಂದು ದೊಡ್ಡ ಕಳವಳಕ್ಕೆ ದಾರಿಯಾಗುತ್ತದೆಯೇ ವಿನಾ ಅವರ ಸ್ಥಿತಿಗತಿಗಳೇನೂ ಉತ್ತಮಗೊಳ್ಳಲಾರವೆಂದು ನನ್ನ ಅಭಿಪ್ರಾಯ.

ಶ್ರೀ ಎಂ. ಚಿಕ್ಕಲಿಂಗಯ್ಯ ಮಳವಳ್ಳಿ—ಅನುಸೂಚಿತ ಜಾತಿಗಳು).—ಈಗ ಮಾತನಾಡತಕ್ಕ ಮಾನ್ಯ ಸದಸ್ಯರು ಸರ್ಕಾರಿ ವೇಸ್ಟ್ ಲ್ಯಾಂಡ್ ವಿಚಾರ ಇತ್ಯಾದಿ ಏನೇನನ್ನೊ ಮಾತನಾಡುತ್ತಿದ್ದಾರೆ. ಈಗ ನಮ್ಮ ಮುಂದಿರಕ್ಕ ಬಿಲ್ಲು ಗೇಣೀದಾರರಿಗೆ ಸಂಬಂಧಪಟ್ಟಿದ್ದು. ಈ ಮಸೂದೆಗೂ ಆ ಸರ್ಕಾರಿ ಫ್ಯಾಲೋ ಲ್ಯಾಂಡಿಗೂ ಮತ್ತು ಸರ್ಕಾರಿ ವೇಸ್ಟ್ ಲ್ಯಾಂಡಿಗೂ ಏನು ಸಂಬಂಧವಿದೆ?

Sri H. M. CHANNABASAPPA.—The Hon'ble Member who has just now returned, has not been able to follow the trend of my argument.

ನಾನು ಹೇಳತಕ್ಕದ್ದು ಈ ಬಿಲ್ಲು ಈಗ ಯಾವ ರೂಪದಲ್ಲಿ ಇದೆಯೋ ಅದೇ ರೂಪದಲ್ಲಿ ಇದು ಕಾನೂನಾಗಿ ಜಾರಿಗೆ ಬಂದರೆ ಆ ಗೇಣಿದಾರನಿಗೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲವೆಂಬುದನ್ನು ಸಕಾರಣವಾಗಿ ತೋರಿಸಿಕೊಟ್ಟಿದ್ದೇನೆ.

ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಈಗ ಈ ಮಸೂದೆಯಲ್ಲಿ ಅಡಕ ಮಾಡಿರತಕ್ಕಂಥ ಪರ್ಮಿಸಿಬಲ್ ಹೋಲ್ಡಿಂಗ್ಸ್‌ನ್ನು ನಿಲ್ಲಿಸಿಬಿಟ್ಟು—ಇದಕ್ಕೇ ಒಂದು ಪ್ರತ್ಯೇಕವಾದಂಥ ಬಿಲ್ಲನ್ನು ತಯಾರಿಸಿ ತರಬೇಕೆಂದು ತಾವು ಹೇಳುತ್ತೀರೋ. . .

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ನಾನು ಹೇಳುತ್ತಿರುವುದರಲ್ಲಿ ಅಂಥ ಹೊಸ ವಿಚಾರ ಯಾವುದೂ ಇಲ್ಲ. ನಾನೀಗ ಯಾವುದನ್ನೂ ಇನ್‌ವೆಂಟ್ ಮಾಡಿ ಹೇಳಲಿಲ್ಲ. ಬೇರೆ ದೇಶಗಳಲ್ಲಿ ಯಾವ ಯಾವ ರೀತಿಯಾಗಿ ಈ ಬಿಲ್ಲಿನ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿರುತ್ತಾರೋ ಅದೇ ರೀತಿಯಾಗಿ ನಮ್ಮ ದೇಶದಲ್ಲೂ ನಾವೀ ಕಾನೂನನ್ನು ತರಬೇಕಾಗಿಲ್ಲ, ನಮ್ಮ ದೇಶಕ್ಕೆ ಅನುಕೂಲವಾಗುವಂತೆ ಮಾತ್ರ ಇದನ್ನು ತರಬೇಕೆಂದು ನಾನು ತಿಳಿಸುತ್ತಿದ್ದೇನೆ. ಅಷ್ಟೇ ಹೊರತು ನಾನೇನೂ ಈ ವಿಚಾರವನ್ನು ಸ್ವಯಂ ಕಲ್ಪನೆ ಮಾಡಿಕೊಂಡು ಹೇಳುತ್ತಿಲ್ಲ. ಇಡೀ ಭರತ ಖಂಡದಾದ್ಯಂತವೂ ಯಾವ ಯಾವ ರೀತಿಯಲ್ಲಿ ಈ ಕಾನೂನು ಕೆಲಸ ಮಾಡಿದೆ, ಇದರಿಂದ ಅಲ್ಲೆಲ್ಲಾ ಏನೇನು ಪರಿಣಾಮಗಳುಂಟಾಗಿವೆ ಅನ್ನುವುದನ್ನು ನಾವು ಗಮನಕ್ಕೆ ತೆಗೆದುಕೊಂಡು ಇದನ್ನು ವಿಮರ್ಶೆ ಮಾಡುವುದು ಅತ್ಯಾವಶ್ಯಕ.

This is the Report of the Agrarian Reforms Committee of Hyderabad. I want the Hon'ble Members interested to go through some of the provisions here.

ಶ್ರೀ ಕಡಿದಾಳ್ ಮಂಜಪ್ಪ.—ಈಗ ತಾವು ಹೇಳುತ್ತಿರುವಂಥ ಅಂಕಿ ಅಂಶಗಳೆಲ್ಲಾ ಯಾವ ವರ್ಷದ್ದು ?

ಶ್ರೀ ಎಚ್ ಎಂ. ಚನ್ನಬಸಪ್ಪ.—1949ರದು.

ಶ್ರೀ ಕಡಿದಾಳ್ ಮಂಜಪ್ಪ.—ಅದರಮೇಲೆ ಹೋಗಿ ಈಗ ಬೇರೆ ಪ್ರತ್ಯೇಕವಾದಂಥ ಒಂದು ಬಿಲ್ಲೇ ಪಾಸಾಗಿ ಈಗ ತಾವು ಹೇಳುತ್ತಿರುವಂಥಾದ್ದನ್ನೆಲ್ಲಾ ಪೂರ್ತಿಯಾಗಿ ಬದಲಾವಣೆ ಮಾಡಲಾಗಿದೆ.

Sri H. M. CHANNABASAPPA.—I am only placing facts before you. You can take it for what it is worth. ಈಗ ಆ ಅಗ್ರೇರಿಯನ್ ರಿಫಾರಂಸ್‌ಗಳನ್ನು ಹೈದರಾಬಾದಿನಲ್ಲಿ ಜಾರಿಗೆ ಕೊಟ್ಟಮೇಲೆ ಅವುಗಳಿಂದ ಅಲ್ಲಿ ಏನೇನೂ ಪ್ರಯೋಜನವಾಗಲಿಲ್ಲ, ರೈತರಿಗೆ ಯಾವ ರೀತಿಯಲ್ಲೂ ಸಹಾಯವಾಗಲಿಲ್ಲ ಎನ್ನತಕ್ಕಂಥಾದ್ದು ಈಗ ಕಂಡುಬಂತು. ಅದರಮೇಲೆ ಪುನಃ ಕೆಲವು ಬದಲಾವಣೆಗಳನ್ನು ಮಾಡಿ ಜಾರಿಗೆ ಕೊಟ್ಟರು. ಆದಾಗ್ಯೂ ಕೊನೆಗೆ ಅವರು ಮಷಾರ್ಖೈರಿನ ತಮ್ಮ ವರದಿಯ ಕೊನೆಯಲ್ಲಿ ಈ ಒಂದು ವಾಕ್ಯವನ್ನು ಹೇಳಿದ್ದಾರೆ. "The results are most disappointing." ಇದನ್ನೆಲ್ಲಾ ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ. . .

(SRI H. M. CHANNABASAPPA.)

(*Interruption from Sri Kadidal Manjappa*).

I am only drawing the attention of the Honourable Members including you to put your energy in the right direction.

ನಾನು ಹೇಳತಕ್ಕಂಥಾದ್ದು ಈ ಬಿಲ್ಲನ್ನು ತಾವು ಇಷ್ಟು ಆತುರ ಆತುರವಾಗಿ-ಇದನ್ನು ಜಾರಿಗೆ ಕೊಟ್ಟು ಇನ್ನೂ ಆರುತಿಂಗಳು ಮುಗಿಯುವುದಕ್ಕೆ ಮುಂಚೆಯೇ, ನಾವು ಮೊದಲು ನಿಗದಿ ಮಾಡಿದ್ದಂಥ ಆ ಐದು ವರ್ಷಗಳ ಅವಧಿ ಮುಗಿಯುವುದಕ್ಕಿಂತಲೂ ಮುಂಚಿತವಾಗಿಯೇ, ಈಗ ಈ ಅವಧಿಯನ್ನ ಹತ್ತು ವರ್ಷಗಳಿಗೆ ಹೆಚ್ಚಿಸಬೇಕೆಂದು ಈ ತಿದ್ದುಪಡಿಯನ್ನು ಇಷ್ಟು ಆತುರದಿಂದ ತಂದಿರತಕ್ಕದ್ದು ಅಷ್ಟು ನ್ಯಾಯಸಮ್ಮತವಾಗಿರುತ್ತೆಂದು ನನ್ನ ಮನಸ್ಸಿಗಂತೂ ಹೊಳೆಯುವುದಿಲ್ಲವೆಂಬುದನ್ನು ನಾನು ತಮ್ಮಲ್ಲಿ ಬಹಳ ವಿನಯದಿಂದ ಹೇಳುತ್ತೇನೆ. ಆದರೆ "ನಾವು 26 ಜನರ ಒಂದು ಸಮಿತಿಯನ್ನು ಏರ್ಪಾಡು ಮಾಡಿ ಇಡೀ ನಮ್ಮ ದೇಶದ ಭೂಸ್ವಾಮ್ಯದ ಸಮಸ್ಯೆಯನ್ನು ಪರಿಶೀಲಿಸಿ ಆ ಬಗ್ಗೆ ಸರ್ಕಾರಕ್ಕೆಂದು ಶಿಫಾರ್ಸನ್ನು ಒಪ್ಪಿಸಬೇಕೆಂದು ಮಾಡಿದ್ದೆವು. ಆ ಬಗ್ಗೆ ಆ ಸಮಿತಿಯವರು ಹೀಗೆ ತಿಳಿಸಿದ್ದಾರೆ" ಎಂದು ಹೇಳಿದ್ದಾರೆ. ಆದರೆ ನಮ್ಮ ದೇಶದಲ್ಲಿ ಈ ಸಮಸ್ಯೆ ಅಷ್ಟು ಬಹಳವಾಗಿಲ್ಲ, ಅಷ್ಟು ಹೆಚ್ಚಾಗೇನೂ ಇರುವುದಿಲ್ಲ. ಆ ಶಿವಮೊಗ್ಗ ಗೇಣೀದಾರರ ಸಂಘಕ್ಕೆ ಈ ಹಿಂದೆ ನಮ್ಮ ಮಾನ್ಯ ಈಗಿನ ಅಧ್ಯಕ್ಷರೇ ಅಧ್ಯಕ್ಷರಾಗಿದ್ದರು. ಆಗ ಅವರು ಈ ಸಂಬಂಧವಾಗಿ ಅನೇಕ ವಿಷಯಗಳನ್ನು ಹೇಳಿದ್ದಾರೆ, ಆದರೆ ಆಗ ಅವರು ಏನು ಹೇಳಿದ್ದಾರೋ ಆ ವಿಷಯಗಳನ್ನೇ ಅಥವಾ ಅಷ್ಟೇ ವಿಷಯಗಳನ್ನೇ ಗಮನಕ್ಕೆ ತೆಗೆದುಕೊಂಡು ಈ ಟೆನೆನ್ಸಿ ಬಿಲ್ಲನ್ನು ಜಾರಿಗೆ ತರಲು ಪ್ರಯತ್ನ ಮಾಡಿದರೆ ಸಾಲದು. ತಾವು ಈಗ ಏನೊಂದು ಕಾನೂನನ್ನು ತಯಾರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರೋ ಇದು ಆ ಜಮೀನ್ದಾರ ಮತ್ತು ರೈತ ಈ ಉಭಯತಾಪಿಗಳಿಗೂ ಒಂದು ವಿರಸಬಾರದಂತೆ ಇರುವ ಹಾಗೆ ತಾವು ತಯಾರು ಮಾಡಬೇಕು. ಆದರೆ ನಾವು ಈ ವಿಷಯಗಳನ್ನೆಲ್ಲಾ ಚರ್ಚೆಮಾಡಿ ಇವುಗಳನ್ನು 1952ರಲ್ಲೇ ತೀರ್ಮಾನಮಾಡಿ ಇವುಗಳನ್ನು 1952ನೇ ಜನವರಿಯಿಂದಲೇ ಜಾರಿಗೆ ತರುವ ಹಾಗೆ ಮಾಡಿದ್ದೆವು. ಈಗ ತಾವು ತಂದಿರತಕ್ಕಂಥ ಮಸೂದೆಯಲ್ಲಿರತಕ್ಕಂಥ ಕೆಲವು ವಿಷಯಗಳನ್ನು ಈಗ ವಿಮರ್ಶೆ ಮಾಡಿನೋಡೋಣ.

Fixing of fair rent; fixity of tenure. ಈ ಎರಡು ವಿಷಯಗಳು ಮಾತ್ರ. ಒಂದು ಫೇರ್ ರೆಂಟನ್ನು ಫಿಕ್ಸ್ ಮಾಡುವುದು. ಅದನ್ನು ಮಾಡಬೇಕು. ಇನ್ನು ಎರಡನೆಯದು ಫಿಕ್ಸಿಟಿ ಆಫ್ ಟೆನ್ಯೂರ್. ಅಂದರೆ ಯಾರು ಉಳುಮೆ ಮಾಡುತ್ತಾನೋ ಆತನನ್ನೇ ಭೂಮಿಗೆ ಒಡೆಯನನ್ನಾಗಿ ಮಾಡತಕ್ಕಂಥ ವಾತಾವರಣವನ್ನುಂಟುಮಾಡುವುದು. ಇದನ್ನು ಮಾಡಬೇಕು. ಇಲ್ಲಿ ಫೇರ್ ರೆಂಟನ್ನು ಫಿಕ್ಸ್ ಮಾಡುವುದರಲ್ಲಿ ಶೇಕಡ 50 ಕ್ಕಿಂತ ಮೀರದಷ್ಟು ಫೇರ್ ರೆಂಟನ್ನು ಫಿಕ್ಸ್ ಮಾಡಬೇಕೆಂದು ಹೇಳಿದ್ದಾರೆ. ಆದರೆ ಅಂಥ ಭೂಮಿಯಲ್ಲಿ ಯಾವ ಯಾವ ಬೆಳೆಯನ್ನ ಅವರು ಬೆಳೆಯಬೇಕೆಂಬ ವಿಚಾರವನ್ನು ಅದರಲ್ಲಿ ತಿಳಿಸಿಲ್ಲ. ಆದರೆ ಆ ಭೂಮಿಯ ಫೇರ್ ರೆಂಟನ್ನು ನಿರ್ಧರಿಸತಕ್ಕ ಕಾಲದಲ್ಲಿ ಈ ಅಂಶವನ್ನು ನಾವು ಗಣನೆಗೆ ತೆಗೆದುಕೊಳ್ಳಲೇಬೇಕು. ಹೀಗೆ ಒಂದು ವಿಚಾರವನ್ನು ಮೊಕರೂರ್ ಮಾಡುವಾಗ ಈ ರೀತಿ ನಾನಾ ಅಂಶಗಳನ್ನ ನಾವು ಪರಿಶೀಲನೆ ಮಾಡಬೇಕಾಗಿರುತ್ತದೆ. ಆದರೆ ನಮ್ಮ ಈಗಿನ ಮಾನ್ಯ ಮಂತ್ರಿಗಳು ಈ ಹಿಂದೆ ಶಿವಮೊಗ್ಗಾ ಜಿಲ್ಲೆಯ ಗೇಣಿದಾರರ ಬಗ್ಗೆ ಏನೊಂದು ಹೇಳಿಕೆ ಕೊಟ್ಟಿದ್ದಾರೋ ಅದನ್ನು ತೆಗೆದುಕೊಂಡು ನೋಡಿದರೆ ಆ ಶಿವಮೊಗ್ಗಾ ಜಿಲ್ಲೆಯಲ್ಲಿ 1/3 ಭಾಗಕ್ಕಿಂತಲೂ ಹೆಚ್ಚಾಗಿ ಈ ಗೇಣಿ ಇರುವುದಿಲ್ಲವೆಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. While speaking on the Tenancy Bill in this Hon'ble House on the 5th November 1951 Sri Kadidal Manjappa said:

"ನಮ್ಮ ಕಡೆ ಶಿವಪ್ಪನಾಯಕರ ಶಿಸ್ತು ಎಂಬುದು ಬಹಳ ಕಾಲದಿಂದಲೂ ಜಾರಿಯಲ್ಲಿ ಬಂದಿರುತ್ತದೆ. ಅದರ ಪ್ರಕಾರ ಮೂರನೆಯ ಒಂದು ಭಾಗದ ಉತ್ಪತ್ತಿ ಜಮೀನ್ದಾರನಿಗೂ, ಮೂರನೆಯ ಒಂದು ಭಾಗದ ಉತ್ಪತ್ತಿ ವ್ಯವಸಾಯದ ಖರ್ಚಿಗೂ, ಇನ್ನುಳಿದ ಮೂರನೆಯ ಒಂದು ಭಾಗದ ಉತ್ಪತ್ತಿ ರೈತನಿಗೂ ಸೇರಬೇಕೆಂದಿದೆ. ಇದೇ ಶಿವಪ್ಪನಾಯಕರ ಶಿಸ್ತು" ಎಂದು ಅವರು ಹೇಳಿದ್ದಾರೆ. ಈಗಲೂ ಕೂಡ ಆ ಶಿವಮೊಗ್ಗ ಜಿಲ್ಲೆಯಲ್ಲಿ ಈ ಗೇಣಿಯು ಪರಮಾವಧಿ ಮೂರನೆ ಒಂದು ಭಾಗಕ್ಕಿಂತಲೂ ಜಾಸ್ತಿಯಾಗಿಲ್ಲ. ಆದರೆ ಈ ಟೆನೆನ್ಸಿ ಪ್ರಾಬ್ಲಂ ಆ ಜಿಲ್ಲೆಯಲ್ಲೇ ಇಡೀ ಸಂಸ್ಥಾನದ ಇತರ ಭಾಗಗಳಿಗಿಂತಲೂ ಜಾಸ್ತಿ ಇದೆ. ಅಲ್ಲ ಈ ಟೆನೆನ್ಸಿ ಪ್ರಾಬ್ಲಂ ಶೇಕಡ 25 ರಷ್ಟು ಇದೆ. ಆದಾಗ್ಯೂ ಅಲ್ಲಿ ಗೇಣಿ ಕೊಡತಕ್ಕದ್ದು ಮೂರನೆ ಒಂದು ಭಾಗ ಮಾತ್ರ. ಹೀಗೆ ಒಂದು ರೀತಿಯಾಗಿ ನಡೆದುಕೊಂಡು ಹೋಗುತ್ತಿರುವಾಗ ನಾವಾಗೇ ಏತಕ್ಕೆ ಈಗ ಉತ್ಪತ್ತಿಯ ಶೇಕಢ 50 ರಷ್ಟನ್ನು ತೆಗೆದುಕೊಳ್ಳಬೇಕು ಎಂದು ಕೇಳುತ್ತೇನೆ? ಈಗ ನಾವು ಈ ರೀತಿಯಾಗಿ ಶೇಕಡ 50 ರಷ್ಟನ್ನು ತೆಗೆದುಕೊಳ್ಳಬೇಕೆಂದು ಹೇಳಿರುವಾಗ ಆ ಸುಮ್ಮನೆ ಇದ್ದಂಥ ಜಮೀನ್ದಾರನಿಗೆ 50 ರಷ್ಟು ಉತ್ಪತ್ತಿಯನ್ನು ನೀನು ತೆಗೆದುಕೊಳ್ಳಬಹುದು ಎಂದು ಆತನಿಗೆ ಒಂದು ಅಧಿಕಾರವನ್ನು ಆತನು ಕೇಳದೆ ಇದ್ದಾಗ್ಯೂ ನಾವೇ ಕೊಡುತ್ತಿದ್ದೇವೆ. ಹೀಗೇತಕ್ಕೆ ಮಾಡಬೇಕು?

Sri Kadidal MANJAPPA.—It is a wrong interpretation.

Sri L. SIDDAPPA (Chennagiri).—Is that a fair interpretation of the Clause?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೀಗೆ ತಾವಾಗೇ 50 ರಷ್ಟು ಗೇಣಿ ತೆಗೆದುಕೊಳ್ಳಬಹುದೆಂದು ಆತನಿಗೊಂದು ಅಧಿಕಾರಕೊಟ್ಟರೆ ಆತನು ಏಕೆ ಸುಮ್ಮನಿರುತ್ತಾನೆ?

Mr. SPEAKER.—In no case it should exceed the rent then fixed.

Sri H. M. CHANNABASAPPA.—Nothing prevents the Zamindar to take less, but it has authorised the Zamindar to take 50 per cent of the profit.

Sri Kadidal MANJAPPA.—Shall I explain? Under the provisions of the Mysore Tenancy Act, 1952, the rent shall be payable according to the agreement, if any. In the absence of usage or custom or an agreement, the reasonable rent to be fixed by the Amildar or

the rent stipulated by the agreement or the rent in vogue according to the local custom should not exceed one-fourth. There is another clause. If there are favourable clauses in the agreement entered into between the parties, those clauses will not be affected on account of the provisions of the Tenancy Act.

Sri H. M. CHANNABASAPPA.—I quite see the point.

Sri Kadidal MANJAPPA.—In Malnad, under the powers vested in Government, they have fixed the maximum rent at one-third of the total produce.

Sri H. M. CHANNABASAPPA.—I am glad to know that in Shimoga District the Governmment have reduced it to one-third. If you had not done it, the Act would not have conferred any benefit.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲಿ ಈ ಫೇರ್ ರೆಂಟ್ ಶೇಕಡ 50 ರಷ್ಟಿರಬಹುದೆಂದು ಹೇಳಲಾಗಿದೆ. ಆದರೆ ಈ ಸಂಬಂಧದಲ್ಲಿ ಮುಖ್ಯ ಬೆಳೆಯಾವುದು ಸಬ್ಸಿಡಿ ಕ್ರಾಪ್ ಯಾವುದು ಎಂಬುದನ್ನು ನಿರ್ಧರ ಮಾಡಿಲ್ಲ. ಹೀಗೆ ಇದು ನಿರ್ಧರವಾಗದಿರುವುದರಿಂದ ತಕರಾರುಗಳು ಬಂದಾಗ ಅದರ ತೀರ್ಮಾನಕ್ಕಾಗಿ ಅಮಲ್ದಾರರೂ ಸಬ್‌ಡಿವಿಜನ್ ಅಧಿಕಾರಿಗಳೂ ಪುನಃ ಸ್ಥಳಕ್ಕೆ ಬರಬೇಕಾಗುತ್ತದೆ. ಇವೆಲ್ಲಾ ಬಹಳ ಕಷ್ಟದ ಪರಿಸ್ಥಿತಿಯನ್ನು ರೈತನಿಗೆ ಉಂಟುಮಾಡತಕ್ಕಂಥ ಸನ್ನಿವೇಶಗಳಾಗಿವೆ. ನಾವು ಯಾವ ಕಾನೂನುಗಳನ್ನೇ ಮಾಡಲಿ ಅವು ರೈತನಿಗೆ ಸುಲಭವಾಗಿ ಅರ್ಥವಾಗುವಂತೆ ಇರಬೇಕು. ಆದರೆ ಈಗ ಈ ಟೆನೆನ್ಸಿ ಬಿಲ್ಲಿನಲ್ಲಿ ಈ ಪರ್ಮನೆಂಟ್ ಟೆನೆಂಟ್ಸ್ ಎಂದರೇನು, ಈ ಟೆನೆಂಟ್ಸ್-ಅಟ್-ವಿಲ್-ಎಂದರೇನು, ಅನ್ನುವುದು ನಮಗೇ ಚೆನ್ನಾಗಿ ಅರ್ಥವಾಗಿಲ್ಲ. ನಾವಿನ್ನೂ ಇದರ ಅರ್ಥವನ್ನು ತಿಳಿದುಕೊಳ್ಳಬೇಕಾಗಿದೆ. ಇಷ್ಟೇ ಅಲ್ಲದೆ ಈ ಮಸೂದೆಯಲ್ಲಿ ನಾವಿನ್ನೂ ತಿಳಿದುಕೊಳ್ಳಬೇಕಾದ ವಿಚಾರ ಬಹಳವಾಗಿದೆ. ಇದರಲ್ಲಿ ಯಾರಿಗೆ ಪ್ರೊಟೆಕ್‌ಟೆಡ್ ಟೆನೆಂಟ್ಸ್ ಎಂದು ಹೇಳಿದ್ದಾರೆ, ಯಾರು ಅನ್ ಪ್ರೊಟೆಕ್‌ಟೆಡ್ ಟೆನೆಂಟ್ಸ್‌ಗಳು ಎಂಬುದನ್ನೆಲ್ಲಾ ನಾವಿನ್ನೂ ಅರ್ಥಮಾಡಿಕೊಳ್ಳಬೇಕು. ನಮಗೇ ಇಂಥ ಕಷ್ಟವಾಗಿರತಕ್ಕಂಥ ಮಸೂದೆಗಳು ಆ ರೈತರಿಗೆ ಇನ್ನೆಷ್ಟು ಕಷ್ಟವಾಗಿರುತ್ತವೆಂಬುದನ್ನು ಹೇಳತಕ್ಕದ್ದೇ ಅನವಶ್ಯಕ. ಅವರ ಜಮೀನಿನಲ್ಲಿ ಬೆಳೆಯಬೇಕಾದ 'Main crop' ಯಾವುದು, ಯಾವುದನ್ನು ಬೆಳೆದರೆ ಅದು 'Main crop' ಆಗುವುದಿಲ್ಲ ಎಂಬ ಇತ್ಯರ್ಥಕ್ಕೆ ರೈತನು ಕೋರ್ಟಿಗೆ ಅಲೆಯಬೇಕಾಗುತ್ತದೆ. ಈ ಮಸೂದೆಯಲ್ಲಿ ಇಂಥ ಸಂದೇಹಗಳು ಬಹಳವಾಗಿರುವುದರಿಂದ ರೈತನಿಗೆ ಇದರಿಂದ ತುಂಬ ಕಷ್ಟಗಳಾಗುತ್ತವೆ.

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ತಮ್ಮ ಸಲಹೆಯೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆದುದರಿಂದಲೇ ನಾನು ಈಗ ಈ ಸಲಹೆಗಳನ್ನೆಲ್ಲಾ ಮಾಡುತ್ತಿರುವುದು. ಇದಕ್ಕೆಲ್ಲಾ ನನ್ನ ಒಂದೇ ಒಂದು ಸಲಹೆಯೇನೆಂದರೆ ನೀವೀಗ ಈ ಮಸೂದೆಯನ್ನು ವಾಪಸ್ಸು ತೆಗೆದುಕೊಂಡು ಇದರಲ್ಲಿ ನಾನೀಗ ಹೇಳಿದಂತೆ ಸೂಕ್ತ ಬದಲಾವಣೆಗಳನ್ನು ಮಾಡಿ ಅನಂತರ ಇದನ್ನು ಜಾರಿಗೆ ತರುವುದಾದರೆ ಏನೂ ಅಷ್ಟಾಗಿ ತೊಂದರೆಗಳಿರಲಾರವೆಂದು ಅಭಿಪ್ರಾಯಪಡುತ್ತೇನೆ. ತಾವು ಮಾಡತಕ್ಕ ಕಾನೂನು ಸುಲಭವಾಗಿ ಜಾರಿಗೆ ಕೊಡುವ ಹಾಗಿರಬೇಕು. ಅದಕ್ಕಾಗಿ ಇದರಲ್ಲಿ ಏನೇನು ಬದಲಾವಣೆಗಳನ್ನು ಮಾಡಬೇಕೋ ಅದೆಲ್ಲವನ್ನೂ ತಿಳಿಸಿದ್ದೇನೆ. ಹಾಗೆ ಇದು ಬದಲಾವಣೆಯಾಗಬೇಕು. ಹಾಗಿಲ್ಲದೆ ತಾವು ಸುಮ್ಮನೆ ಆ ಬೊಂಬಾಯಿ ಆಕ್ಟಿನಲ್ಲಿ ಹಾಗಿದೆ, ಆದ್ದರಿಂದ ನಾವೂ ಸಹ ಹಾಗೆ ಬದಲಾವಣೆಗಳನ್ನು ಮಾಡೋಣ ಅನ್ನುವುದು ಸರಿಯಲ್ಲ. ತಾವು ಮಾಡತಕ್ಕಂಥ ಕಾನೂನು ನಮ್ಮ ಪರಿಸ್ಥಿತಿಗೆ, ನಮ್ಮ ದೇಶಕ್ಕೆ, ನಮ್ಮ ಜನರಿಗೆ ತಕ್ಕಂತೆ ತೊಂದರೆ ಕೊಡದಂತಹ ರೀತಿಯಲ್ಲಿರಬೇಕು.

ಐದು ವರ್ಷದಿಂದ ಹತ್ತು ವರ್ಷ ಮಾಡಬೇಕೆಂದಿದೆ. ಹಿಂದಿನ ಕಾನೂನಿನ ಪ್ರಕಾರ ಐದು ವರ್ಷಕ್ಕೆ ಎಂದು ತಿಳಿದುಕೊಂಡಿರುತ್ತಾನೆ. ಜನವರಿ ಒಂದನೆಯ ತಾರೀಖು ಐದು ವರ್ಷದ ಪತ್ರ ಬರೆಸುತ್ತಾನೆ. ಈಗ ಬದಲಾವಣೆ ಮಾಡಿದರೆ, ಇನ್ನೂ ಆರು ತಿಂಗಳು ಅಥವಾ ಎಂಟು ತಿಂಗಳಾಗಲಿಲ್ಲ,—ಇದು ಹತ್ತು ವರ್ಷ ಆಗಬೇಕೆಂದು ಈ ಮಸೂದೆಯಲ್ಲಿ ಮಾಡಿದ್ದೀರಿ—ಇದು ನಾಳೆ ಪಾಸಾದರೆ ಏನು ಪರಿಣಾಮವಾಗುತ್ತದೆಂದು ಯೋಚಿಸಬೇಕು. ವಿನಾ ಕಾರಣ ಜನರ ಹಕ್ಕುಬಾಧ್ಯತೆಗಳನ್ನು ಗಮನಿಸದೆ, ಅವರ ಸ್ಥಿತಿಗತಿಗಳನ್ನು ಯೋಚನೆ ಮಾಡದೆ, ಕಷ್ಟಸುಖಗಳನ್ನು ಯೋಚನೆ ಮಾಡದೆ ಐದರಿಂದ ಹತ್ತು ವರ್ಷ ಎಂದು ಮಾಡುವುದು ಧರ್ಮವೆ, ಸರಿಯೆ ಎಂದು ಕೇಳುತ್ತೇನೆ. ಒಂದು ವೇಳೆ ಮಾಡಿ, ಹತ್ತು ವರ್ಷವಲ್ಲದಿದ್ದರೆ 20 ವರ್ಷ ಮಾಡಿ, ಒಬ್ಬರಿಗೆ ಸಹಾಯ ಮಾಡಬೇಕೆಂದು ಮಾಡುವುದು ನ್ಯಾಯವಾದ ವಿಷಯವಾದರೂ ಇದರಿಂದ ಇನ್ನೊಬ್ಬರಿಗೆ ಯಾವರೀತಿ ಅನಾನುಕೂಲವಾಗುತ್ತದೆ ಎಂಬುದನ್ನು ಯೋಚನೆ ಮಾಡದೆ ಮಾಡಬಾರದು. ಏಕೆಂದರೆ ನಾವು ಜಮೀನ್‌ದಾರರಿಗೂ ಗೇಣೀದಾರರಿಗೂ ಇಬ್ಬರಿಗೂ ಶಾಸನ ಮಾಡುತ್ತೇವೆ. ಗೇಣೀದಾರರು ಮಾತ್ರ ನಮ್ಮ ಪ್ರಜೆಗಳು, ಜಮೀನ್‌ದಾರರು ಅಲ್ಲ ಎಂದು ಹೇಳುವಹಾಗಿಲ್ಲ. ಉಭಯತ್ರರ ಹಿತವನ್ನೂ ಕಾಪಾಡಿ ಶಾಸನ ಮಾಡಬೇಕು. ಹೀಗಿರುವಾಗ ಹತ್ತು ವರ್ಷ ಎಂದು ಏಕೆ ಮಾಡಿದರೆಂಬುದು ಅರ್ಥವಾಗುತ್ತಿಲ್ಲ. ಅವರೂ ಕಾರಣವನ್ನು ಈ ಮಸೂದೆಯಲ್ಲಿ ನಮೂದು ಮಾಡಿಲ್ಲ. ಹಿಂದೆ ಐದು ವರ್ಷ ಇರಬೇಕೆಂದು ಚರ್ಚೆ ಮಾಡಿದ ಕಾಲದಲ್ಲಿ ಇದು ಬಹಳ ಚರ್ಚೆಯಾಗಿದೆ. ನಮ್ಮ ದೇಶಕ್ಕೆ ಐದು ವರ್ಷವೇ ಸಾಕೆಂದು ಈ ಸಭೆಯ ಸದಸ್ಯರು ಒಪ್ಪಿ ತೀರ್ಮಾನ ಮಾಡಿದರು. ಐದು ವರ್ಷವಾದ ಮೇಲೆ ಇದರ ಅನುಭವವನ್ನು ತೆಗೆದುಕೊಂಡು, ಐದು ವರ್ಷ ಬಂದಿದ್ದರಿಂದ ಇಂಥಿಂಥ ಗೇಣಿದಾರರಿಗೆ ಇಂಥಿಂಥ ತೊಂದರೆಗಳಾಗಿವೆ ಎಂಬುದನ್ನು ಸರ್ಕಾರದವರು ಈ ಸಭೆಯ ಮತ್ತು ದೇಶದ ಮುಂದಿಟ್ಟಿದ್ದರೆ ಆಗ ಹತ್ತು ವರ್ಷ ಮಾಡಿ ಎಂದು ನಾವು ಹೇಳಬಹುದಾಗಿತ್ತು. ಐದು ವರ್ಷದ ಅವಧಿಯೇ ಪೂರೈಸಿಲ್ಲ, ಒಂದು ವರ್ಷಕೂಡ ಆಗಿಲ್ಲ. ಆದರೂ ಈಗ ಹತ್ತು ವರ್ಷ ಆಗಬೇಕೆಂದು ಈ ಮಸೂದೆಯಲ್ಲಿ ತಿದ್ದುಪಡಿ ತಂದಿರುವುದಕ್ಕೆ ಈ ಹೊತ್ತು ನಾವು ಒಪ್ಪಿಗೆ ಕೊಟ್ಟರೆ ಇನ್ನಾರು ತಿಂಗಳಲ್ಲಿ ಇದನ್ನು ಇಪ್ಪತ್ತು ವರ್ಷ ಮಾಡುವುದಕ್ಕೆ ತಿದ್ದುಪಡಿ ತರುವುದಿಲ್ಲವೆಂದು ಹೇಗೆ ನಂಬುವುದು ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಒಪ್ಪಿದರೆ ಅದೂ ಆಗುತ್ತದೆ.

Sri H. M. CHANNABASAPPA.—Therefore, we must have a lot of reason for it. We must have sufficient grounds for it. This change in the period must be warranted by grave situation which would otherwise put the tenant into a lot of trouble. What is the trouble that the tenant has been put to? ಈಗ ಟೆನೆಂಟುಗಳಿಗೆ ಯಾವರೀತಿ ತೊಂದರೆಯಾಯಿತೆಂಬುದು ಅರ್ಥವಾಗಿಲ್ಲ. I would very much like the Hon'ble Minister to explain the difficulties arising in the case of five-year period as contemplated in the earlier Bill. ಐದು ವರ್ಷ ಎಂಬುದನ್ನು ಹತ್ತು ವರ್ಷ ಎಂದು ಮಾಡಿರುವುದು ನ್ಯಾಯವೂ ಅಲ್ಲ, ಧರ್ಮವೂ ಅಲ್ಲ. ಹೀಗೆ ಮಾಡುವುದಕ್ಕೆ ತಕ್ಕ ಕಾರಣಗಳೂ ಈ ಸಭೆಯ ಮುಂದೆ ಕೊಡಲ್ಪಟ್ಟಿಲ್ಲ. ಇನ್ನುಮುಂದೆ ಕೊಟ್ಟರೆ ನೋಡೋಣ. ಅದು ಸಮರ್ಪಕವಾಗಿದೆಯೆಂದು ಮನಸ್ಸಿಗೆ ಒಪ್ಪಿಗೆಯಾದರೆ 20 ವರ್ಷ ಬೇಕಾದರೂ ಮಾಡೋಣ. ಶಾಸನವನ್ನು ನಮಗಾಗಿ ಮಾಡುತ್ತಿಲ್ಲ, ತಮಗಾಗಿಯೂ ಅಲ್ಲ, ದೇಶಕ್ಕಾಗಿ ಮಾಡುತ್ತಿದ್ದೇವೆ.

ಹೀಗೆ ಹತ್ತು ವರ್ಷ ಎಂದು ಮಾಡಿದ್ದರಿಂದ ಇನ್ನೇನು ತೊಂದರೆಯೆಂದರೆ, ಒಬ್ಬ ರೈತ ಐದುವರ್ಷ ಸಾಗುವಳಿ ಮಾಡಿದ್ದರೆ ಅವನನ್ನು unprotected tenant ಎಂದು ಮಾಡುತ್ತೀರಿ. 1952ನೆಯ ಇಸವಿಯ ಶಾಸನದ ಪ್ರಕಾರ ಒಬ್ಬ ಮನುಷ್ಯ ಸಾಗುವಳಿಮಾಡಿ ಐದು ವರ್ಷಕ್ಕೆ ಗೇಣಿಗೆ ತೆಗೆದುಕೊಂಡಿದ್ದರೆ, ಅದು ಕಳೆಯುವುದರೊಳಗೇ ಅವನು unprotected tenant ಆಗುತ್ತಾನೆ.

Mr. SPEAKER.—That is defined in the provision of the Act.

Sri H. M. CHANNABASAPPA.—I am speaking of only the protected tenant. You have created a new tenant called the unprotected tenant. Whoever cultivated the land for a period of five years is deemed under this Act as an unprotected tenant. That unprotected tenant would have been a tenant otherwise. Therefore, you have created a new type of tenant called the unprotected tenant and conferred upon him certain privileges here. Protected tenantಗೆ ಯಾವ ಅಧಿಕಾರವಿರುತ್ತದೆ ಜಮೀನು ಕೊಂಡುಕೊಳ್ಳುವುದಕ್ಕೆ ಆ ಅಧಿಕಾರ tenant-at-willಗೆ ಇರುವುದಕ್ಕೆ ಬದಲು ಅವನನ್ನು unprotected tenant ಎಂದು ಮಾಡಿ ಅವನಿಗೆ ಜಮೀನು ಕೊಂಡುಕೊಳ್ಳುವ ಅಧಿಕಾರವನ್ನು ಕಲ್ಪನೆ ಮಾಡಿದರೆ. . .

Sri Kadidal MANJAPPA.—Sir, the distinction that the Hon'ble Member is trying to make between a non-protected tenant and a tenant-at-will is not proper. Here a distinction is made between a non-protected tenant and a protected tenant. A non-protected tenant is a tenant who is other than a protected tenant. Here a protected tenant has been defined. All others are unprotected tenants. My friend is trying to draw a distinction between non-protected tenants and tenants-at-will. A tenant-at-will is always a non-protected tenant.

Sri H. M. CHANNABASAPPA.—Very cleverly worded. I do not understand.

Sri D. DEVARAJ URS.—Sir, under section 31-A, a non-protected tenant is defined as follows:

> "Non-protected tenants—for purposes of this Chapter, a tenant shall be deemed to be a non-protected tenant in respect of any land if he is not a protected tenant in respect of such land and, had held such land continuously for a period of not less than five years."

So, this qualification that a tenant should have held a land for at least five years when he becomes a non-protected tenant—it is distinct from any other ordinary tenant. The Hon'ble Minister was saying that every other tenant is a non-protected tenant. According to this definition, he is not correct.

Sri Kadidal MANJAPPA.—This category of non-protected tenant may also include a tenant-at-will.

Sri D. DEVARAJ URS.—The non-protected tenant has been conferred certain rights along with the protected tenant while purchasing the land, whereas the tenant-at-will is given a different kind of protection. For the purposes of this Act, these two classes of men do not come together.

Sri Kadidal MANJAPPA.—It is a question of interpretation. I do not want to enter into the argument. But my lawyer friends can understand between the distinction. A non-protected tenant can be called a tenant-at-will in spite of cultivating the land for a period of not less than five years.

Sri H. M. CHANNABASAPPA.—According to the Tenancy Act of 1952, a tenant-at-will is a man who has got a right to cultivate for five continuous

years. Now, we will take for example that a person has taken a piece of land from a landlord in January 1954. He has a right to continue to be a tenant for a continuous period of five years. So in 1959 he will automatically become an unprotected tenant. Under this section, he will have a right to purchase the land from his landlord.

Now, Sir, I ask, was it the intention at the time we made the law in 1953 ? No. We never wanted to confer the right on a tenant-at-will that even before the period of five years, he should get the land. You are bringing a legislation and conferring a right which we never wanted to confer. I suppose, I have made myself very clear. So that is about the amendment regarding the period and also conferring the right on the unprotected tenant. We will now go to the amendment of section 12.

ಅಮಲ್ದಾರರು immediate officer. ಜನರಿಗೆ ಏನಾದರೂ ತೊಂದರೆ ಬಂದರೆ ತಕ್ಷಣ ಸ್ಥಳೀಯ ಅಧಿಕಾರಿಗಳಲ್ಲಿ ನಿವೇದನೆಮಾಡಿಕೊಂಡು ಪರಿಹಾರ ಪಡೆಯಬಹುದು, ಜಮೀನ್ದಾರರಾಗಲಿ ಗೇಣೀದಾರರಾಗಲಿ ಇವರಲ್ಲಿ ಸುಲಭವಾಗಿ ಹೋಗಬಹುದೆಂದು ಹಿಂದೆ ತೀರ್ಮಾನಮಾಡಿದರು. ಅಮಲ್ದಾರರ ತೀರ್ಮಾನದಮೇಲೆ ಅಸಿಸ್ಟೆಂಟ್ ಕಮೀಷನರಿಗೆ ಅಪೀಲು ಇರತಕ್ಕದ್ದೆಂದು ಮಾಡಿದರು. ಇದರಮೇಲೆ ಬಹಳ ಚರ್ಚೆಯಾಯಿತು. ಈ ಸಣ್ಣ ಪುಟ್ಟ ವಿಷಯಗಳು ರೈತರ ದೃಷ್ಟಿಯಲ್ಲಿ ಬಹಳ ಮುಖ್ಯ. ನಮ್ಮ ದೃಷ್ಟಿಯಲ್ಲಿ ಪ್ರಾಮುಖ್ಯವಲ್ಲದಿದ್ದರೂ ಅವರಿಗೆ ಮುಖ್ಯ. ಪ್ರತಿಯೊಂದು ಸಣ್ಣ ವಿಷಯಕ್ಕೂ ಕಾನೂನು ಮಾಡುವುದಕ್ಕಾಗುವುದಿಲ್ಲ. ಒಂದು ಸ್ಥಳದಲ್ಲಿ ಒಬ್ಬನು ಗೇಣೀದಾರನಾಗಿದ್ದಾನೆಯೋ ಇಲ್ಲವೋ ಎಂಬುದನ್ನು ಡೆಪ್ಯುಟೀ ಕಮೀಷನರು ಬರಿಯ ಕಾಗದದ ಮೇಲೆ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಅನೇಕ ವಿಷಯಗಳನ್ನೂ ಸ್ಥಳೀಯ ವಿದ್ಯಮಾನಗಳನ್ನೂ ನೋಡಿಕೊಂಡು, ಅಲ್ಲಿ ಯಾರ ಮಾತನ್ನು ನಂಬಬಹುದು, ಯಾರ ಮಾತನ್ನು ಬಿಡಬಹುದು ಎಂಬುದನ್ನೆಲ್ಲಾ ವಿಮರ್ಶಿಸಿ ತೀರ್ಮಾನಕ್ಕೆ ಬರಬೇಕಾಗಿರುತ್ತದೆ. ಅಮಲ್ದಾರರಿಗೆ ಇವೆಲ್ಲವೂ ತಿಳಿದಿರುತ್ತದೆ ಇದನ್ನೆಲ್ಲಾ ಯೋಚಿಸಿ ಹಿಂದೆ, ಅಮಲ್ದಾರರಿಗೆ ಈ ಅಧಿಕಾರವನ್ನು ಕೊಡಬೇಕು ; ಅವರಮೇಲೆ ಅಪೀಲು ಅಧಿಕಾರವನ್ನು ಅಸಿಸ್ಟೆಂಟ್ ಕಮೀಷನರಿಗೆ ಕೊಡಬಹುದು ಎಂದು ಮಾಡಲಾಗಿತ್ತು. ಈಗ ಇದ್ದಕ್ಕಿದ್ದ ಹಾಗೆಯೇ ಅಮಲ್ದಾರರ ಮೇಲೆ ಏನು ಅಪನಂಬಿಕೆ ಬಂತೋ ಏನೋ ಅಮಲ್ದಾರರನ್ನು ಬಿಟ್ಟು ಅಸಿಸ್ಟೆಂಟ್ ಕಮೀನರಿಗೆ ಕೊಡಲಾಗಿದೆ. I do not know why Government suddenly began to distrust the Amildar. We provided that the Amildar was the proper authority to give a proper decision in the circumstances prevailing in the taluk. ಅದು ಬಿಟ್ಟು, ಈಗ ಏನಾಗಿದೆಯೆಂದರೆ ಪ್ರತಿಯೊಂದು ವಿಷಯಕ್ಕೂ ಅಸಿಸ್ಟೆಂಟ್ ಕಮೀಷನರಲ್ಲಿ ಹೋಗಬೇಕು ಇದರಿಂದ ಜನರಿಗೆ ಎಷ್ಟು ಶ್ರಮವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಒಂದು ಸಣ್ಣ ವಿಷಯವಾಗಲಿ, ಉದಾಹರಣೆಗೆ ನಮ್ಮೂರಿನಲ್ಲಿ ಒಬ್ಬನು ತಾನು ಟೆನೆಂಟ್ ಎಂದು ಹೇಳುತ್ತಾನೆ ಜಮೀನ್ದಾರ ಅವನು ನನ್ನಲ್ಲಿ ಟೆನೆಂಟ್ ಆಗಿರಲಿಲ್ಲ, ಎಂದು ಹೇಳುತ್ತಾನೆ. ಇದು ತೀರ್ಮಾನವಾಗಬೇಕಾಗುತ್ತದೆ. ಟೆನೆಂಟ್ ಆಗಿರುವುದರಿಂದ ಅವನಲ್ಲಿ ಹಣವಿರುವುದಿಲ್ಲ, ಅವನಿಗೆ ಮನೆಯಲ್ಲಿ ತಿನ್ನಲು ಅನ್ನವೇ ಇರುವುದಿಲ್ಲದಿರುವಾಗ ಅವನು ಅಸಿಸ್ಟೆಂಟ್ ಕಮೀಷನರಿರುವ ಮೈಸೂರಿಗೆ ಬಸ್‌ಚಾರ್ಜು ಹಾಕಿಕೊಂಡು, ಕಾನೂನು ಓದಿ, ಅದರಲ್ಲಿ ಹೀಗಿದೆ, ನನಗೆ ಅನಾನುಕೂಲ ಮಾಡುತ್ತಾನೆ ಜಮೀನ್ದಾರ ಎಂದು ಅಸಿಸ್ಟೆಂಟ್ ಕಮೀಷನರಲ್ಲಿ ಅರಿಕೆ ಮಾಡಿ ಪರಿಹಾರ ಪಡೆಯಲು ಅವನಿಂದ ಸಾಧ್ಯವೇ ? ಸಾಧ್ಯವಿಲ್ಲ. ಆದುದರಿಂದ ಅಮಲ್ದಾರರಲ್ಲಿರುವ ಅಧಿಕಾರವನ್ನು ತೆಗೆದು ಸಬ್‌ಡಿವಿಜನ್ ಅಧಿಕಾರಿಗಳಿಗೆ ಹಾಕಿರುವುದು ಸರಿಯಲ್ಲ. ಹೀಗೆ ಮಾಡುವುದರಿಂದ ನಿಮ್ಮ ಉದ್ದೇಶ ಸಾಧನೆಯಾಗುವುದಿಲ್ಲವೆಂದು ವಿನಯದಿಂದ ನಿವೇದನೆ ಮಾಡುತ್ತೇನೆ.

ಇದರ ಜೊತೆಗೆ, ಡೆಪ್ಯುಟಿ ಕಮೀಷನರ್ ಎಂದಿರುವ ಕಡೆ ರೆವಿನ್ಯೂ ಕಮೀಷನರ್ ಎಂದು ತಿದ್ದುಪಡಿಮಾಡಿದೆ. ಇದರಿಂದ ಆ ರೈತ ಮೈಸೂರಿಗೆ ಹೋಗುವುದಕ್ಕೆ ಬದಲು ಬೆಂಗಳೂರು ಹತ್ತಬೇಕು ! So, let us not forget that he is a tenant who has got a right to go up to the Revenue Commissioner if it is a question of difference with the landlord. In a dispute the tenant and the landlord will have to approach the proper authority for remedy. In the case of the landlord, we need not sympathise. But what about the tenant to whom we want to give all facility and make him live a happy life ? Is this going to bring in this convenience ?

4-30 P.M.

Therefore I submit, Sir, that this provision substituting the Assistant Commissioner for the Amildar, the Deputy Commissioner for the Assistant Commissioner, the Revenue Commissioner for the Deputy Commissioner, is not well-founded and reasonable to zamindar. I feel that what has been provided for in the original Bill is sufficient and may be retained.

Now I come to the question of permissible holdings, which is one of the major changes that has been brought about in this Amendment Bill. ಒಂದು permissible holding ಎಂದರೆ 25 standard ಎಕರೆಗಳು. 25 ಸ್ಟ್ಯಾಂಡರ್ಡ್ ಎಕರೆಗಳನ್ನು ಯಾವ ರೀತಿ ನಿಗದಿಮಾಡಬೇಕೆಂದರೆ ತಾಲ್ಲೂಕಿನಲ್ಲಿ ಸರಾಸರಿ ರಾಗಿ, ಭತ್ತ, ಇವು ಎಕರೆಗೆ ಎಷ್ಟು ಬೆಳೆಯುತ್ತಾರೆ ಎಂಬುದನ್ನು ನೋಡಿಕೊಂಡು ಎಂಟು ಪಲ್ಲ ರಾಗಿ ಉತ್ಪನ್ನ ಆಗತಕ್ಕಂಥ ಖುಷ್ಕಿ ಜಮೀನೆಲ್ಲ ಒಂದು

(SRI H. M. CHANNABASAPPA.)

ಸ್ಟ್ಯಾಂಡರ್ಡ್ ಎಕರೆ, ಎಂಟು ಪಲ್ಲ ಭತ್ತ ಉತ್ಪನ್ನ ಆಗ ತಕ್ಕದ್ದೆಲ್ಲ ಒಂದು ಸ್ಟ್ಯಾಂಡರ್ಡ್ ಎಕರೆ, ಎಂದು ನಿಗದಿ ಮಾಡಬೇಕು. Clause 2-B(2)ನಲ್ಲಿ ಹೀಗೆ ಹೇಳಿದ್ದಾರೆ. "The extent of land specified for any taluk under sub-section (1) to be the standard acre in respect of dry or wet land shall be the standard acre in respect of dry garden land, or wet garden land, as the case may be, for the said taluk." ಅದೇ ರೀತಿಯಾಗಿ ಎಂಟು ಪಲ್ಲ ರಾಗಿ ಬೆಳೆಯತಕ್ಕಂಥ ಡ್ರೈ ಗಾರ್ಡನ್‌ನನ್ನು ಒಂದು standard ಎಕರೆಯೆಂದೂ ಮತ್ತು ಎಂಟು ಪಲ್ಲ ಭತ್ತ ಬೆಳೆಯತಕ್ಕಂಥ ವೆಟ್ ಗಾರ್ಡನ್‌ನನ್ನು ಒಂದು ಸ್ಟ್ಯಾಂಡರ್ಡ್ ಎಕರೆಯೆಂದೂ ಅದರಲ್ಲಿ ಪರಿಗಣಿಸಿದೆ ; wet garden ಮತ್ತು dry garden ಎನ್ನುವುದನ್ನು ಇವೊತ್ತಿನವರೆಗೆ ಎಲ್ಲಿಯೂ definitions ನಲ್ಲಿ ಕಂಡುಬರುವುದಿಲ್ಲ. Anyway it has not been defined anywhere. What exactly is in the mind of the Hon'ble Minister, I have no idea.

Sri Kadidal MANJAPPA.—I will tell you later on.

Sri H. M. CHANNABASAPPA.—If you had told us now, it would have helped the Hon'ble Members to follow the discussion very intelligently. Dry garden, wet garden ಅರ್ಥ ವಿವರಣೆಗಳು ಇಲ್ಲದೆ ಇರುವುದರಿಂದ ಅದರ ವ್ಯಾಪ್ತಿ ಎಷ್ಟರಮಟ್ಟಿಗೆ ಇದೆ ಎಂಬುದನ್ನು ನಾವು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದು ಏನಾದರೂ ಇರಲಿ. ಈ standard ಎಕರೆ ನಿಗದಿ ಮಾಡತಕ್ಕಂಥ ವಿಧಾನ ಬಹಳ defective ಆಗಿದೆ. ಒಂದು ತಾಲ್ಲೂಕಿನಲ್ಲಿ ಒಂದು ಸರಾಸರಿ ಯಾವುದಾದರೂ ನಿಗದಿಮಾಡುತ್ತೀರಿ, ಎನ್ನೋಣ. ಅದರಲ್ಲಿ ಕೆಲವರಿಗೆ 100 ಎಕರೆ ತರಕಲು ಜಮೀನು ಇರುತ್ತದೆನ್ನೋಣ. ಅದರಲ್ಲಿ ½ಪಲ್ಲ ಕೂಡ ಬೆಳೆಯುವುದಿಲ್ಲ. ಮಳೆಹೋದರೆ ಅಂತೂ ಅಲ್ಲಿ ಏನೂ ಆಗುವುದಿಲ್ಲ. ಇನ್ನೊಂದ ಕಡೆ ಸೊಗಸಾದ ಎರೆ ಭೂಮಿ ಇರುತ್ತದೆ. ಅಲ್ಲಿ ಎರಡು ಪಲ್ಲ ಬೆಳೆಯುವ ಕಡೆ ಎಂಟು ಪಲ್ಲ ಬೆಳೆಯಬಹುದು. ನಾವು ಯಾವುದಾದರೂ standard ಎಕರೆಯನ್ನು ಮೂರು ಎಕರೆ ಎಂದು ನಿಗದಿಮಾಡಿದರೆ ಆ ಬಗ್ಗೆ ಒಳ್ಳೆಯ ಭೂಮಿ ಕೊಟ್ಟರೆ ಅದರಿಂದ ಬಹಳ ಅನುಕೂಲವಾಗುತ್ತದೆ. ಇನ್ನು ಸಾಮಾನ್ಯವಾದ ಭೂಮಿ 100 ಎಕರೆ ಕೊಟ್ಟರೂ ಅದರಿಂದ ಏನೂ ಪ್ರಯೋಜನವಿಲ್ಲ. ಈ ತರಹ ಒಂದು ಅನಾನುಕೂಲವುಂಟಾಗುತ್ತದೆ. ಅಮೇಲೆ ಶ್ರೀಮಾನ್ ಎ. ಭೀಮಪ್ಪನಾಯಕ್‌ರವರು ಒಂದು ಉದಾಹರಣೆ ಕೊಟ್ಟರು. ನಾಲ್ಕು ಜನ legal heirs ಇದ್ದರೆ ಅವರು ಬೇರೆಬೇರೆ ಆದ ಪಕ್ಷದಲ್ಲಿ ಎಷ್ಟು ಜಮೀನನ್ನು ಇಟ್ಟುಕೊಳ್ಳಬಹುದೋ ಅಷ್ಟನ್ನು permissible holding for a joint family ಎಂದು ಮಾಡಿದ್ದಾರೆ. ನಾಲ್ಕು ಜನ legal heirs ಇದ್ದರೆ $25 \times 4 = 100$ standard ಎಕರೆಗಳು ಎಂದು ಮಾಡಿಕೊಳ್ಳಬಹುದು. ಅಲ್ಲಿ ಆರು ಜನ ಎಂಟು ಜನ ಇದ್ದು ಹಿಂದೂ ಸಮಾಜದಲ್ಲಿ ಎಲ್ಲರೂ ಏಕ ಕುಟುಂಬಗಳಾಗಿ ವ್ಯವಸಾಯ ಮಾಡುವ ಪದ್ಧತಿ ನಮಗೆ ಹೊಸದೇನೂ ಅಲ್ಲ. ಅದು ಬಹಳ ಕಾಲದಿಂದಲೂ ನಮ್ಮ ದೇಶದಲ್ಲಿ ಬಂದ ಪದ್ಧತಿ. ಆ ಪದ್ಧತಿ ಇದ್ದುದರಿಂದಲೇ ವ್ಯವಸಾಯ ಬಹಳ ಸಮರ್ಪಕವಾಗಿ ನಡೆಯಿತು. ಬರುತ್ತಾ ಬರುತ್ತಾ individualistic tendency ಹೆಚ್ಚಾಗಿ, ಒಬ್ಬೊಬ್ಬರು ಭಾಗಗಳಾಗಿ ತಾನೇತಾನು ವ್ಯವಸಾಯ ಮಾಡುವುದಕ್ಕೆ ಹೊರಟಿರುವುದು ವ್ಯವಸಾಯ ಹೀನಸ್ಥಿತಿಗೆ ಬರಲು ಮುಖ್ಯಕಾರಣ. ಈ ಭೂ ಸಮಸ್ಯೆ ಪದ್ಧತಿಯಲ್ಲಿ ಸುಧಾರಣೆ ಆಗಬೇಕಾದರೆ ಅದರ ಮೂಲ ಉದ್ದೇಶ ಜಮೀನು ಇಲ್ಲದ ಜನಗಳಿಗೆ ಜಮೀನನ್ನು ಕೊಡುವುದು ಮತ್ತು tenantಗಳಿಗೆ ಜಮೀನು ಹಕ್ಕನ್ನು ಕೊಡುವುದು ; ಇವೆಲ್ಲಕ್ಕಿಂತಲೂ ಮುಖ್ಯವಾದುದು ಭೂಮಿಯಿಂದ ಎಷ್ಟು ಪ್ರಮಾಣದಲ್ಲಿ ಉತ್ಪತ್ತಿ ಮಾಡಬಹುದೋ ಅಷ್ಟು ಪ್ರಮಾಣದಲ್ಲಿ ಉತ್ಪತ್ತಿ ಮಾಡಬೇಕಾಗಿದೆ. ಏಕಕುಟುಂಬಗಳು ಹೀಗೆ ಉತ್ಪತ್ತಿ ಮಾಡಿಕೊಂಡು ಹೋಗುತ್ತಿದ್ದ ಪದ್ಧತಿ ಇದ್ದರೂ ಕೂಡ ಅದನ್ನು ಬಿಡಿರಿ, ವಿಭಾಗಮಾಡಿರಿ ಎಂದು ಹೇಳುವ ಪದ್ಧತಿ ಬಂದಿದೆ. ಯಾರೂ ಕೂಡ ಒಟ್ಟು ಕುಟುಂಬದಲ್ಲಿ ಇರುವುದಿಲ್ಲ. ಅದು Human Instinct ಎಂಬುದು ತಮಗೆ ಗೊತ್ತಿದೆ. ಎಲ್ಲರೂ ಕೂಡ ಏಕಾಂಗಿಯಾಗಿ ಒಡೆದುಹೋಗಿ ಅವರವರು ವ್ಯವಸಾಯಮಾಡಿಕೊಂಡು ಹೋಗುವುದಕ್ಕೆ ಕಾರಣವಾಗುತ್ತದೆ. Co-operative farming ಕ್ರಮದಲ್ಲಿ ಏಕ ಕುಟುಂಬಗಳವರು ಕೆಲಸಮಾಡುತ್ತಿದ್ದಾರೆ. 10-15 ಜನ ಭಾಗಗಳಾಗದೆ ಒಟ್ಟಿಗೆ 50-100 ಎಕರೆಗಳನ್ನು ವ್ಯವಸಾಯಮಾಡುತ್ತಿದ್ದಾರೆ. ಹೀಗೆ ಮಾಡುತ್ತಾ ಇರುವ ವ್ಯವಸಾಯ ಬಹಳ ಉತ್ತಮ ದರ್ಜೆಯಲ್ಲಿ ನಡೆಯುತ್ತಿತ್ತು. ಈಗ ನಾವು ಮಾಡುತ್ತಾ ಇರುವ ಕಾನೂನಿನಿಂದ ಒಂದು ಕುಟುಂಬದಲ್ಲಿ ಇರತಕ್ಕಂಥವರು ಸುಖವಾಗಿ ಜಮೀನನ್ನು ಮಾಡತಕ್ಕಂಥಾದ್ದನ್ನು ತಪ್ಪಿಸಿ ನೀವು ಭಾಗವಾಗಿ ಎಂದು direct ಆಗಿ ಹೇಳದೇ ಇದ್ದರೂ indirect ಆಗಿ ತೋರಿಸಿಕೊಟ್ಟ ಹಾಗಾಯಿತು. ಒಂದು ಕುಟುಂಬದಲ್ಲಿ 5-6 ಜನರು ಇದ್ದರೆ ಭಾಗಗಳು ಆಗದೇ ಇದ್ದರೆ ಆಗ 100 standard ಎಕರೆಗಳಿಗಿಂತ ಹೆಚ್ಚಿಗೆ ಇಟ್ಟುಕೊಳ್ಳ ಕೂಡದು. ಭಾಗಗಳು ಆದರೆ 800 ಎಕರೆಗಳನ್ನು ಇಟ್ಟುಕೊಳ್ಳಬಹುದು. ಅಲ್ಲಿಗೆ ಏನಾಯಿತು? ನೀವು ಕಾನೂನು ಮಾಡುತ್ತೀರಿ. ಕಾನೂನು ತಿಳಿದುಕೊಂಡಿರುವವರು ಯಾರು ತಾನೆ ಭಾಗ ಆಗದೆ ಇರುತ್ತಾರೆ? ಅದರಲ್ಲಿರತಕ್ಕ ಈ ಲೋಪ ಬಹಳ ದೊಡ್ಡದು.

Mr. SPEAKER.—This provision can be improved. There is some force in what you say. If there is division, of course these people will be entitled to more land. If there is no division they will enjoy less of land.

Sri H. M. CHANNABASAPPA.—I am saying this for the benefit of the Hon'ble Members who form the Select Committee that this is a matter of very great importance and which has to be considered in all seriousness.

ಶ್ರೀ ಕೆ. ಪ್ರಭಾಕರ್.—ಚಿಕ್ಕ ಚಿಕ್ಕ ಸಂಸಾರ ಬೇರೆ ಹೋಗುತ್ತಾರಲ್ಲಾ ಅದನ್ನು ಯಾವ ಕಾನೂನು ಪ್ರಕಾರ ಸೇರಿಸುತ್ತೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಹಾಗೆ ಹೋಗುವುದು ಬೇರೆ ವಿಚಾರ, ಸರಕಾರದವರು ಪ್ರತಿಬಂಧಕ ನಿಯಮ ಮಾಡುವುದು ಬೇರೆ. ನಾವು

ಕಾನೂನು ಮಾಡುವಾಗ ಇಂತಹ ಲೋಪಗಳಿಗೆ ಅವಕಾಶ ಕೊಡಬಾರದು. ಸಾಧ್ಯವಾದಷ್ಟು ಒಡಗೂಡಿ ಕೆಲಸಮಾಡಬೇಕು. 25 ಎಕರೆ ಇರುವುದನ್ನು ಯಾವ ಆಧಾರದಮೇಲೆ ನಿಗದಿಮಾಡಿದ್ದೀರಿ ಎಂದು ನನಗೆ ಗೊತ್ತಾಗಲಿಲ್ಲ. ಈ ತರಹ ಕಾನೂನು ಬೇರೆ ಕಡೆಯಲ್ಲಿ ಓದಿ ನೋಡಿದ್ದರಲ್ಲಿ, 25 standard ಎಕರೆ ಕಂಡುಬರಲಿಲ್ಲ. ಆದ್ದರಿಂದ ಈ standard ಎಕರೆಗಳಿರುವುದನ್ನು ಒಂದು ಕುಟುಂಬದಲ್ಲಿ ಯಾರು ಯಾರು ಹಕ್ಕುದಾರರು ಇರುತ್ತಾರೆ ಅಂತಹ ಪ್ರತಿಯೊಬ್ಬ ಹಕ್ಕುದಾರನಿಗೂ ಕೂಡ ಒಂದೊಂದು permissible holding ಸಿಕ್ಕುವಂತೆ ವ್ಯವಸ್ಥೆ ಮಾಡತಕ್ಕಂಥಾದ್ದು ನ್ಯಾಯ, ಮತ್ತು ಧರ್ಮ, ಹೀಗೆ ಮಾಡದೆ ಹೋದ ಪಕ್ಷದಲ್ಲಿ ಅವರಿಗೆ ಅನ್ಯಾಯಮಾಡಿದಂತಾಗುತ್ತದೆ.

Sri M. MADIAH.—Clause 2-A (2) (*a*) states thus :

> "(*a*) For purposes of clause (1), the annual productive capacity per acre of any land in any taluk, shall be deemed to be the average annual gross yield per acre of such class of land in such taluk during a period of five years prior to the revenue year 1953-54."

I want to know information from the Hon'ble Minister concerned . . . .

Mr. SPEAKER.—Now, this is not the time for asking information. When one member is on his legs, another member cannot put questions and elicit information. After he closes his speech, the Hon'ble Member can elicit information.

Sri M. MADIAH.—Permissible holdings ನಿಗದಿಮಾಡಬೇಕಾದರೆ, 1953-54ನೇ ಸಾಲಿನಿಂದ ಹಿಂದೆ ಐದು ವರ್ಷಗಳಲ್ಲಿ ಸರಾಸರಿ ಎಷ್ಟು ಇತ್ತು ಎಂಬುದು ರೆವೆನ್ಯೂ ಕಮಿಷನರಿಂದ ಸಿಕ್ಕುತ್ತದೆಯೇ? If that is made available, it will be helpful to the Hon'ble Members of this House to offer their remarks on the clauses of the Bill.

Mr. SPEAKER.—As I said, that information can be furnished after the member closes his speech.

Sri M. MADIAH.—I made a request through the Chair to the Hon'ble Minister to furnish the information. ಒಂದು ಎಕರೆಯಲ್ಲಿ ಒಂದು ಪಲ್ಲ ಬೆಳೆಯಬಹುದು. 1953-54ನೇ ಸಾಲಿನಿಂದ ಹಿಂದೆ ಐದು ವರ್ಷಗಳಲ್ಲಿ ಸರಾಸರಿ ಎಷ್ಟು ಬೆಳೆದಿದ್ದಾರೆಂದು ಕೊಟ್ಟರೆ ಬಹಳ ಸಹಾಯವಾಗುತ್ತದೆ.

Mr. SPEAKER.—In the meanwhile, if Hon'ble Members rise and ask for information like this, the Hon'ble Member will not be able to continue or close his speech. Therefore, after he closes his speech, information may be sought.

Sri M. MADIAH.—I do not want to make my speech now.

Mr. SPEAKER.—The Hon'ble Member has not caught my point. Suppose one of the Hon'ble Members is on his legs and suppose another member rises in the meanwhile and asks for information from the Minister and if ten members rise like that, the other member will lose the continuity of his thought and he will not be able to proved with his speech.

Sri H. M. CHANNABASAPPA.—Now I come to chapter II-A "Special privileges of protected tenants and certain non-protected tenants" ನಾನು ಆಗಲೇ ಹೇಳಿದಹಾಗೆ ಹಿಂದಿನ ಕಾನೂನಿನಲ್ಲಿ "Tenants-at-will" ಯಾರು ಆಗಿದ್ದಾರೋ, ಅತನು automatic ಆಗಿ ಈ ಕಾನೂನು ಪ್ರಕಾರ Non-protected tenant ಆಗುತ್ತಾನೆ. ಆದ್ದರಿಂದ ನಾವು ಹಿಂದಿನ ಕಾನೂನಿನ ಪ್ರಕಾರ ಯಾರು ಯಾರಿಗೆ ಜಮೀನನ್ನು ಕೊಟ್ಟಿದ್ದೇವೋ ಅವರಿಗೆ ಜಮೀನ್ದಾರರಿಂದ ಭೂಮಿಯನ್ನು ಕೊಂಡುಕೊಳ್ಳುವ ಹಕ್ಕು ಇದ್ದೇ ಇರುತ್ತದೆ. ಈಗ ನೀವು ಹೊಸದಾಗಿ ಸೇರಿಸಿದರೆ, it will amount to taking the landlord unawares and it would not be correct nor just. Therefore the provision should be suitably amended or removed. ಈ non-protected tenant ಆದವನಿಗೆ ಈಗ ಹಕ್ಕು ಕೊಡುವುದು ಸರಿಯಲ್ಲ. ಅದನ್ನು ತೆಗೆದುಹಾಕುವುದು ಸೂಕ್ತ.

ಶ್ರೀ ಗೋಪಾಲಗೌಡ.—Non-protected tenantನ್ನು ಏನು ಮಾಡೋಣ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವನಿಗೆ 50 ಎಕರೆ ಜಮೀನನ್ನು ಸರ್ಕಾರ ಸಾಲವಾಗಿ ಕೊಟ್ಟು ಕೆಲಸ ಮಾಡಿಸಲಿ. We are making here a legislation to improve the relationship between the tenant and the landlord and in that we shall not create any new rights of tenants or confer any new rights and privileges on the tenant. ಇದರಲ್ಲಿ ಮೂಲಭೂತವಾದ ಪ್ರಶ್ನೆ ಏನೆಂದರೆ ಈಗ ನೀವು tenantಗೂ ಮತ್ತು landlordಗೂ ಇರತಕ್ಕಂಥ ಸಂಬಂಧವನ್ನು ಉತ್ತಮಪಡಿಸಬೇಕೆಂಬ ಉದ್ದೇಶದಿಂದ ಈ ಕಾನೂನನ್ನು ಮಾಡುವಾಗ ಇದರಲ್ಲಿ ಟೆನೆಂಟ್‌ಗೆ ಹೊಸಹೊಸ ಹಕ್ಕುಗಳನ್ನು ಕಲ್ಪನೆಮಾಡತಕ್ಕದ್ದು ಸರಿಯೇ ಎಂಬುದು ಯೋಚನೆಮಾಡಬೇಕಾದ ವಿಷಯ ಇದರಲ್ಲಿ. "Right of protected tenant to purchase land" ಇದೆ. ಹಿಂದೆ ಇದರ procedure ಏನಿತ್ತು ಅಂದರೆ ಜಮೀನುದಾರರು ಜಮೀನನ್ನು ಮಾರಾಟ ಮಾಡಬೇಕಾದರೆ ಅದನ್ನು 12 ವರ್ಷಗಳವರೆಗೆ ರೈತ ಜಮೀನು ಮಾಡಿದಂತಹವನಿಗೆ ಕೊಡಬೇಕು ಎಂದಿತ್ತು. ಅವನು ಬೇಡವೆಂದು ಹೇಳಿದಮೇಲೆ ಇನ್ನೊಬ್ಬನಿಗೆ ನಾವು ಕೊಡುವುದು ಸೂಕ್ತವೆಂದು ಅದನ್ನು provide ಮಾಡಿದ್ದೇವೆ.

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಅದಕ್ಕೊಂದು procedure ಗೊತ್ತು ಮಾಡಿದ್ದೀರಿ. ಅವನು ಕಾಗದ ಬರೆದು ತಿಳಿಸಬೇಕೆಂದಿದೆ. ಈ ಕಾಗದ ಅವನಿಗೆ ತಲುಪಿ, ಅವನು ಆ ದರಕ್ಕೆ ತನಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ, ದರ ಜಾಸ್ತಿಯಾಯಿತು ಎಂದು ಹೇಳಿದರೆ ಆಗ ಅಮಲ್ದಾರರ ಹತ್ತಿರ ಹೋಗಿ ಹೇಳಿಕೊಳ್ಳಬೇಕು ಎಂದಿದೆ. ಇಷ್ಟೆಲ್ಲಾ procedureನ್ನು ಅತ ಅನುಸರಿಸುವುದು ಬಹಳ ಕಷ್ಟ. ಹಳ್ಳಿಯಲ್ಲಿರತಕ್ಕ ಒಬ್ಬ ರೈತ ಜಮೀನ್ದಾರನಿಗೆ ಒಂದು ರಿಜಿಸ್ಟರ್ಡ್ ಕಾಗದವನ್ನು ಕೊಟ್ಟು ಅವನಿಂದ ಇನ್ನೊಂದು ರಿಜಿಸ್ಟರ್ಡ್ ಕಾಗದವನ್ನು ನಿರೀಕ್ಷಣೆ ಮಾಡುವುದು ಕಾರ್ಯತಃ ಆಗತಕ್ಕ ಕಾರ್ಯಕ್ರಮವಲ್ಲವೆಂದು ನಾನು ಆಗಲೇ ಹೇಳಿದೆ. ರೈತನಿಗೆ ನೀವು ಅನುಕೂಲ ಮಾಡಿಕೊಡುವ ಇಷ್ಟವುಳ್ಳವರಾಗಿದ್ದಲ್ಲಿ, ಅವನಿಗೆ ಎಷ್ಟು ಸುಲಭವಾಗಿ ಆಗುವಂತೆ ಮಾಡಬೇಕೋ ' ಅದನ್ನು ಮಾಡಬೇಕು. ಹಾಗಿಲ್ಲದೆ ಇಲ್ಲಿ ಹೇಳಿರುವ ರೀತ್ಯಾ ರಕ್ಷಿಸಲ್ಪಟ್ಟ ಷಿಕ್ಮಿಯೊಬ್ಬನು 9 ವರ್ಷಗಳವರೆಗಿದ್ದು, ಆಮೇಲೆ ಆತನು ಜಮೀದ್ದಾರನನ್ನು 'ನೀನು ನಿನ್ನ ಜಮೀನನ್ನು ಇಷ್ಟು ರೂಪಾಯಿಗಳಿಗೆ ಕೊಡುತ್ತೀಯಾ' ಎಂದು ರಿಜಿಸ್ಟರ್ಡ್ ಕಾಗದವೊಂದನ್ನು ಬರೆಯಬೇಕು ; ಅದಕ್ಕೆ ಅವನಿಂದ ರುಜು ತೆಗೆದುಕೊಂಡು ಆಮೇಲೆ ಅವನಿಂದ ಕಾಗಧವನ್ನು ನಿರೀಕ್ಷಿಸಬೇಕು ಎಂದು ಹೇಳಿದೆ. ಇಷ್ಟರಲ್ಲೇ ಉಭಯತ್ರರೂ ಸರಿಮಾಡಿಕೊಂಡರೆ ಪರವಾಯಿಲ್ಲ, ಇಲ್ಲದಿದ್ದರೆ ಸಬ್‌ಡಿವಿಜನ್ ಆಫೀಸರ ಹತ್ತಿರ ಹೋಗಿ ಆ ಜಮೀನಿನ ಬೆಲೆಯನ್ನು ಇತ್ಯರ್ಥ ಮಾಡಿಕೊಂಡುಕೊಳ್ಳಬೇಕೆಂದಿದೆ. ಹೀಗೆಲ್ಲಾ ಮಾಡಿದರೆ ಆ ಜಮೀನಿಗೆ ಬೆಲೆಯಿರುತ್ತದೆಯೇ ?

(ಒಬ್ಬ ಸದಸ್ಯರು.—ಮಕ್ಕಳ ಮದುವೆಗೆ ಸಾಕಷ್ಟು ದುಡ್ಡಿಲ್ಲದೆ ಹೋಗುತ್ತದೆ!)

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೂ ಇದಕ್ಕೂ ವ್ಯತ್ಯಾಸವಿದೆ ಇಷ್ಟನ್ನು ತಾವು ಯೋಚನೆ ಮಾಡದೆ ಹೋದರೆ ನಾನೇನು ಹೇಳಲಿ. ಏಕೆಂದರೆ ಇದಕ್ಕೆ ನೀವು ಗೊತ್ತು ಮಾಡಿರುವ procedure ಏನು? ಇದು ಇತ್ಯರ್ಥವಾಗಬೇಕಾದರೆ ಸಬ್-ಡಿವಿಜನ್ ಆಫೀಸರಿಗೆ ಹೋಗಬೇಕೆಂದಿದೆ. ಸಬ್-ಡಿವಿಜನ್ ಆಫೀಸರಿಗೆ ಹೋಯಿತೆಂದರೆ, ಅವರು ಯಥಾವಿಧಿಯಾಗಿ 'forwarded to the Amildar to draw up a mahajar' ಎಂದು ಕಳುಹಿಸುತ್ತಾರೆ. ಅಲ್ಲಿಂದ ಅದು ಮಾಮೂಲಾಗಿ ಷೇಕ್‌ದಾರರಿಗೆ ಹೋದರೆ ಏನಾಗುತ್ತದೆಂದು ನಾನು ಹೇಳಬೇಕಾಗಿಲ್ಲ. ಈ ಪ್ರಕಾರ ನೀವು ಜಮೀನಿನ ಬೆಲೆಯನ್ನು ಗೊತ್ತು ಮಾಡುವುದಕ್ಕೆ ಸೂಚಿಸಿರುವ procedure ಯಾವ ವಿಧದಲ್ಲೂ ಕೊನೆಯಲ್ಲಿ ಸ್ಥಳೀಯ ಅಧಿಕಾರಿಗಳನ್ನು ಬಿಟ್ಟು ಹೋಗುವುದಿಲ್ಲ. ಪರಿಣಾಮದಲ್ಲಿ ಏನಾಗುತ್ತದೆಂದರೆ, ಊರಿನ ಹತ್ತು ಜನ ಸೇರಿಕೊಂಡು ಒಂದು ಜಮೀನಿನ ಬೆಲೆ ಇಷ್ಟು ಎಂದು ನಿರ್ಧರ ಮಾಡುತ್ತಾರೆ. ಅದರಲ್ಲೂ ಊರಿನಲ್ಲಿ ಜಮೀನ್ದಾರರಿಗೆ ಆಗದಿರುವವರು ಯಾರಾದರೂ ಇದ್ದರೆ ಆ ಜಮೀದ್ದಾರರ ಕಷ್ಟ ಹೇಳಬೇಕಾಗಿಲ್ಲ. ಒಟ್ಟಿನಲ್ಲಿ ಒಂದು ಅಂಶ ನಿರ್ವಿವಾದವಾದದ್ದು. ಕೊಂಡುಕೊಳ್ಳುವವನೂ ಒಬ್ಬನೇ, ಹಣವನ್ನು ತೀರ್ಮಾನ ಮಾಡತಕ್ಕವನೂ ಒಬ್ಬನೇ ಆಗಿರುವಾಗ ಆ ಜಮೀನಿಗೆ ಏನೂ ಬೆಲೆ ಬರುವುದಿಲ್ಲ. ಅಂದ ಮೇಲೆ ಜಮೀದ್ದಾರನೊಬ್ಬನನ್ನು ಯಾವ ಸ್ಥಾನಕ್ಕಿಳಿಸಿದಿರಿ ! ಆತನನ್ನು ಎರಡು ಕೈಯನ್ನೂ ಕಟ್ಟಿಕೊಂಡು ಕೋರ್ಟಿನ ಮುಂದೆನಿಲ್ಲುವ ಅಪರಾಧಿಯೊಬ್ಬನ ಸ್ಥಾನಕ್ಕೆ ಇಳಿಸಿದಿರಿ ! ಗೇಣಿದಾರ ಆ ಜಮೀನನ್ನು ಕೊಂಡುಕೊಳ್ಳಬೇಕೆಂಬುದು ನಿಮ್ಮ ಉದ್ದೇಶ. ಹಾಗಿದ್ದಲ್ಲಿ ಇವೊತ್ತೇ ಒಂದು ಕಾನೂನು ಮಾಡಿಬಿಡಿ—'ಈ ಲಾಗಾಯಿತು ಒಂದು ವರುಷದೊಳಗೆ 1951 ನೆಯ ಏಪ್ರಿಲ್ ಒಂದನೆಯ ತಾರೀಖಿನೊಳಗೆ ಯಾವ ಯಾವ ಜಮೀನನ್ನು ಜಮೀನ್ದಾರನು ತಾನೇ ಉಳುವುದಿಲ್ಲವೋ ಅಂಥ ಜಮೀನ್ದಾರನನ್ನು ಸರ್ಕಾರವು recognise ಮಾಡುವುದಿಲ್ಲ' ಎಂದು. ಆಗ್ಗೆ ಅದರ ಪರಿಣಾಮವೇನಾಗುತ್ತದೆ ? ಯಾರಯಾರ ಹತ್ತಿರ ಜಮೀನಿರುತ್ತದೋ ಅವನದೇ ಆಗುತ್ತದೆ. ಇಲ್ಲದಿದ್ದರೆ 50 ಎಕರೆಗೆ ಮೇಲ್ಪಟ್ಟು ಜಮೀನಿರಕೂಡದೆಂದು ವಿಧಾಯಕ ಮಾಡಿ. ಆಗ ಹೆಚ್ಚಿಗೆ ಜಮೀನಿರತಕ್ಕವರೆಲ್ಲರೂ ಮಾರಲೇಬೇಕು. ಅದೂ ಯಾರಿಗೆ ಮಾರುತ್ತಾರೆ ? ಮತ್ತೆ ಹೆಚ್ಚಿಗೆ ಜಮೀನಿರುವವರಿಗೆ ಮಾರುವುದಕ್ಕಂತೂ ಆಗುವುದೇ ಇಲ್ಲ.. ಆತನು ಮಾರಬೇಕಾದರೆ ಯಾರಾದರೊಬ್ಬ ಜಮೀನಿಲ್ಲದಿರುವವನನ್ನೇ ಹುಡುಕಿಕೊಂಡು ಹೋಗಲೇಬೇಕಾಗುತ್ತದೆ. ಅದರಲ್ಲೂ ಗೇಣಿದಾರನು ಹತ್ತಿರದಲ್ಲೇ ಇರುತ್ತಾನೆ. ಆಗ್ಗೆ, ಸಾಲವಾದರೂ ಕೊಟ್ಟು 30-40 ವರ್ಷದರ್ಥಾದರೂ ಕೊಡಲೆಂದು ಹೇಳಿ ಅವನಿಗೆ ಮಾರಿ ಮಧ್ಯಸ್ಥಿಕೆ ಮಾಡಿಕೊಳ್ಳತಕ್ಕ ಸಂದರ್ಭವಿದೆ. ಹೀಗೆ ವಿರಸವಿಲ್ಲದ ರೀತಿಯಲ್ಲಿ ಬಲೋದ್ವಂಧನವಿಲ್ಲದ ರೀತಿಯಲ್ಲಿ ಈ ಸಮಸ್ಯೆ ಪರ್ಯವಸಾನವಾಗುತ್ತದೆ. ಆದ್ದರಿಂದ ತಾವೇ ನಿದ್ದರೂ ಒಂದು ceiling ಲಿಮಿಟ್ಟನ್ನ ಗೊತ್ತು ಮಾಡಿ ಒಂದೆರಡು ವರ್ಷಗಳ ಅವಕಾಶಕೊಡಿ. ಆ ನಿಗದಿಯ ಕಾಲದಲ್ಲಿ ಪ್ರತಿಯೊಬ್ಬ ಜಮೀನ್ದಾರನೂ ವಿಧಿಯಿಲ್ಲದೆ ಯಾವುದಾದರೊಂದು ರೀತಿಯಲ್ಲಿ ಜಮೀನಿಲ್ಲದವನಿಗೆ ಮಾರಲೇಬೇಕಾಗುತ್ತದೆ. ಇಂಥ ಸುಲಭ ರೀತಿಯನ್ನು ಕಂಡುಹಿಡಿಯುವುದನ್ನು ಬಿಟ್ಟು, ಈ ಕಾನೂನು ತಂದು protected tenant, non-protected tenant ಎಂದು ಮಾಡಿ ಆತನಿಗೆ ಜಮೀನನ್ನು ಕೊಡಿಸಬೇಕಾದರೆ ಬಹಳ ಕಷ್ಟ. ಆದ್ದರಿಂದ ನನ್ನ ಸೂಚನೆಯನ್ನು ತಾವು ದಯವಿಟ್ಟು ಯೋಚನೆ ಮಾಡಿ. ಯಾವ ಉದ್ದೇಶವನ್ನು ಸಾಧನೆ ಮಾಡಬೇಕೆಂದಿದ್ದೀರೋ ಅದನ್ನು ಸುಲಭವಾಗಿ ಸಾಧನೆ ಮಾಡುವ ಮಾರ್ಗ ಇದು. ನೀವು ಮಾಡಿರುವುದು ಒಂದು ಕಠಿಣವಾದ procedure ; ಜನರನ್ನು ಅನೇಕ ಕಷ್ಟಗಳಿಗೆ ಗುರಿಮಾಡತಕ್ಕದ್ದು, ಅಷ್ಟೆ.

ಆಮೇಲೆ, ಇಲ್ಲಿ ಇನ್ನೊಂದು anomaly ಇದೆ. ಅದನ್ನು ನೀವು ಹೇಗೆ explain ಮಾಡುತ್ತೀರೋ ನೋಡಬೇಕು. 31ನೆಯ (B) ಸೆಕ್ಷನ್ನಿನಲ್ಲಿ ಮೊದಲನೆಯ ಭಾಗದಲ್ಲಿ ಹೇಳಿದೆ :

> "The Assistant Commissioner after giving the parties an opportunity of being heard and after making an inquiry, shall determine the market value of the land. The protected tenant, or the non-protected tenant, as the case may be, shall thereupon deposit the amount of market value so determined with the Assistant Commissioner within such time not exceeding three months as the Assistant Commissioner directs. Such amount shall be deposited with the Assistant Commissioner . . . ."

ಎಂದು. ಈ ಪ್ರಕಾರ ಮೂರು ತಿಂಗಳೊಳಗೆ ಹಣವನ್ನು ಡಿಪಾಸಿಟ್ ಮಾಡಬೇಕೆಂದು ಹೇಳಿದೆ. ಆದರೆ ಅದರ ಕೆಳಗೆಯೇ (b) ಭಾಗದಲ್ಲಿ,

> "in such number of instalments not exceeding six and at such intervals during a period not exceeding ten years and on or before such dates as may be fixed by the Assistant Commissioner in each case."

ಎಂದು ಹೇಳಿದ್ದಾರೆ. ಅಲ್ಲಿಗೆ ಮೂರು ತಿಂಗಳೆಂದು ಹೇಳಿರುವುದು ಸರಿಯೇ ಅಥವಾ 10 ವರ್ಷ ಎಂದು ಹೇಳಿರುವುದು ಸರಿಯೇ? ಇದರ ವಿವರಣೆಯನ್ನು ಮಾನ್ಯ ಸಚಿವರು ಈ ಮಸೂದೆಯನ್ನು ಸಭೆಯ ಮುಂದಿಟ್ಟಾಗ ತಿಳಿಸಲಿಲ್ಲ. ಮೂರು ತಿಂಗಳೆಂದು ಅವರು ಹೇಳಿದ್ದರೆ ಏನಾದರೂ ಒಪ್ಪಿಕೊಳ್ಳಬಹುದಾಗಿತ್ತು. ಹತ್ತು ವರ್ಷವೆಂದರೆ ಏನಾಗುತ್ತದೋ ಹೇಳಬೇಕಾಗಿಯೇ ಇಲ್ಲ. ಏಕೆಂದರೆ, ಈ ಹೊತ್ತು ಸಬ್-ಡಿವಿಜನ್ ಆಫೀಸರು ಒಂದು ಮೊಬಲಗನ್ನು ನಿಗದಿ ಮಾಡಬಹುದು. ಜಮೀನ್ದಾರ ತನ್ನ ಹಣ ಪಡೆಯಲಿಕ್ಕೆ 10 ವರ್ಷಗಳವರೆಗೂ ಕಾದುಕೊಂಡಿರಬೇಕು. ಕೊನೆಗೇನಾದರೂ ಆ ಜಮೀನು garden land ಎಂದು ಹೇಳಿಬಿಟ್ಟರೆ ಅದೂ ಮುಗಿದೇ ಹೋಯಿತು. I really fail to understand what exactly is at the back of the mind of the friends who have thought of this Bill.

Sri Kadidal MANJAPPA.—The correct thing is at the back of their mind.

Sri H. M. CHANNABASAPPA.—This is one track thinking. ಜಮೀನ್ದಾರನನ್ನು ಬಿಟ್ಟೇಬಿಟ್ಟರು! ಇದರ ಜೊತೆಗೆ ನಮ್ಮ ದೇಶದಲ್ಲಿ ಜಮೀನಿನ ಮೇಲೆ ಬೇಕಾದಷ್ಟು ಜನ ಸಾಲಸೋಲಗಳನ್ನು ಮಾಡಿಕೊಂಡಿದ್ದಾರೆ. ಸಾಲ ತೆಗೆದುಕೊಂಡಿರುವವರ ಗತಿಯೇನು? ಸಾಲ ಕೊಟ್ಟವರ ಗತಿಯೇನು? ಯಾವೊಬ್ಬ ಮನುಷ್ಯನೂ ಜಮೀನನ್ನು ಮಾರಬೇಕಾದರೆ ಸಾಮಾನ್ಯವಾದ ಸಣ್ಣಪುಟ್ಟ ಕಾರಣಗಳಿಗಾಗಿ ಮಾರುವುದಕ್ಕೆ ಹೋಗುವುದಿಲ್ಲ. ಮಕ್ಕಳ ಮದುವೆಗೋ, ಅಥವಾ ಪೂರ್ವಾದಿ ಸಾಲಗಳನ್ನು ತೀರಿಸಲೋ ಅಥವಾ ಇನ್ನಾವ ಮಹತ್ತರವಾದ ಕಾರಣಗಳಿಗಾಗಿಯೋ ಮಾರುತ್ತಾನೆ ಅಷ್ಟೇ. ಎಷ್ಟೋ ಜನ ಹೊಟ್ಟೆಗೆ ಇಲ್ಲದೆ ಹಸಿದುಕೊಂಡಾದರೂ ಇದ್ದಾರು ಜಮೀನನ್ನು ಮಾರುವುದಕ್ಕೆ ಹೋಗುವುದಿಲ್ಲ. ಹೀಗಿರುವಾಗ ನಾಳೆ ಮದುವೆ ಮಾಡಬೇಕೆಂದು ಹೇಳಿ ಜಮೀನು ಮಾರಿ ದುಡ್ಡು ಕೊಡಿಸಬೇಕೆಂದು ಹೇಳಿದರೆ ಸಬ್-ಡಿವಿಜನ್ ಆಫೀಸರು ಬೆಲೆ ನಿಗದಿಮಾಡಿ ಹಣ ಕೊಡಿಸುವುದಕ್ಕಾಗುತ್ತದೆಯೇ? These are all important problems we are going to face if the Bill is going to become law tomorrow. These are things which have to be seriously thought over particularly by my Hon'ble friend Sri Kadidal Manjappa. ಆದ್ದರಿಂದ ಮೊದಲು ಮುಖ್ಯವಾಗಿ ಈ ಮಸೂದೆಗೆ necessity ಏನಿದೆಯೆಂಬುದನ್ನು ಯೋಚನೆಮಾಡಬೇಕು. ಆಮೇಲೆ, ಜಮೀನನ್ನು ಮಾರುವವರಿಗೆ ಏನಾದರೂ credit ಕೊಡುವುದಕ್ಕೆ ಏರ್ಪಾಡು ಮಾಡಿದ್ದೀರಾ? ಅದೂ ಇಲ್ಲ! ಈಗ ತಮಗೇ ಗೊತ್ತಿದೆ. ಒಬ್ಬ ಮನುಷ್ಯ ಎಷ್ಟೇ ದೊಡ್ಡ ಮನುಷ್ಯನಾಗಿರಲಿ ಅವನು ತನ್ನಲ್ಲಿರುವ ಒಂದು ಸಾಮಾನನ್ನು ಅಡವಿಟ್ಟ ಹೊರತು ಹತ್ತು ರೂಪಾಯಿ ಕೂಡ ಸಿಕ್ಕುವುದಿಲ್ಲ. ಹೀಗಿರುವಾಗ, ಈ ರೀತಿ ತಾವು ಮಾಡಿದರೆ, ಜಮೀನ್ದಾರನು ಮಾಡಬೇಕಾದ ಮದುವೆ ಮುಂತಾದ ಯಾವ ಕಾರ್ಯಗಳೂ ತಟ್ಟನೆ ನಿಂತು ಹೋಗುತ್ತವೆ. ಇದು ನ್ಯಾಯವೇ, ಧರ್ಮವೇ ಎಂಬುದನ್ನು ತಾವು ಯೋಚನೆಮಾಡಬೇಕಾದದ್ದು ಅವಶ್ಯಕ. ಜೊತೆಗೆ ಹತ್ತು ವರ್ಷಗಳ ಕಾಲ ಬೇರೆ ಕೊಟ್ಟಿದ್ದೀರಿ. ಅಂದರೆ, ಈ ಜಮೀನಿನ ಮೇಲೆ ಸಾಲ ಕೊಟ್ಟಿರುವವನ ಗತಿಯೇನಾಗುತ್ತದೆಂಬು ಯೋಚನೆಮಾಡಿದ್ದೀರಾ? ನಾವು ಯೋಚನೆ ಮಾಡುವಾಗ ಬರೀ ದೊಡ್ಡ ಜಮೀನ್ದಾರರುಗಳನ್ನೇ ಯೋಚನೆಮಾಡಕೂಡದು. ನಮ್ಮ ದೇಶದಲ್ಲಿ 10 ಎಕರೆಗಳಿರುವ ಜಮೀನ್ದಾರರೂ ಇದ್ದಾರೆ. ಏನೋ ಕಾರಣಾಂತರದಿಂದ ಅವರೂ ವಾರ ಗುತ್ತಿಗೆ ಕೊಟ್ಟುಕೊಂಡಿರಬಹುದು. ನಿಮ್ಮ ದೃಷ್ಟಿಯಲ್ಲಿ 500 ಎಕರೆಗಳಿರುವವರು ಮಾತ್ರ ಇರಕೂಡದು. ಆದ್ದರಿಂದ ದೇಶದಲ್ಲಿ ಒಂದು ಕಾನೂನು ಮಾಡುವಾಗ ಬರೀ ದೊಡ್ಡ ಜಮೀನ್ದಾರರಿಗೆ ಮಾತ್ರ ಅನ್ವಯಿಸುತ್ತದೆಂದು ತಿಳಿದುಕೊಂಡು ಮಾಡುವುದು ಸರಿಯಲ್ಲ. ಎಷ್ಟೋ ಸಣ್ಣಪುಟ್ಟ ಜಮೀನ್ದಾರರು, ಸಾಲ ಸೋಲಗಳನ್ನು ಜಮೀನಿನ ಮೇಲೆ ಮಾಡಿಕೊಂಡಿರುವವರೂ ಇದ್ದಾರೆ. ಅವರ ವಿಷಯದಲ್ಲಿ ಒಂದು ವಾದ ಹೇಳಬಹುದು, ಅವರಿಗೆ protected tenants ಇರುವುದಿಲ್ಲವೆಂದು ವಾದಿಸಬಹುದು. ಅದು ಸರಿಯಲ್ಲ. ಕೆಲವು ಹೆಂಗಸರು, ವಿಧವೆಯರು ಪರ್ಮಿಸಿಬಲ್ ಹೋಲ್ಡಿಂಗ್ ಒಳಗೇ 15-20 ಎಕರೆಗಳನ್ನು ಇಟ್ಟುಕೊಂಡಿರುತ್ತಾರೆ. ಅವರು ಸ್ವಂತ ವ್ಯವಸಾಯ ಮಾಡುವುದಕ್ಕಾಗುವುದಿಲ್ಲ. ಅವರು ಮಕ್ಕಳು ಮೆಜಾರಿಟಿಗೆ ಬರುವವರೆಗೂ 10-12 ವರ್ಷಗಳು tenantsಗೆ ಕೊಡಬೇಕಾಗಿರುತ್ತದೆ. ಅಂಥವರು ಮಕ್ಕಳಿಗೆ ಮದುವೆ, ಮುಂಜಿ ಮಾಡಬೇಕಾದರೆ ಏನು ಮಾಡಬೇಕು?

Mr. SPEAKER.—Is the Hon'ble Member going to take some more time?

Sri H. M. CHANNABASAPPA.—Yes, Sir.

Mr. SPEAKER.—Now the House will rise and meet tomorrow at 12 NOON.

The House adjourned for the day at Five of the Clock to meet again at Twelve of the Clock on Thursday the 3rd March 1955.

WD 4508—GPB—550—11-4-55